ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ

ಸಂಪುಟ 27 ಸಂಚಿಕೆ 10 ಮಾರ್ಚ್ 06, 2005 ಬೆಲೆ ರೂ. 3.00



ವಿಮಾ ನೌಕರರ ರಾಷ್ಟ್ರ ಸಮ್ಮೇಳನ

ಶಾಂತಿ-ಸಮೃದ್ಧಿಯ ಮುಂಜಾವಿಗಾಗಿ ಹೋರಾಡುವ ಸಂಕಲ್ಪ



ಜೆಡಿ(ಎಸ್) -ಕಾಂಗ್ರೆಸ್ ವಾಗ್ಯುದ್ಧದಲ್ಲಿ ಜನ ಕಾಳಜಿ ಎಲ್ಲಿ?

ಆದ್ಯತೆ ತಪ್ಪಿದ ಸರ್ಕಾರಗಳು ಹಾದಿ ತಪ್ಪಿದ ನಕ್ಸಲೀಯರು

- ಲಂಕೇಶ್ ಪತ್ರಿಕೆ : ಜಗಳ ನ್ಯಾಯವೇ ?
- ನಕ್ಸಲೀಯರ ಹತ್ಯೆ : ಅತಿರಂಜಿತ ವರದಿಗಳು
- ಉಳ್ಳವರಿಗೆ ಉತ್ಸವ - ಬಡವರಿಗೆ ಕಣ್ಣೀರು
- ಉಡುಪಿ : ಅಮಾಯಕಳ ಬಲಿ ತೆಗೆದುಕೊಂಡ ಭಜರಂಗ ದಳ



ಸಾಧನೆಯತ್ತ ಸಾನಿಯಾ..

ಕರ್ನಾಟಕ ರಾಜ್ಯದ ಆರ್ಥಿಕ-ಸಾಮಾಜಿಕ ಪರಿಸ್ಥಿತಿ

ಜನರ ಸಂಕಷ್ಟಗಳು ಮತ್ತು ಆಳುವವರ ನೀತಿಗಳು

ಜನತೆಯ ಸಂಕಷ್ಟಗಳಿಗೆ ಕಾರಣವಾಗಿರುವ ಆರ್ಥಿಕ-ಸಾಮಾಜಿಕ ನೀತಿಗಳ ಕುರಿತಂತೆ ಸಿಪಿಐ(ಎಂ) ರಾಜ್ಯ ಸಮ್ಮೇಳನದ ವಿಶ್ಲೇಷಣೆ.

ಮುಂದುವರೆದದ್ದು...

ಅದೇ ರೀತಿ ವಿವಿಧ ರೀತಿಯ ಹೊಸ ವಾದಗಳನ್ನು - Identity ಅಥವಾ ವಿಭಿನ್ನತೆಯ ರಾಜಕೀಯ - (Dalit Identity, Womens Identity, Caste Identity, Regional Identity ದಲಿತ ವಿಭಿನ್ನತೆ, ಮಹಿಳೆಯ ವಿಭಿನ್ನತೆ, ಭಾಷಾ ವಿಭಿನ್ನತೆ, ಪ್ರಾದೇಶಿಕ ವಿಭಿನ್ನತೆ, ವಿವಿಧ ಜಾತಿಗಳ ವಿಭಿನ್ನತೆ, ಬುಡುಕಟ್ಟುಗಳ ವಿಭಿನ್ನತೆ) ಇಂತಹ ವಾದಗಳನ್ನು ವರ್ಗವೈರುಧ್ಯಗಳ, ಶೋಷಿತ ವರ್ಗದ ಐಕ್ಯತೆ ವಿರುದ್ಧವಾಗಿ ಹುಟ್ಟುಹಾಕಲಾಗುತ್ತಿದೆ. ಜನತೆಯಲ್ಲಿ ಎಚ್ಚರಗೊಳ್ಳುತ್ತಿರುವ ವೈಚಾರಿಕತೆ, ವೈಜ್ಞಾನಿಕ ಚಿಂತನೆ, ಎಡಪಂಥೀಯ ಒಲವನ್ನು ದಿಕ್ಕುತಪ್ಪಿಸಲು ನಮ್ಮ ಸಮಾಜ, ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ, ವಿಶ್ಲೇಷಿಸುವುದಕ್ಕೆ, ಇಲ್ಲಿಯ ಸಮಸ್ಯೆಗಳ ಪರಿಹಾರಕ್ಕೆ ಇಲ್ಲಿಯೇ ಸಿದ್ಧಾಂತಗಳನ್ನು ರೂಪಿಸಿಕೊಳ್ಳಬೇಕು. ಪರಿಹಾರಗಳನ್ನು ಹುಡುಕಿಕೊಳ್ಳಬೇಕು. ವಿದೇಶಿ ಸಿದ್ಧಾಂತಗಳನ್ನು ಅವಲಂಬಿಸ ಬಾರದು ಎನ್ನುವ ದೇಸೀವಾದ, ಬುಡಕಟ್ಟುಗಳ ಜೀವನಪದ್ಧತಿಯೇ ಶ್ರೇಷ್ಠ -ಆಧುನಿಕ ಬದುಕಿನ ಸಮಸ್ಯೆಗಳಿಗೆ ಬುಡಕಟ್ಟುಗಳ ಜೀವನ ವಿಧಾನಕ್ಕೆ ಮರಳುವುದು ಅಥವಾ ಆ ಜೀವನ ವಿಧಾನದಲ್ಲಿ ಪರಿಹಾರ ಕಂಡುಕೊಳ್ಳುವುದು ಒಳ್ಳೆಯದು ಎನ್ನುವ ಉಪಸಂಸ್ಕೃತಿವಾದ, ಆಧುನಿಕ ವಿಚಾರಗಳ ಪಾಶ್ಚಿಮಾತ್ಯ ವಿಚಾರಗಳ ಆಕ್ರಮಣದ ಪರಿಣಾಮವಾಗಿ ನಮ್ಮ ಪರಂಪರೆಯ ವಿಚಾರಗಳು ಮರೆತುಹೋಗುತ್ತಿವೆ, ಕಡೆಗಣಿಸಲಾಗುತ್ತಿವೆ ಎಂಬ ವಿಸ್ಮೃತಿ ಸಿದ್ಧಾಂತ, ಸಮಾಜ ಇಂದು ಆಧುನಿಕ ಹಂತವನ್ನು ದಾಟಿ ಆಧುನಿಕೋತ್ತರ ಯುಗದಲ್ಲಿದೆ, ಈ ಕಾಲದಲ್ಲಿ ಆಧುನಿಕ ಕಾಲದ ವಿಚಾರಗಳಾದ ಬಂಡವಾಳಶಾಹಿ, ಸಮಾಜವಾದ ಮೊದಲಾದ ವಿಚಾರಗಳು, ವಿಶ್ಲೇಷಣೆಗಳ ವಿಧಾನಗಳು ಅರ್ಥ ಕಳೆದುಕೊಂಡಿವೆ ಎನ್ನುವ ಆಧುನಿಕೋತ್ತರವಾದ-ಇತ್ಯಾದಿ ವಾದಗಳನ್ನು ಸೃಷ್ಟಿಸಲಾಗುತ್ತಿದೆ. ಈ ಬಗ್ಗೆ ಸಂಗಾತಿಗಳು ನಿರಂತರವಾಗಿ ಎಚ್ಚರವಹಿಸಬೇಕಾದ ಹಾಗೂ ಸೈದ್ಧಾಂತಿಕ ತಿಳುವಳಿಕೆಯನ್ನು ಬೆಳೆಸಿಕೊಳ್ಳಬೇಕಾದ ಅಗತ್ಯವಿದೆ.

ದಲಿತರಲ್ಲಿ ಶಿಕ್ಷಣದ ಬಯಕೆ ಹೆಚ್ಚುತ್ತಿದ್ದಂತೆ ವಿವಿಧ ಶೈಕ್ಷಣಿಕ ಕೋರ್ಸುಗಳಿಗೆ, ದಲಿತರ ಪ್ರವೇಶದ ಪ್ರಮಾಣ ಕಡಿಮೆಯಾಗಿದೆ. 10ನೆ ಯ ತರಗತಿ, ಪಿಯುಸಿಗಳಲ್ಲಿ ಪ್ರವೇಶದ ಪ್ರಮಾಣವೂ ಕಡಿಮೆಯಾಗಿದೆ. ಉದ್ಯೋಗಗಳ ಸೀಮಿತ ಅವಕಾಶಗಳಿಂದ ದಲಿತರ ನಡುವೆಯೇ ಒಳ ಮೀಸಲಾತಿಗಾಗಿ ಸಂಘರ್ಷ ಬೆಳೆಯುತ್ತಿದೆ. ದಲಿತ ಚಳುವಳಿಯಲ್ಲಿದ್ದ ಪ್ರಜಾಸತ್ತಾತ್ಮಕ ಆಶಯಗಳನ್ನು ಮೂಲೆಗುಂಪು ಮಾಡಿ ದಲಿತ ಮಠಗಳನ್ನು ಬೆಳೆಸುವ ದಲಿತ ಪ್ರತ್ಯೇಕತೆಯನ್ನು, ಆಕ್ರಾಮಕ್ರಮಣಶೀಲತೆಯನ್ನು ಬೆಳೆಸುವ ಪ್ರವೃತ್ತಿ ಬೆಳೆಯುತ್ತಿದೆ.

ಮಹಿಳೆಯರು ಶಿಕ್ಷಣದಲ್ಲಿ ಹೆಚ್ಚು ತೇರ್ಗಡೆಯಾಗುತ್ತಿದ್ದಂತೆ, ಹೆಚ್ಚು ಉತ್ತಮ ಅಂಕಗಳನ್ನು ಪಡೆಯುತ್ತಿದ್ದಂತೆ ಹಿಂದೆ ತಮಗೆ ಪ್ರವೇಶವಿಲ್ಲದ ಕ್ಷೇತ್ರಗಳಲ್ಲಿ ಪ್ರವೇಶ ಪಡೆಯುತ್ತಿದ್ದಂತೆಯೇ ಜಾಗತೀಕರಣದ ಪರಿಣಾಮದಿಂದ ಶಿಕ್ಷಣದಲ್ಲಿ ಮಹಿಳೆಯರ ಪ್ರವೇಶಾವಕಾಶಗಳು, ಉದ್ಯೋಗವಕಾಶಗಳು ಕಡಿಮೆಯಾಗುತ್ತಿವೆ. ಮಹಿಳೆಯರ ವರದಕ್ಷಿಣೆ ಹತ್ಯೆಗಳ ಹೆಚ್ಚಳದ ಜೊತೆಗೆ ಭ್ರೂಣ ಹತ್ಯೆಗಳು ಪ್ರಧಾನವಾಗಿ ನಗರ ಪ್ರದೇಶಗಳಲ್ಲಿ ಹೆಚ್ಚಾಗುತ್ತಿರುವುದರ ವಿರುದ್ಧ ಸೆಣಸಬೇಕಾಗಿದೆ. 0-6 ವಯಸ್ಸಿನ ಮಕ್ಕಳಲ್ಲಿ ಲಿಂಗ ಪ್ರಮಾಣ ಕರ್ನಾಟಕದಲ್ಲಿ 1991 ರಲ್ಲಿ 960 ಇದ್ದದ್ದು 949 ಕ್ಕಿಳಿದಿದೆ. ನಗರಗಳಲ್ಲಿ ಅದು 951 ಇದ್ದದ್ದು 939 ಕ್ಕಿಳಿದಿದೆ. ಅರೆ ಪಾಳೆಯಗಾರಿ ವ್ಯವಸ್ಥೆಯ ಪ್ರದೇಶವಾದ ಹೈದರಾಬಾದ್ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ನಗರಗಳಲ್ಲಿ ಲಿಂಗ ಪ್ರಮಾಣ ಬಹಳ ಕಡಿಮೆ ಇದೆ. ಬಾಗಲಕೋಟೆ ಜಿಲ್ಲೆಯ ನಗರ ಪ್ರದೇಶಗಳಲ್ಲಿ 910, ಬಿಜಾಪುರ ನಗರ ಪ್ರದೇಶದಲ್ಲಿ 914, ಬೆಳಗಾಂ ಗುಲ್ಬರ್ಗಾಗಳಲ್ಲಿ 920, ಬೀದರ್‌ನಲ್ಲಿ 923 ಗರಿಷ್ಠ ಪ್ರಮಾಣ ಕೊಡಗು ಜಿಲ್ಲೆಯಲ್ಲಿ 977 ಮತ್ತು ಅಲ್ಲಿಯ ನಗರ ಪ್ರದೇಶದಲ್ಲಿ 986 ಇದೆ. ಕರಾವಳಿ ಹಾಗೂ ಘಟ್ಟದ ಜಿಲ್ಲೆಗಳಲ್ಲಿ ತೃಪ್ತಿಕರ ಮಟ್ಟದಲ್ಲಿದೆ. ಬೆಂಗಳೂರು ನಗರದಲ್ಲಿ ಕೇವಲ 940 ಇರುವುದು ಶೋಚನೀಯ. ಅದೇ ಸಮಯದಲ್ಲಿ ಮಹಿಳೆಯರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕೂಡ ಹೆಚ್ಚು ಎಚ್ಚರ ಹಾಗೂ ತಮ್ಮ ಹಕ್ಕುಗಳಿಗಾಗಿ ಸಂಘಟಿತರಾಗುವ ಪ್ರಜ್ಞೆ ಮೂಡುತ್ತಿದೆ. ಸ್ತ್ರೀಶಕ್ತಿ ಮತ್ತು ಸ್ವಸಹಾಯ ಗುಂಪುಗಳು ಕೂಡ ಈ ಪ್ರಕ್ರಿಯೆಗೆ ತಮ್ಮ ಕಾಣಿಕೆ ನೀಡಿವೆ.



ಪ್ರಾದೇಶಿಕ ಅಸಮಾನತೆ

17ನೇಯ ರಾಜ್ಯ ಸಮ್ಮೇಳನದ ವರದಿಯಲ್ಲಿ ವಿವರಿಸಿದಂತೆ ಜಾಗತೀಕರಣ, ಖಾಸಗೀಕರಣದ ಹಿನ್ನೆಲೆಯಲ್ಲಿ ಯೋಜನೆಗಳ ಮೂಲಕ ಅಭಿವೃದ್ಧಿ, ಸರ್ಕಾರದ ಮಧ್ಯ ಪ್ರವೇಶದ ಮೂಲಕ ಪ್ರಾದೇಶಿಕ ಅಸಮಾನತೆಗಳನ್ನು ತೊಡೆಯಲು ಅಷ್ಟಿಷ್ಟಾದರೂ ಪ್ರಯತ್ನಗಳು ಇಲ್ಲವಾಗುತ್ತಿರುವ ಹಿನ್ನೆಲೆಯಲ್ಲಿ, ಉತ್ತರ ಕರ್ನಾಟಕದ ಕೈಗಾರಿಕಾ ನೆಲೆಗಳಲ್ಲಿ ಕೈಗಾರಿಕೆಗಳು ರೋಗಗ್ರಸ್ತವಾಗಿ, ಬೆಂಗಳೂರು ಐಟಿ, ಬಿಟಿ ನಗರವಾಗಿ ಬೆಳವಣಿಗೆ ಹೊಂದುತ್ತಿರುವ ಹಿನ್ನೆಲೆಯಲ್ಲಿ ಪ್ರಾದೇಶಿಕ ಅಸಮಾನತೆಯ ಪ್ರಶ್ನೆ ಮೇಲೇಳುತ್ತಿದೆ. ಈ ಅವಧಿಯಲ್ಲಿ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ, ಹೈದರಾಬಾದ್ ಕರ್ನಾಟಕದ ಹಿಂದುಳಿಯುವಿಕೆ, ಅಲ್ಲಿಯ ಶಿಕ್ಷಿತರಿಗೆ ಉದ್ಯೋಗದ ಪ್ರಶ್ನೆಗಳ ಮೇಲೆ ಪ್ರತ್ಯೇಕ ರಾಜ್ಯಗಳನ್ನು ಕೇಳುವವರೆಗೂ ಒತ್ತಾಯಿಸುವ ಪ್ರತ್ಯೇಕವಾದಿ ಚಳುವಳಿಗಳು ಬೆಳೆದುಬಂದವು. ಎಸ್.ಎಂ.ಕೃಷ್ಣ ಸರ್ಕಾರ ಈ ಹಿನ್ನೆಲೆಯಲ್ಲಿ ಅರ್ಥಶಾಸ್ತ್ರಜ್ಞ ಡಿ.ಎಂ. ನಂಜುಂಡಪ್ಪ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರ ಸಮಿತಿಯನ್ನು ನೇಮಿಸಿತು. ಈ ಸಮಿತಿ ಒಂದು ಸಾವಿರ ಪುಟಗಳ ಒಂದು ಬೃಹತ್ ವರದಿಯನ್ನು ಸಲ್ಲಿಸಿತು. ಅಂದಿನಿಂದ ನಂಜುಂಡಪ್ಪ ವರದಿಯನ್ನು ತಿರುಗಿಸಿ ನೋಡದವರೂ ಕೂಡಾ ನಂಜುಂಡಪ್ಪ ವರದಿ ಜಾರಿಗೆ ಬರಬೇಕು ಎಂದು ಕೇಳುತ್ತಿದ್ದಾರೆ. ಇತ್ತ ಸರ್ಕಾರದ ಕಡೆಯಿಂದ ನಂಜುಂಡಪ್ಪ ವರದಿ ಜಾರಿ ಮಾಡಿಯೇ ತೀರುತ್ತೇವೆ ಎಂದು ವಾಗ್ದಾನಗಳನ್ನು ಮಾಡುತ್ತಾ ರಾಜಕೀಯ ಪಗಡೆಯಾಟದ ದಾಳವನ್ನಾಗಿ ಮಾಡಿಕೊಳ್ಳಲಾಗಿದೆ.

ನಮ್ಮ ಪಕ್ಷದ ನೇತೃತ್ವದಲ್ಲಿ ಗುಲ್ಬರ್ಗಾದಲ್ಲಿ ಸಂಘಟಿಸಲಾದ ವಿಚಾರಸಂಕಿರಣದಲ್ಲಿ ವಿಶ್ಲೇಷಿಸಿದಂತೆ ನಂಜುಂಡಪ್ಪ ವರದಿ ವಿವಿಧ ಪ್ರದೇಶಗಳ ಹಿಂದುಳಿಯುವಿಕೆಯನ್ನು ಅಳೆಯಲು ಒಂದು ಮಾನದಂಡವನ್ನು ರೂಪಿಸಿದೆ. ಅದರ ಆಧಾರದ ಮೇಲೆ ತಾಲ್ಲೂಕನ್ನು ಒಂದು ಘಟಕವನ್ನಾಗಿಸಿಕೊಂಡು ವಿವಿಧ ತಾಲ್ಲೂಕುಗಳ ಹಿಂದುಳಿಯುವಿಕೆಯ ಪ್ರಮಾಣವನ್ನು ವಾಸ್ತವಕ್ಕೆ ಹತ್ತಿರವಾಗಿ ಅಳತೆ ಮಾಡಿದೆ. ಆದರೆ ಹಿಂದುಳಿಕೆಯ ಕಾರಣಗಳ ಬಗ್ಗೆ ಯಾವ ಅನ್ವೇಷಣೆಯನ್ನೂ ನಡೆಸಿಲ್ಲ. ಸರ್ಕಾರದಲ್ಲಿ ಅವುಗಳ ಮೇಲೆ ಅವಲಂಬಿತವಾದ ಸಾಮಾಜಿಕ ವಿಜ್ಞಾನದ ಸಂಸ್ಥೆಗಳಲ್ಲಿ, ಬಂಡವಾಳಶಾಹಿ ಬುದ್ಧಿಜೀವಿ ಹಾಗೂ ಅಧಿಕಾರಶಾಹಿ ವಲಯದಲ್ಲಿ ಜಾಗತೀಕರಣ ಪರವಾದ ವಾತಾವರಣವನ್ನೆದುರಿಸಿ ಸತ್ಯ ಸಂಗತಿಯನ್ನು ಶೋಧಿಸುವಲ್ಲಿ ಹಿಂದೇಟು ಹಾಕಿದೆ. ಆದ್ದರಿಂದಲೇ ಈ ವರದಿ ಸೂಚಿಸಿದ ಪರಿಹಾರಗಳು, ಮಾಡಿದ ಶಿಫಾರಸುಗಳು ಅವೈಜ್ಞಾನಿಕವಾಗಿವೆ ಮತ್ತು ಸತ್ಯಕ್ಕೆ ದೂರವಾಗಿವೆ. ಜಾಗತೀಕರಣ ಪರ ವಲಯವನ್ನು ತೃಪ್ತಿ ಪಡಿಸುವ ದೃಷ್ಟಿಯಿಂದ ನೀಡಿದ ಅರೆಬರೆ ಶಿಫಾರಸ್ಸುಗಳಾಗಿವೆ. ರಾಜ್ಯ ಸಾರ್ವಜನಿಕ ವಲಯವನ್ನು ಮಾರಿ ಪ್ರಾದೇಶಿಕ ಅಭಿವೃದ್ಧಿಗೆ ಹಣಕಾಸು ಹೊಂದಿಸಿಕೊಳ್ಳಬೇಕೆಂಬ ಶಿಫಾರಸ್ಸಿನಂತೆ ಹಲವು ಶಿಫಾರಸುಗಳು ಜನ ವಿರೋಧಿಯಾಗಿವೆ ಎಂದು ವಿಶ್ಲೇಷಿಸಿತು.

ಕರ್ನಾಟಕದಲ್ಲಿ ಜಾರಿಗೆ ತರಲಾದ ಭೂಸುಧಾರಣೆಯಲ್ಲಿನ ಅಸಮಾನತೆ ಮತ್ತು ವಿಕೃತ ರೂಪವೇ ಪ್ರಾದೇಶಿಕ ಅಸಮಾನತೆಗೆ ಕಾರಣ. ಬಂಡವಾಳಶಾಹಿ ಅಭಿವೃದ್ಧಿಯ ಪಥ ಮತ್ತು ಅದರ ಮುಂದುವರಿದ ಭಾಗವಾದ ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳು ಅರೆ ಪಾಳೆಯಗಾರಿ ಸಂಬಂಧದ ಮೇಲೆ ಹೇರಿಕೊಂಡಿರುವುದರಿಂದ ಅಸಮಾನತೆ ಮತ್ತಷ್ಟು ವಿಷಮಿಸಿದೆ. ಈ ಪ್ರಾದೇಶಿಕ ಅಸಮಾನತೆಯ ನಿವಾರಣೆಗೆ ನಮ್ಮ ಪಕ್ಷ ಮುಂದಿಟ್ಟಿರುವ ಪರ್ಯಾಯ ಇಂತಿದೆ.

- ತೀವ್ರ ಭೂಸುಧಾರಣೆ ಹಾಗೂ ಪಾಳೆಯಗಾರಿ ಸಂಬಂಧಗಳ ತೊಡೆಯುವಿಕೆ
- ಕೂಲಿಕಾರರಿಗೆ ಉದ್ಯೋಗ ಖಾತರಿ ಮತ್ತು ಕನಿಷ್ಠ ವೇತನ
- ಯೋಜಿತ ಅಭಿವೃದ್ಧಿ ಮತ್ತು ಸರ್ಕಾರಿ ಬಂಡವಾಳ ಹೂಡಿಕೆಯಲ್ಲಿ ತೀವ್ರ ಏರಿಕೆ.
- ಕೇಂದ್ರ - ರಾಜ್ಯ ಸಂಬಂಧಗಳಲ್ಲಿ ಸುಧಾರಣೆ - ರಾಜ್ಯಗಳಿಗೆ ಹೆಚ್ಚು ಸ್ವಾಯತ್ತತೆ ಮತ್ತು ಸಂಪನ್ಮೂಲಗಳು
- ಆಡಳಿತ ವಿಕೇಂದ್ರೀಕರಣ, ಪಂಚಾಯತ ರಾಜ್ಯದ ಮೂಲಕ ಜನರ ನಿಯಂತ್ರಣದಲ್ಲಿ ಅಭಿವೃದ್ಧಿ ಯೋಜನೆಗಳ, ಭೂಸುಧಾರಣೆಗಳ ಜಾರಿ.
- ಜನಬಳಕೆಯ ವಸ್ತುಗಳ ಸಾಮೂಹಿಕ ಉತ್ಪಾದನೆಗೆ ಅನುಕೂಲವಾದ ಕೈಗಾರಿಕಾ ಬೆಳವಣಿಗೆ-ಕುಶಲಕರ್ಮಿಗಳ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ
- ನೀರಾವರಿ, ಜಲನಿರ್ವಹಣೆ, ಕೃಷಿ ಸಂಶೋಧನೆ ಬಗ್ಗೆ ತರಬೇತಿ ಮತ್ತು ವಿಸ್ತರಣೆ
- ಸಂಪೂರ್ಣ ಸಾಕ್ಷರತೆ, ಸಾರ್ವತ್ರಿಕ ಶಿಕ್ಷಣ, ಉದ್ಯೋಗಾಧಾರಿತ ಕೃಷಿ ಮತ್ತು ತಾಂತ್ರಿಕ ಶಿಕ್ಷಣದ ಪಾಲಿಟೆಕ್ನಿಕ್‌ಗಳು

ಮುಂದುವರಿಯುವುದು

ಸಿಪಿಐ(ಎಂ) ನ 18ನೇ ಮಹಾಧಿವೇಶನದ ಕರಡು ಕನ್ನಡದಲ್ಲಿಯೂ ಲಭ್ಯವಿದೆ. ತಿದ್ದುಪಡಿ ಕಳಿಸಲು ಮಾರ್ಚ್ 15 ಅಂತಿಮ ದಿನ. ತಿದ್ದುಪಡಿ ಇಂಗ್ಲೀಷಿನಲ್ಲಿರಬೇಕು.

ವಿಳಾಸ :

Communist Party of India (Marxist)
Central Committee,
A.K.Gopalan Bhavan, 27-29,
Bhai Veersingh Marg,
New Delhi - 110001
e-mail : congress@cpim.org

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು



- **ಮಾರ್ಚ್ 5, 2005**
  ಪೇಟೆಂಟ್ ಸುಗ್ರೀವಾಜ್ಞೆಯ ವಿರುದ್ಧ ಜಂಟಿ ಸಮಾವೇಶ. ಎನ್.ಜಿ.ಓ. ಹಾಲ್, ಬೆಂಗಳೂರು. ಬೆಳಿಗ್ಗೆ 10.30 ಕ್ಕೆ - ಸಾಮೂಹಿಕ ಸಂಘಟನೆಗಳ ಕರೆ
- **ಮಾರ್ಚ್ 6-12, 2005**
  ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಜಾರಿಗೆ ಒತ್ತಾಯಿಸಿ ಪ್ರತಿಭಟನಾ ಸಪ್ತಾಹ - ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆ
- **ಮಾರ್ಚ್ 6, 2005**
  ಶೂದ್ರ ಶ್ರೀನಿವಾಸರವರ ಪುಸ್ತಕ ಬಿಡುಗಡೆ ಕಾರ್ಯಕ್ರಮ. ಯುವನಿಕಾದಲ್ಲಿ - ಬೆಂಗಳೂರು. ಬೆಳಿಗ್ಗೆ 10.45 ಕ್ಕೆ ಸಂಘಟಕರು : ಚಿಕ್ರಿ ಪ್ರತಿಷ್ಠಾನ
- **ಮಾರ್ಚ್ 8, 2005**
  ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ
- **ಮಾರ್ಚ್ 10, 2005**
  ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ರಾಜ್ಯದಾದ್ಯಂತ ಮಹಿಳೆಯರ ಬೇಡಿಕೆ ದಿನ - ಜನವಾದಿ ಮಹಿಳಾ ಸಂಘಟನೆ ಕರೆ
- **ಮಾರ್ಚ್ 12-13, 2005**
  ಕೆಲಸದ ಹಕ್ಕು ಮೂಲಭೂತ ಹಕ್ಕಿಗಾಗಿ ಅಖಿಲ ಭಾರತ ಸಮಾವೇಶ - ಕಲ್ಕತ್ತ (ಸಾಲ್ಟ್‌ಲೇಕ್ ಸ್ಟೇಡಿಯಂ) ಸಿಐಟಿಯು ಆಶ್ರಯದಲ್ಲಿ
- **ಮಾರ್ಚ್ 20, 2005**
  ಇರಾಕ್ ನೆಲದಿಂದ ಅಮೆರಿಕಾ ತೊಲಗಲಿ - 2 ವರ್ಷಗಳ ಅಮೆರಿಕಾ ಆಕ್ರಮಣ ವಿರೋಧಿಸಿ ಯುದ್ಧ ವಿರೋಧಿ ರ್‍ಯಾಲಿ


ಜೆಡಿ(ಎಸ್)-ಕಾಂಗ್ರೆಸ್ ವಾಗ್ಯುದ್ಧ-ಜನ ಕಾಳಜಿ ಎಲ್ಲಿ?

ಮೈತ್ರಿಕೂಟದ ಸರ್ಕಾರದ ಈ ಭಾಗಿದಾರರ ಜಗಳದಲ್ಲಿ ಜನರ ಪ್ರಶ್ನೆಗಳೇನಾದರೂ ಇವೆಯೇ? ಅಥವಾ ಅಧಿಕಾರ ದಾಹವೇ?

ಚುನಾವಣೆಗಳಿಗೆ ಹೋಗುವ ಮಾತನ್ನು ಪದೇ ಪದೇ ಆಡುವುದನ್ನು ಜೆಡಿ(ಎಸ್) ಮತ್ತು ಕಾಂಗ್ರೆಸ್‌ನ ನಾಯಕರು ನಿಲ್ಲಿಸಿಲ್ಲ. ಹಾಗೆ ಸದ್ಯಕ್ಕೆ ನಿಲ್ಲಿಸುವ ಲಕ್ಷಣಗಳು ಕಾಣುತ್ತಿಲ್ಲ. ಮಂಗಳೂರಿನ ಪ್ರವಾಸ ಸಂದರ್ಭದಲ್ಲಿ ಮಾಜಿ ಪ್ರಧಾನಿ ದೇವೇಗೌಡರು ಮುಖ್ಯಮಂತ್ರಿ ಧರಂಸಿಂಗ್‌ರ ಬಗ್ಗೆ, ಈ ಸರ್ಕಾರದ ಬಗ್ಗೆ ಆಡಿದರೆನ್ನಲಾದ ಅಸಹನೆ ಹಾಗೂ 'ಹಗುರ'ದ ಮಾತುಗಳಿಂದ ಆರಂಭಗೊಂಡ ಮೈತ್ರಿಕೂಟದ ಭಾಗಿಧಾರರ ಪಕ್ಷಗಳ ನಾಯಕರ ವಾಗ್ದಾಳಿ ಪ್ರತಿ ಮಾತುಗಳು ಮೇಲ್ಮಟ್ಟದ ನಾಯಕರಿಂದ - ಅದು ಈಗ ಕೆಳಗಿನವರೆಗೂ ಇಳಿಯುತ್ತಿರು ವುದು ಪ್ರಸಕ್ತ ಸಂದರ್ಭದಲ್ಲಿ ಅನಾರೋಗ್ಯದ, ಅನಪೇಕ್ಷಿತ ಬೆಳವಣಿಗೆ. ಹಿರಿ-ಕಿರಿ ನಾಯಕರು ಜಿಲ್ಲಾಮಟ್ಟಗಳಲ್ಲಿ, ತಾಲೂಕುಮಟ್ಟಗಳಲ್ಲಿ ಪತ್ರಿಕಾಗೋಷ್ಠಿ ನಡೆಸಿ ಖಂಡಿಸುವುದು ನಡೆದೇ ಇದೆ. ಒಂದು ಹಂತದಲ್ಲಿ ಕಾಂಗ್ರೆಸ್‌ನ ಕೆಲವರು ದೇವೇಗೌಡರ ಪ್ರತಿಕೃತಿ ದಹನ ಮಾಡುವವರೆಗೂ ಹೋಗಿದ್ದು ಪರಿಸ್ಥಿತಿಯ ವಿಕೋಪದ ಸಂಕೇತ.

ಇಂತಹ ವಾಗ್ವಾದ - ಬಹಿರಂಗ ಕದನಗಳು ಯಾಕೆ ಸಂಭವಿಸಿದವು? ಎಂಬುದಕ್ಕೆ ಹಲವಾರು ವ್ಯಾಖ್ಯಾನಗಳಿವೆ. ಈ ಮೈತ್ರಿಕೂಟದ ಸರ್ಕಾರದ ಕಾರ್ಯವೈಖರಿ ಅಥವಾ ನಾಯಕರ ಬಗ್ಗೆ ಭಿನ್ನಾಭಿಪ್ರಾಯ ಟೀಕೆಗಳಿದ್ದರೆ ಜೆಡಿ(ಎಸ್)ನವರಾಗಲಿ - ಕಾಂಗ್ರೆಸ್ಸಿಗರಾಗಲಿ ತಮ್ಮ ತಕರಾರುಗಳ ಬಗ್ಗೆ ಪರಸ್ಪರ ಮಾತನಾಡಿಕೊಳ್ಳಬಹುದಿತ್ತು. ವೈಯಕ್ತಿಕ ಕೆಲಸ ಕಾರ್ಯಗಳು, ಆಗುಹೋಗುಗಳ ತಕರಾರಿದ್ದರೂ ಕುಳಿತು ಬಗೆಹರಿಸಿಕೊಳ್ಳಬಹುದಿತ್ತು. ಅದು ಬಿಟ್ಟು ಜನರ ನಡುವೆ ಗೊಂದಲ ಮೂಡುವಂತಹ ಸರ್ಕಾರದ ಅಸ್ತಿತ್ವದ ಬಗ್ಗೆಯೇ



ಅನಿಶ್ಚತತೆ- ಆತಂಕ ಹುಟ್ಟಿಸುವ ಮಟ್ಟಕ್ಕೆ ಹೋಗಬೇಕಿತ್ತೆ? ಕೋಮುವಾದಿಗಳನ್ನು ಅಧಿಕಾರಕ್ಕೆ ಬರದಂತೆ ತಡೆದು, ರಾಜ್ಯದಲ್ಲಿ ಧರ್ಮನಿರಪೇಕ್ಷತೆ ವಾತಾವರಣ ಕಾಯಲೆಂದೇ ಸರ್ಕಾರ ರಚಿಸಲಾಗುತ್ತಿದೆ ಎಂಬ ಘನೋದ್ದೇಶದ ಘೋಷಣೆ ಈಗ ಮರೆತುಹೋಯಿತೆ? ಅಥವಾ ಕೋಮುವಾದಿ ಶಕ್ತಿಗಳು ತುಂಬಾ ದುರ್ಬಲವಾಗಿ ಜನರಿಂದ ತಿರಸ್ಕಾರಕ್ಕೆ ಒಳಗಾಗಿಬಿಟ್ಟವೇ? ಎರಡನೆಯದು ಸಾಧ್ಯವಿಲ್ಲದ ಸ್ಥಿತಿ - ಈಗಲೂ ಬಿಜೆಪಿ - ಸಂಘಪರಿವಾರ ಎಳೆಸಿಕ್ಕರೂ ಹಚ್ಚಡ ನುಂಗುವ, ಸಣ್ಣ ಸಂದರ್ಭವೊದಗಿದರೂ ಊರಿಗೆ ಉರಿ ಹಚ್ಚಿ ಮೈಕಾಯಿಸಿಕೊಳ್ಳಲು ಬಿಜೆಪಿ- ಸಂಘ ಪರಿವಾರ ನುಗ್ಗುವ ಆಟಗಳನ್ನು ಬೆನ್‌ಹಿನ್ ಕಾರ್ಯಕ್ರಮ, ವಿಜಾಪುರ- ಬಾಗಲಕೋಟೆ, ನಾಗಮಂಗಲ, ಕೋರಮಂಗಲಗಳ ಘಟನೆಗಳಲ್ಲಿ ಕಂಡಿದ್ದೇವೆ. ಕೋಮುವಾದಿ ಶಕ್ತಿಗಳು ಒಂದೆಡೆ ಅಭಿವೃದ್ಧಿ - ಜನರ ಪ್ರಶ್ನೆಗಳನ್ನೆತ್ತಿ ಸರ್ಕಾರದ ವಿರುದ್ಧ ಅತೃಪ್ತಿ ಹುಟ್ಟುಹಾಕುವುದು. ಇನ್ನೊಂದೆಡೆ ಕೋಮುವಿಭಜನೆ ತರುವ ಗಲಭೆಗಳನ್ನು ಸೃಷ್ಟಿಸುವುದು ಹೀಗೆ ಎರಡೂ ಹಂತಗಳಲ್ಲಿಯೂ ಸಕ್ರೀಯವಾಗಿವೆ. ಈ ಸನ್ನಿವೇಶ ಅರಿಯದಷ್ಟು ಮೈತ್ರಿಕೂಟದ ನಾಯಕರು ಮುಗ್ಧರೇನಲ್ಲ.

ಹೊತ್ತಿಕೊಂಡ ಈ ವ್ಯಾಜ್ಯದ ಹಿಂದೆ ಹಲವಾರು ರಾಜಕೀಯ ಸಮೀಕರಣಗಳನ್ನು ಮುಂದಿಡಲಾಗುತ್ತಿದೆ. ಜಾತ್ಯಾತೀತ ಜನತಾದಳದ ಉನ್ನತ

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ನಾಯಕತ್ವದಲ್ಲಿ ಇರುವ ನಡುವಿನ ಒಡಕುಗಳು, ಅಧಿಕಾರದ ಪ್ರಮುಖ ಕೀಲಿ ಯಾರ ಕೈಯಲ್ಲಿರಬೇಕು. ಮುಖ್ಯಮತ್ರಿ ಗಾದಿಗೆ ಯಾರನ್ನು ತರಬೇಕು, ತಮ್ಮದು ಸಾಮೂಹಿಕ ನಾಯಕತ್ವ ಎನ್ನುತ್ತಿದ್ದ ಸನ್ನಿವೇಶ ಈಗ ಉಳಿದಿದೆಯೇ? ಎಂಬಂತಹ ಹಲವಾರು ಪ್ರಶ್ನೆಗಳ ಹುಡುಕಿಕೆಯಲ್ಲಿ ಪಕ್ಷದ ಒಂದು ಗುಂಪು ಪಕ್ಷವನ್ನೇ ತೊರೆಯುವ, ಕಾಂಗ್ರೆಸ್‌ನೊಟ್ಟಿಗೆ ಸೇರಬಹುದೆಂಬ ಊಹಾಪೋಹಗಳಿದ್ದವೆ. ಹಾಗೇನಾದರೂ ಸಂಭವಿಸಿದರೆ ಪಕ್ಷದ ನಾಯಕತ್ವದ ಒಂದು ಬಣ ಬಿಜೆಪಿಯ ನೆರವಿನೊಂದಿಗೆ ಸರ್ಕಾರ ರಚಿಸಿ ಅಧಿಕಾರಕ್ಕೆ ಬರಬಹುದು ಎಂಬ ಲೆಕ್ಕಾಚಾರದ ಹೊಗೆ ಏಳಿಸಲಾಗಿದೆ. ಕಾಂಗ್ರೆಸ್ ಮತ್ತು ಜೆಡಿ(ಎಸ್) ನಾಯಕರುಗಳು ಚುನಾವಣೆಗೆ ಹೋಗಲು ಈಗಲೇ ಸಿದ್ಧವೆಂದು ಸೆಡ್ಡು ಹೊಡೆದವರಂತೆ ರೇಗಾಡಿಕೊಂಡರೂ ಶಾಸಕರ್‍ಯಾರೂ ಚುನಾವಣೆಗೆ ಹೋಗುವ ಸ್ಥಿತಿಯಲ್ಲಿ ಇಲ್ಲ. ಕಳೆದ ಚುನಾವಣೆಯಲ್ಲಿ ಮಾಡಿಕೊಂಡ ಖರ್ಚುಗಳನ್ನು ಸರಿದೂಗಿಸುವ ಚಿಂತೆಯಲ್ಲೇ ಅವರಿದ್ದಾರಂತೆ.

ಇಂತಹ ವಾಗ್ಯುದ್ಧ, ಜಗಳಗಳನ್ನು ಕಟ್ಟಿಕೊಂಡು ಜನಸಾಮಾನ್ಯರಿಗೆ ಏನಾಗಬೇಕಾಗಿದೆ? ನಾಯಕರ ಈ ಕದನದಲ್ಲಿ ಜನಪರವಾದ ಪ್ರಶ್ನೆಗಳೊಂದೂ ಕಾಣಲಿಲ್ಲ. ಕರ್ನಾಟಕದಲ್ಲಿ 80ಕ್ಕೂ ಹೆಚ್ಚಿನ ತಾಲೂಕುಗಳಲ್ಲಿ ಬರಗಾಲ ನಾಲ್ಕನೇ ವರುಷವೂ ಜನರನ್ನು ಕಂಗೆಡಿಸಿದೆ, ಕುಡಿವ ನೀರು, ಮೇವು, ಕೆಲಸ, ಆಹಾರದ ಅಭಾವ ಕಾಡುತ್ತಿದೆ. ರೈತರ ಆತ್ಮಹತ್ಯೆಗಳು ನಡೆದೇ ಇವೆ. ಕೂಲಿಕಾರರ ವಲಸೆ ನಿಂತಿಲ್ಲ. ಕೈಗಾರಿಕೆ-ಕೃಷಿ ಬಿಕ್ಕಟ್ಟಿದೆ. ದುಡಿವವರ ಬವಣೆಗಳಿವೆ. ಇವುಗಳಾವುವೂ ಮೈತ್ರಿಕೂಟದ ನಾಯಕರ ವ್ಯಾಜ್ಯದಲ್ಲಿ ಸ್ಥಾನವನ್ನೇ ಪಡೆದಿಲ್ಲ. ಪ್ರಶ್ನೆಗಳಾಧಾರದಲ್ಲಿ ತಕರಾರುಗಳೆತ್ತಿದರೆ ಜನತೆಯೂ ಅದನ್ನು ಗಮನಿಸುತ್ತದೆ. ಜನರ ಪ್ರಶ್ನೆಗಳಿಗಿಂತ ಅಧಿಕಾರದಾಹವೇ ಇಲ್ಲಿ ಪ್ರಧಾನ.

ಜೆಡಿ(ಎಸ್) ಮತ್ತು ಕಾಂಗ್ರೆಸ್‌ನ ಮುಖಂಡರು ಇನ್ನಾದರೂ ಬಹಿರಂಗ ಕದನ ನಿಲ್ಲಿಸಬೇಕು. ರಾಜ್ಯದ ಬಿಜೆಪಿಯಲ್ಲಿ ಒಳಜಗಳಗಳಿಂದ ಬಿರಿಯುತ್ತಿರುವಾಗ ಇಂತಹ ಉತ್ತಮ ರಾಜಕೀಯ ಸನ್ನಿವೇಶ ಬಳಸಬೇಕು.

ಲಂಕೇಶ್ ಪತ್ರಿಕೆ : ಈ ಜಗಳ ನ್ಯಾಯವೇ?

ಲಂಕೇಶ್ ಪತ್ರಿಕೆಯ ಪ್ರಕಾಶಕರು ಮತ್ತು ಸಂಪಾದಕರ ನಡುವಿನ ಜಗಳ ಕೇವಲ ಕೌಟುಂಬಿಕವೇ?

ಲಂಕೇಶ್ ಪತ್ರಿಕೆಯ ಫೆಬ್ರವರಿ 23 ರ ಸಂಚಿಕೆಯ ಮುಖಪುಟ ತಿರುವಿದಾಗ ಆಶ್ಚರ್ಯವೊಂದು ಗೋಚರಿಸಿತು. ಎಂದಿನಂತೆ ಮೂರನೆಯ ಪುಟದಲ್ಲಿ ಅದರ ಸಂಪಾದಕಿ ಗೌರಿ ಲಂಕೇಶರ 'ಕಂಡಹಾಗೆ' ಕಾಲಂ ಕಾಣೆಯಾಗಿತ್ತು. ಆ ಸ್ಥಳದಲ್ಲಿ ಪ್ರಕಾಶಕ ಇಂದ್ರಜಿತ್ ಲಂಕೇಶ್‌ರ 'ಈ ವಾರ' ಕಾಲಂ ಮುದ್ರಿತವಾಗಿತ್ತು. ವಿಶೇಷವೆಂದರೆ 'ಜನರ ಸಮಸ್ಯೆಗಳಿಗೆ ನಕ್ಸಲ್‌ವಾದ ಪರಿಹಾರವಲ್ಲ' ಎಂಬ ತಲೆಬರಹದ ಲೇಖನ. ಅದರ ಪಕ್ಕದಲ್ಲೇ 2ನೇ ಪುಟದಲ್ಲಿ ರವೀಂದ್ರ ರೇಷ್ಮೆಯವರ 'ಗೌರಿಯೊಂದಿಗೆ ಸಂವಾದ: ಬಂದೂಕಿನ ಬೆಂಕಿ V/s ಜನತಂತ್ರದ ಸ್ಫೂರ್ತಿ' ಎಂಬ ದೀರ್ಘ ಬರಹ.... ಹಾಗೇ ಕೇಂದ್ರ ಪುಟದಲ್ಲಿ ಪಾವಗಡದಲ್ಲಿ ನಕ್ಸಲೀಯರಿಂದ ಹತ್ಯೆಗೀಡಾದ ಪೊಲೀಸರ ಮಾರಣಹೋಮ ವರದಿ.



ಲಂಕೇಶ್ ಪತ್ರಿಕೆಯಲ್ಲಿ ಏನೋ ಗಂಭೀರವಾದ ಬೆಳವಣಿಗೆ ಸಂಭವಿಸಿದೆ ಎಂದು ಥಟ್ಟನೆ ಮನವರಿಕೆಯಾಯಿತು. ಇಂದ್ರಜಿತ್ ಬರಹ ಪತ್ರಿಕೆಯ ನಿಲುವಿನ ಸ್ಪಷ್ಟತೆಯಂತಿದ್ದರೆ, ರೇಶ್ಮೆಯವರು ಗಹನವಾದ ಪ್ರಶ್ನೆಗಳನ್ನೆತ್ತಿ ಪತ್ರಿಕೆಯಲ್ಲಿ ನಕ್ಸಲೀಯರ ಪರವಾದ, ಅವರ ಅಭಿಪ್ರಾಯಗಳೇ ಪ್ರಧಾನವಾಗಿ ಸಮರ್ಥಿಸುವಂತಹ ಸ್ಥಿತಿ ತಲುಪಿದ ಬಗ್ಗೆ, ಲಂಕೇಶರ ಹಾಗೂ ಪತ್ರಿಕೆಯ ಮೂಲ ಧೋರಣೆಗಳಿಂದ ದೂರ ಸರಿದ ಬಗ್ಗೆ ಪ್ರಸ್ತಾಪಿಸಿದ್ದರು. ಮುಂದಿನ ಸಂಚಿಕೆ (ಮಾರ್ಚ್ 2) ಪ್ರಕಟವಾಗುವುದರ ಒಳಗೆ ಗೌರಿಯನ್ನು ಪತ್ರಿಕೆಯ ಸಂಪಾದಕಿಯ ಹುದ್ದೆಯಿಂದ ತೆಗೆದು ಹಾಕಿದ ಸುದ್ದಿ ಪ್ರಕಟವಾಯಿತಲ್ಲದೆ, ಅಕ್ಕ-ತಮ್ಮನ (ಸಂಪಾದಕಿ-ಪ್ರಕಾಶಕ) ನಡುವೆ ಜಗಳ ಸಂಭವಿಸಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಯಿತು.

ಈ ಒಡಹುಟ್ಟಿದವರ ನಡುವೆ ಜಗಳ ಮೊದಲಿನಿಂದಲೇ ಇದ್ದದ್ದೇ. ಲಂಕೇಶ್ ನಿಧನರಾದಾಗ ಪತ್ರಿಕೆಯ ಹೊಣೆ-ನಿರ್ವಹಣೆ ಒಳಗೊಂಡು ಆಸ್ತಿ ಹಂಚಿಕೆಯ ವಿಷಯದಲ್ಲಿ ವ್ಯಾಜ್ಯ ತರೆದೋರಿದ್ದಿದೆ. ಕುಟುಂಬದ, ಪತ್ರಿಕೆಯ ಹಿರಿಯ ಹಿತೈಷಿಗಳ ಸಮ್ಮುಖದಲ್ಲಿ ಈ ವ್ಯಾಜ್ಯಕ್ಕೆ ಒಂದು ಹಂತದ ಇತಿಶ್ರೀ ಹಾಕಲಾಗಿತ್ತು. ಇಂತಹ ಕೆಲವು ವ್ಯಾಜ್ಯಗಳು ಕರ್ನಾಟಕದ ಬಹುದೊಡ್ಡ ಪತ್ರಿಕೆಗಳ, ಒಡೆಯರ ಕುಟುಂಬಗಳಲ್ಲಿಯೂ ಇವೆ. ಆದರೆ ಈಗ ಪತ್ರಿಕೆಯಲ್ಲಿ ಸಂಭವಿಸಿರುವ ಈ ಘಟನೆಗಳಲ್ಲಿ ಕುಟುಂಬದ ವ್ಯಾಜ್ಯ ಇದೆಯಾದರೂ ಅದೇ ಪೂರ್ಣ ಸತ್ಯವಲ್ಲ.

ಬಹುಮುಖ್ಯವಾಗಿ ಈಚೆಗಿನ ಕೆಲವು ವರುಷಗಳಿಂದ ನಕ್ಸಲೀಯರ ಪರ ಸಹಾನುಭೂತಿ ಲೇಖನಗಳು ಕಾಣಿಸಿಕೊಳ್ಳುತ್ತಾ, ಅವರನ್ನು-ಅವರ ಕೃತ್ಯಗಳನ್ನು ಸಮರ್ಥಿಸುವ, ಅದೇ ಗುಂಪಿನವರಿಂದ ಲೇಖನಗಳನ್ನು ಪ್ರಕಟಿಸುವ, ನೀಡುವ ಸ್ಥಳಾವಕಾಶ ಹೆಚ್ಚುತ್ತಲೇಹೋಯಿತು. ಸಂಪಾದಕಿ ಗೌರಿಯವರೂ 'ಕಾಡಿನ ಕ್ರಾಂತಿಕಾರಿ'ಗಳನ್ನು ಭೇಟಿ ಮಾಡಿ ವಿಶೇಷ (ನಕ್ಸಲೀಯ ಘರ್ಜನೆ) ಲೇಖನ ಬರೆದರು. ಪ್ರಸಕ್ತ ಸಂಗತಿಗಳನ್ನು ತೆರೆದಿಡಲಾಯಿತಾದರೂ ಅಲ್ಲಿಂದ ನಕ್ಸಲೀಯರ ದನಿಗೆ ಪತ್ರಿಕೆಯಲ್ಲಿ ಹೆಚ್ಚು ಧ್ವನಿ-ಪ್ರತಿಧ್ವನಿ ಕೇಳುವಂತಾಯಿತು. ನಕ್ಸಲೀಯರ ಚಟುವಟಿಕೆ-ಚಿಂತನೆಗಳಿಗೆ ಮಾನ್ಯತೆ, ಪ್ರಚಾರ ದೊಡ್ಡ ರೀತಿಯಲ್ಲಿ ಸಿಗುವಂತಾಯಿತು. ಈ ಪ್ರಕ್ರಿಯೆಯಲ್ಲಿಯ ಆರಂಭದಲ್ಲಿಯೇ ನಕ್ಸಲೀಯ ಒಲವಿನ ಕೆಲ ವರದಿಗಾರರು ಪತ್ರಿಕೆಯೊಳಗೆ ಇದ್ದರು. ಒಟ್ಟಾರೆ ಕರ್ನಾಟಕದ ಜನಧ್ವನಿಯಾಗಿದ್ದ, ಪ್ರಜಾಪ್ರಭುತ್ವೀಯ ಮೌಲ್ಯಗಳ, ಜನರ ಪ್ರಜಾಸತ್ತಾತ್ಮಕ ಚಳುವಳಿಗಳ ಪರವಾಗಿದ್ದ ಪತ್ರಿಕೆಯ ಧ್ವನಿಯಲ್ಲಿ ಪಲ್ಲಟವಾಗಿ ಎಡ ದುಸ್ಸಾಹಸವಾದೀ, ಕ್ರಾಂತಿಕಾರಿ ಸೋಗಿನ ನಕ್ಸಲೀಯರ ಮುಖವಾಣಿಯಾಗಿ ಬಿಟ್ಟಿತೇನೋ ಎಂಬ ಆತಂಕ ಹುಟ್ಟಿಸುವಷ್ಟು ಬದಲಾದುದನ್ನು ಬಹುತೇಕ ಗಮನಿಸಿದ್ದಾರೆ. ಹಲವು ಬಾರಿ ಸಂಪಾದಕಿಗೆ ಹೇಳಿದ್ದಾರೆ.

ಕರ್ನಾಟಕದ ಅತ್ಯಂತ ಪ್ರಭಾವಿ, ಖ್ಯಾತ ಪತ್ರಿಕೆಯೊಂದರಲ್ಲಿ ಸ್ಥಾನಗಿಟ್ಟಿಸಿಕೊಂಡ ನಕ್ಸಲೀಯರು ಪತ್ರಿಕೆಯ ಸಂಪಾದಕಿಯನ್ನು ಒಳಗೊಂಡು 'ಶಾಂತಿಗಾಗಿ ನಾಗರೀಕರ ವೇದಿಕೆ' ಸೃಷ್ಟಿಸಿ (ಇದರಲ್ಲಿ ಗೌರಿಯನ್ನು ಬಿಟ್ಟರೆ ಬಹುತೇಕರು ನಕ್ಸಲೀಯರ ಗುಂಪಿನೊಂದಿಗೆ ನಿಕಟವಾಗಿದ್ದವರೇ) ಆ ಮೂಲಕ ಮುಖ್ಯಮಂತ್ರಿಗಳೊಂದಿಗೆ ಹಲವು ಬಾರಿ ಭೇಟಿ-ಚರ್ಚೆಗೆ ಅವಕಾಶ ಪಡೆದುಕೊಂಡರು.



ಗೌರಿ ಕೋಮುಸೌಹಾರ್ದದ ವಿರುದ್ಧ ಕೋಮುಸೌಹಾರ್ದ ವೇದಿಕೆಯಲ್ಲಿ ತೊಡಗಿದ್ದ ಅವಕಾಶವನ್ನು ಬಳಸಿದ ನಕ್ಸಲೀಯರು ಅವರ ಪರ ವಕಾಲತ್ತು ವಹಿಸುವಂತೆ ಮಾಡುವಲ್ಲಿ ಸಂದರ್ಭಗಳನ್ನು ಸೃಷ್ಟಿಸಿದರು. ಈಗ ಲಂಕೇಶ್ ಪತ್ರಿಕೆಯಲ್ಲಿ ಸಂಪಾದಕರು ಹಾಗೂ ಪ್ರಕಾಶಕರಿಗೂ ನಡೆದಿರುವ ವಿವಾದಗಳ ವಿದ್ಯಮಾನ ಕೇವಲ ಕೌಟುಂಬಿಕ ಎನ್ನುವುದು ಸರಿಯಲ್ಲ. ಹಾಗೆಂದು ಕೆಲವರು ಬಿಂಬಿಸಿಕೊಳ್ಳಬಹುದು. ಆದರೆ ಅದನ್ನು ನಂಬುವ ಮುಗ್ಧತೆ ಹೊಂದಿರಬೇಕಿಲ್ಲ ಎಂಬುದಕ್ಕೆ ಇಷ್ಟು ವಿವರಣೆ.

ತಾನು ಹಾಗಿರಲಿಲ್ಲ, ನಕ್ಸಲೀಯರ ಪರವಲ್ಲ, ಕರ್ನಾಟಕದಲ್ಲಿ ಶಾಂತಿ ಬಯಸುವವಳು ಎಂಬ ಗೌರಿಯವರ ಹೇಳಿಕೆ ಸತ್ಯವಾಗಲಿ. ಅವರು ತೀವ್ರವಾದ ವಿಮರ್ಶೆ ಮಾಡಿಕೊಂಡು ಸರಿಯಾದ ನಿಲುಮೆ ತಳೆಯಬೇಕು ಎಂಬುದು ಆಶಯ.

ಇವೆಲ್ಲವುಗಳನ್ನು ನಿರೀಕ್ಷಿಸಲಾಗಿತ್ತು ಎಂಬಂತೆ ಈ ಮೊದಲೇ 'ಲಂಕೇಶ' ಎಂದು ಪತ್ರಿಕೆಯ ಟೈಟಲ್ ನೊಂದಾಯಿಸಿದ್ದಾರೆ. ಇದೇ ಹೆಸರಿನಲ್ಲಿ ಲಂಕೇಶ್ ಹುಟ್ಟಿದ ಮಾರ್ಚ್ 8 ರಂದೇ ಪತ್ರಿಕೆಯ ಸಂಚಿಕೆ ಬಿಡುಗಡೆಯೂ ನಿಗದಿಯಾಗಿದೆ.


ಬಹಳಷ್ಟು ಯಾತನೆ ಅನುಭವಿಸಿದ ಗೌರಿ ಹೊಸ ಪತ್ರಿಕೆ ಮಾಡುತ್ತಿರುವಾಗ ಎಲ್ಲ ನೆರವು ಕೊಡಬೇಕು ಎಂದು ಪ್ರಗತಿಪರ ಮಿತ್ರರೊಬ್ಬರು ಕೇಳಿದರು. ಪತ್ರಿಕೆ ಮಾಡುವ ಮೊದಲು ಮತ್ತು ನಂತರದಲ್ಲಿಯೂ ನಕ್ಸಲೀಯರ ಕುರಿತಾದ ಗೌರಿ ನಿಲುಮೆ ಸ್ಪಷ್ಟಗೊಳ್ಳಬೇಕಿರುವುದು ಅತೀ ಅಗತ್ಯವಿದೆ. ಇಂತಹ ನಿಲುವಿನ ಆಧಾರದಲ್ಲಿಯೇ ಬೆಂಬಲ ನೀಡುವ, ಬಿಡುವ ಪ್ರಶ್ನೆಯೂ ಇದೆ. ಹಾಗೆಯೇ ನಕ್ಸಲೀಯರನ್ನು ವಿರೋಧಿಸುವ ಭರದಲ್ಲಿ ಲಂಕೇಶ್ ಪತ್ರಿಕೆಯು ಕಮ್ಯುನಿಸ್ಟ್ ವಿರೋಧಿಯಾಗುವುದು, ಜನಪರ ಚಳುವಳಿಗಳಿಂದ ದೂರ ನಿಲ್ಲುವುದು ಆಗಕೂಡದು ಮತ್ತು ತನ್ನ ಖಚಿತ, ವಿಮರ್ಶಾತ್ಮಕ ನಿಲುವಿಗೆ ತಿಲಾಂಜಲಿ ಇತ್ತು 'ಅಂದರಿಕಿ ಮಂಚಿವಾಡು' ಎಂಬಂತಹ ಬಾಲಬಡುಕತನಕ್ಕೆ ಎಳೆಸದಿರುವಂತೆ ಎಚ್ಚರ ವಹಿಸುವುದೂ ಅಗತ್ಯ.

ಆದ್ಯತೆ ತಪ್ಪಿದ ಸರ್ಕಾರಗಳು-ಹಾದಿ ತಪ್ಪಿದ ನಕ್ಸಲೀಯರು


ನಕ್ಸಲ್‌ವಾದ, ಕೋಮುವಾದ, ಸರ್ಕಾರ ಹಿಂಸೆ ಕುರಿತು ನಾಡಿನ ಬುದ್ಧಿಜೀವಿ, ಚಿಂತಕರು, ಜನಸಾಮಾನ್ಯರು ಏನನ್ನುತ್ತಾರೆ? ಆಯ್ದ ಕೆಲವು ಅಭಿಪ್ರಾಯಗಳು

ಜಾಗತೀಕರಣಗೊಂಡ ಭಾರತದಲ್ಲಿ ಗ್ರಾಮೀಣ ಭಾರತ ದಿವ್ಯ ನಿರ್ಲಕ್ಷ್ಯಕ್ಕೊಳಗಾಗಿದೆ. ಅಭಿವೃದ್ಧಿಯೆಂದರೆ ದೈತ್ಯ ಕಟ್ಟಡಗಳ ನಿರ್ಮಾಣ, ರಾತ್ರಿಪೂರ್ತಿ ಉರಿಯುವ ನಿಯಾನ್ ಬಲ್ಬ್‌ಗಳು, ಎಲ್ಲಾ ಕ್ರಿಯೆಗಳನ್ನು ಕಂಪ್ಯೂಟರೀಕರಣ ಗೊಳಿಸುವುದು, ಸೆಲ್ ಫೋನುಗಳು ಸದಾ ರಿಂಗಣಗೊಳ್ಳುತ್ತಿರುವುದು, ಕಾರುಗಳು ಭರ್ರನೆ ರಸ್ತೆ ತುಂಬಿದ ಸಂಖ್ಯೆಯಲ್ಲಿ ಚಲಿಸುವುದು ಎಂಬಂತಾಗಿದೆ. ನಮ್ಮನ್ನಾಳುವ ಸರ್ಕಾರಗಳ ಆದ್ಯತೆಯೆಂದರೆ ಬೆಂಗಳೂರನ್ನು ಸಿಂಗಾಪೂರ್ ಆಗಿಸುವುದು, ಮುಂಬೈ ಅನ್ನು ಶಾಂಘಾಯ್ ಆಗಿಸುವುದು, ನವದೆಹಲಿಯನ್ನು ನ್ಯೂಯಾರ್ಕ್ ಆಗಿಸುವುದೇ ಆಗಿದೆ. ರಾಜಕಾರಣಿಗಳು, ಉದ್ಯಮಿಗಳು, ಬಹುರಾಷ್ಟ್ರೀಯ ಕಂಪನಿಗಳು, ಗುತ್ತಿಗೆದಾರರು ಮತ್ತು ಮಾಫಿಯಾಗಳು ಕೇಂದ್ರೀಕೃತಗೊಂಡ ನಗರಮುಖಿ ಬೆಳವಣಿಗೆಯ ದೇಶದ ಅಭಿವೃದ್ಧಿ ಅನಿಸತೊಡಗಿದಂದಿನಿಂದ, ವಿದೇಶಿ ಬಂಡವಾಳ ಮಾತ್ರ ಭಾರತವನ್ನು ಬಲಪಡಿಸುತ್ತದೆ ಎಂದು ಭಾವಿಸಿರುವುದರಿಂದ, ಭ್ರಷ್ಟಾಚಾರ ದಿನೇ ದಿನೇ ಹೈಟೆಕ್ ಆಗುತ್ತಾ ಸಾಗಿರುವುದರಿಂದ ಬಹುಸಂಖ್ಯಾತ ಭಾರತೀಯ ರೈತರು, ಕಾರ್ಮಿಕರು, ಮಧ್ಯಮವರ್ಗದ ಯುವಜನರು ಮತ್ತು ದಲಿತ ಸಮುದಾಯ ಅಭದ್ರತೆಯ ಕವಲುದಾರಿಗೆ ಬಂದು ನಿಂತಿದ್ದಾರೆ. ಇಂತಹ ಸನ್ನಿವೇಶದಲ್ಲಿ ನಕ್ಸಲೀಯರು ಎತ್ತುತ್ತಿರುವ ಮಾನವಾಭಿವೃದ್ಧಿಯ ಪ್ರಶ್ನೆಗಳು ನೋವುಂಡ ಮನಸುಗಳಿಗೆ ತತ್‌ಕ್ಷಣದ ಉತ್ತರಗಳಾಗಿ ಕಾಣಲು ಅವಕಾಶ ಕಲ್ಪಿಸುತ್ತವೆ.

ನಕ್ಸಲೀಯರ ಚಳುವಳಿ ಸರ್ವಮಾನ್ಯವಾದ ದೃಢವಾದ ನೆಲಗಟ್ಟಿನ ಮೇಲೆ ನಿಂತ ಚಳುವಳಿಯಲ್ಲ. ವ್ಯವಸ್ಥೆಯ ಲೋಪದೋಷಗಳ ವಿರುದ್ಧ ಸಿಡಿದೇಳುವ ಭಾವನಾತ್ಮಕ ನೆಲೆಗಟ್ಟೆ ಇದಕ್ಕೆ ಪ್ರೇರಕ. ಬಂದೂಕು ಹಿಡಿಯುವುದು, ಸರ್ಕಾರಿ ಯಂತ್ರಗಳ ಮೇಲೆ ದಾಳಿ ನಡೆಸುವುದು, ಗ್ರಾಮಾಂತರ ಪ್ರದೇಶಗಳಲ್ಲಿ ಪರ್ಯಾಯ ಸರ್ಕಾರಗಳನ್ನು ರೂಪಿಸುವುದು ಇತ್ಯಾದಿಗಳಿಂದ ವ್ಯವಸ್ಥೆಯನ್ನು ತಾವು ಬಯಸಿದ ರೀತಿಯಲ್ಲಿ ಬದಲಿಸಿಬಿಡಬಹುದೆಂಬುದು ನಕ್ಸಲೀಯರ ಭ್ರಮೆಯಾಗಿದೆ. ಯಾವುದೇ ಅಭಿವೃದ್ಧಿ ಪರವಾದ, ಯಾವುದೇ ಹಕ್ಕುಗಳ ಪರವಾದ, ಯಾವುದೇ ದೌರ್ಜನ್ಯದ ವಿರುದ್ಧ ವ್ಯಕ್ತವಾಗುವ ಹೋರಾಟ ಜನತೆಯ ನಡುವೆ, ಎಲ್ಲಾ ವಿರೋಧಾಭಾಸಗಳ ನಡುವೆ, ಎಲ್ಲಾ ಭಿನ್ನಾಭಿಪ್ರಾಯಗಳ ನಡುವೆ ಪ್ರಜಾಪ್ರಭುತ್ವೀಯ ರೀತಿಯಲ್ಲಿ ಜರುಗಿದಾಗ ಅದು ಹಲವು ಪರಿಹಾರಗಳ ಸಾಧ್ಯತೆಗಳನ್ನು ನಮ್ಮೆದುರು ತೆರೆದಿಡುತ್ತದೆ. ನಕ್ಸಲೀಯರಿಗೆ ಈ ಸೂಕ್ಷ್ಮ ವೇದ್ಯವಾಗಬೇಕು.



ನಕ್ಸಲೀಯ ಚಳುವಳಿ ಸಮಾಜದಿಂದ ಏಕಕಾಲಕ್ಕೆ ತಿರಸ್ಕಾರ ಮತ್ತು ಸಹಾನುಭೂತಿಯನ್ನು ಪಡೆದುಕೊಳ್ಳುತ್ತದೆ. ಈ ಎರಡೂ ಪ್ರತಿಕ್ರಿಯೆಯ ಅಲೆಗಳ ನಡುವೆ ಪ್ರಜಾಪ್ರಭುತ್ವೀಯ ರೀತಿಯಲ್ಲಿ ನಡೆಯುವ ಹೋರಾಟಗಳು ಪ್ರಚಾರವಿಲ್ಲದೆ ಸೊರಗಿ ಬಿಡುತ್ತವೆ.



ಇಸವಿ 1997 ರಲ್ಲಿ ಮಧುರೈ ನಗರದ ಒಂದು ವಾರ್ಡಿನಲ್ಲಿ ಸಿಪಿಎಂ ಕಾರ್ಪೋರೇಟರ್ ಲೀಲಾವತಿಯವರನ್ನು ಹಾಡುಹಗಲೇ ಗೂಂಡಾಗಳು ನಡುರಸ್ತೆಯಲ್ಲಿ ಕೊಂದುಹಾಕಿದರು. ಆಕೆ ಮಾಡಿದ ತಪ್ಪಾದರೂ ಏನಾಗಿತ್ತು? ತನ್ನ ವಾರ್ಡಿನ ಪ್ರತಿ ಮನೆಗೂ ನಲ್ಲಿ ಸಂಪರ್ಕ ಕಲ್ಪಿಸಿ ನೀರಿನ ಸೌಕರ್ಯ ಒದಗಿಸಿದ್ದು. ನೀರು ಮಾರಾಟ ಮಾಡಿ ಅಪಾರ ಲಾಭ ದೋಚುತ್ತಿದ್ದ ಖಾಸಗೀ ನೀರಿನ ಟ್ಯಾಂಕರ್ ಮಾಲೀಕರು ಲೀಲಾವತಿಯನ್ನು ಕೊಲ್ಲಿಸಿದರು. ಲೀಲಾವತಿಯವರಿಗೆ ತಾನು ಅಪಾಯಕಾರಿ ಲಾಬಿಯೊಂದನ್ನು ಎದುರುಹಾಕಿಕೊಳ್ಳುತ್ತಿದ್ದೇನೆ ಎಂಬ ಅರಿವಿದ್ದರೂ ಆಕೆ ತನ್ನ ವಾರ್ಡಿನ ಜನರಿಗೆ ತಾವು ನೀಡಿದ್ದ ಭರವಸೆಯನ್ನು ಈಡೇರಿಸಿದರು. ಆ ಭರವಸೆಗಾಗಿ ತಮ್ಮ ಬದುಕನ್ನು ಬಲಿಗೊಟ್ಟರು. ಈಕೆಯ ಬಲಿದಾನ ಪ್ರೇಮ್‌ನ ಬಲಿದಾನಕ್ಕಿಂತ ಯಾವ ರೀತಿಯಲ್ಲಿ ಕಡಿಮೆ ಇದೆ? ಇನ್ನೂ ಹಲವು ಉದಾಹರಣೆಗಳನ್ನು ನೀಡಬಹುದು.

ಪ್ರತಿದಿನ ಲಕ್ಷಗಟ್ಟಲೆ ಗ್ಯಾಲನ್ ನೀರು ಬಳಸಿ ಅಂತರ್ಜಲದ ಕೃತಕ ಕ್ಷಾಮ ಸೃಷ್ಟಿಸಿದ್ದ ಕೋಲಾ ಕಂಪನಿಗಳ ವಿರುದ್ಧ ತಿರುಗಿಬಿದ್ದು ಕೇರಳದ ಪೆರುಮಾಟ್ಟಿ ಗ್ರಾಮಪಂಚಾಯತಿ (ಸಿಪಿಎಂ ಬೆಂಬಲಿತ ಜನತಾದಳ ಅಧಿಕಾರವಿರುವ ಕೇರಳದ ಏಕೈಕ ಗ್ರಾಮ ಪಂಚಾಯತಿ) ಮತ್ತು ತಮಿಳುನಾಡಿನ ಶಿವಗಂಗಾ ಜಿಲ್ಲೆಯ ದಲಿತ ಮಹಿಳೆ ದಮಯಂತಿ(ಆಕೆ ಜನವಾದಿ ಮಹಿಳಾ ಸಂಘಟನೆಯ ಕಾರ್ಯದರ್ಶಿ)ಯವರಂತಹವರು ನಡೆಸಿದ ಹೋರಾಟಗಳು ಜನರಿಗೆ ನೀರಿನ ಹಕ್ಕಿನ ಮಹತ್ವವನ್ನು ತಿಳಿಸಿಕೊಟ್ಟವು. ಇವು ಜನರ ಹೋರಾಟಗಳಲ್ಲವೇ? ನೈಸರ್ಗಿಕ ನೀರನ್ನು ತಮ್ಮ ಸ್ವತ್ತು ಎಂದು ಭಾವಿಸಿದ್ದ ನಿಷ್ಕರುಣಿ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಅವುಗಳನ್ನು ಬೆಂಬಲಿಸುವ ಸರ್ಕಾರಗಳ ವಿರುದ್ಧ ನಿಂತು ಜನತೆಯ ಹಕ್ಕನ್ನು ಪ್ರತಿಪಾದಿಸುವುದು ಯಾವ ನಕ್ಸಲೀಯ ಹೋರಾಟಕ್ಕಿಂತ ಕಡಿಮೆ ಇದೆ? ದಶಕಗಳಿಂದ ಜರುಗುತ್ತಿರುವ ಭೂಪಾಲ್ ಸಂತ್ರಸ್ತರ ಹೋರಾಟ ನ್ಯಾಯಸಮ್ಮತವಲ್ಲವೆ? ಅಮೆರಿಕಾ ಹಾಗೂ ಅದರ ಕ್ರೂರ ಕಂಪನಿ ಯೂನಿಯನ್ ಕಾರ್ಬೈಡ್ ವಿರುದ್ಧ ಭೂಪಾಲಿನ ಜನಸಾಮಾನ್ಯರು ಹೋರಾಡುತ್ತಿರುವುದು ನಕ್ಸಲೀಯರ ದೃಷ್ಟಿಯಲ್ಲಿ ಎಂತಹ ಹೋರಾಟವಾಗಿದೆ? ಇವರು ಬಂದೂಕು ಹಿಡಿಯದೆ ನ್ಯಾಯ ಕೇಳುತ್ತಿದ್ದಾರಲ್ಲ, ಇದು ವ್ಯರ್ಥವೆಂದು ನಕ್ಸಲೀಯರು ಭಾವಿಸುತ್ತಾರೇನು?

ಬಹಳ ಹಿಂದೆ ಮಹಾರಾಷ್ಟ್ರದಲ್ಲಿ ಗೋದುಬಾಯಿ ಪರುಳೇಕರ್ ವಾರ್ಲಿ ಆದಿವಾಸಿಗಳನ್ನು ಸಂಘಟಿಸಿ ಆದಿವಾಸಿ ಹಕ್ಕುಗಳ ಅರಿವು ಮೂಡಿಸಿದರು. ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ಇದಕ್ಕಾಗಿ ಎದುರು ಹಾಕಿಕೊಳ್ಳಲೂ ಆಕೆ ಹಿಂಜರಿಯಲಿಲ್ಲ. ಆಕೆಯ ಹೋರಾಟ ಸ್ವತಂತ್ರ ಭಾರತದ ಎಲ್ಲ ಆದಿವಾಸಿ ಚಳುವಳಿಗಳಿಗೆ ಮಾದರಿಯಾಗಿ ನಿಂತಿದೆ. ಆಕೆ ನಕ್ಸಲೀಯಳಾಗಿರಲಿಲ್ಲ. ಆದಿವಾಸಿಗಳನ್ನೇ ಹೆಚ್ಚಾಗಿ ಆಶ್ರಯಿಸುವ ನಕ್ಸಲೀಯರು ಗೋದುಬಾಯಿಯವರಲ್ಲಿ ಯಾವ ನ್ಯೂನತೆ ಕಂಡುಕೊಂಡಿದ್ದಾರೆ?

ಜನಮುಖಿಯಲ್ಲದ ಸರ್ಕಾರಗಳು ಪೊಲೀಸ್ ಕ್ರೌರ್ಯಕ್ಕೆ ಕಾನೂನುಬದ್ಧತೆಯ ಲೇಪನ ನೀಡಿದರೆ, ನಕ್ಸಲೀಯರು ಅಭಿವೃದ್ಧಿಯ ಹೆಸರಿನಲ್ಲಿ ತಪ್ಪು ನಿಲುವುಗಳನ್ನು, ಹಿಂಸೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಈ ಎರಡೂ ಧೋರಣೆಗಳಿಗಿಂತ ಭಿನ್ನವಾದ ಜನಪರ ಮೂರನೇ ವ್ಯವಸ್ಥೆಯಿದೆ. ಆ ವ್ಯವಸ್ಥೆಯನ್ನು ಪಡೆಯಲು ಮೇಲೆ ತಿಳಿಸಿದ ಹೋರಾಟದ ಮಾದರಿಗಳಿವೆ.

ಸರ್ಕಾರಕ್ಕೆ ಇಷ್ಟು ಹೇಳಬಹುದು : ಹಿಂಸೆಗೆ ಪ್ರತಿಹಿಂಸೆ ಉತ್ತರವಲ್ಲ. ನಕ್ಸಲೀಯರಿಗೆ ಇಷ್ಟು ಹೇಳಬಹುದು - ಬದಲಾವಣೆಗೆ ಬಂದೂಕು ಮಾರ್ಗವಲ್ಲ.

- ಕೆ.ಎಸ್.ಆರ್.ಕುಮಾರ್
ಹಾಸನ

ನಕ್ಸಲೀಯರು ಮುಖ್ಯವಾಹಿನಿಗೆ ಬರಲಿ

ಬಡತನ ನಿರ್ಮೂಲನೆ ಮಾಡುವ ಮೂಲಕ ಶೋಷಿತ ವರ್ಗದ ಏಳಿಗೆಯೇ ನಕ್ಸಲೀಯರ ಧ್ಯೇಯವಾದರೆ, ಅದನ್ನು ತೆರೆಮರೆಯಲ್ಲಿ ಮಾಡುವ ಬದಲು ಸಮಾಜದ ಮುಖ್ಯವಾಹಿನಿಗೆ ಬಂದು ಕೈಗೆತ್ತಿಕೊಳ್ಳಲಿ. ಅದರಿಂದ ಅಧಿಕಾರಕ್ಕೆ ಬರುವ ಬಯಕೆ ಇದ್ದರೆ, ಪ್ರಜಾಪ್ರಭುತ್ವದಲ್ಲಿ ಅವಕಾಶವಿದೆ. ಚುನಾವಣೆಗಳಲ್ಲಿ ಸ್ಪರ್ಧಿಸಲಿ, ಮತದಾರರ ಒಲವು ಗಳಿಸಿ ಅಧಿಕಾರದ ಚುಕ್ಕಾಣಿ ಹಿಡಿಯಲಿ.

ಸುಪ್ರಿಯ ಬೆಂಗಳೂರು.
ಪ್ರಜಾವಾಣಿ

ಕ್ಯಾನ್ಸರ್ - ರೇಬಿಸ್

ನಕ್ಸಲೀಯರ ಹಿಂಸೆ ಹೇಯವಾದರೆ, ಕೋಮುವಾದಿ ಗಳ ಹಿಂಸೆ ಅಷ್ಟೇ (ಇನ್ನೂ) ಹೇಯವಾದ್ದು. ಕೋಮು ಹಿಂಸೆಯನ್ನು ಪ್ರಚೋದಿಸುವ ದುಷ್ಟರು ಈಗ ಮಾವೋವಾದಿ ಹಿಂಸೆಯನ್ನು ವಿರೋಧಿಸುವುದು ಮಾತ್ರವಲ್ಲ; ಅವರನ್ನು ಸಾಯಿಸಿ ಎನ್ನುತ್ತಿದ್ದಾರೆ. ಒಂದು ಕ್ಯಾನ್ಸರ್ ಆದರೆ, ಇನ್ನೊಂದು ಕ್ರೌರ್ಯದ ಸನ್ನಿ - ರೇಬಿಸ್ ಇದ್ದಂತೆ.

ಡಾ. ಯು.ಆರ್. ಅನಂತಮೂರ್ತಿ,
ವಿಜಯಕರ್ನಾಟಕ

ಈ ಡೆಮಾಕ್ರಸಿ

ಡೆಮಾಕ್ರಸಿಯನ್ನು ನಕಲಿ ಡೆಮಾಕ್ರಸಿಯೆಂದು ಲೇವಡಿ ಮಾಡುವ ಎನ್‌ಕೌಂಟರನ್ನು ನಕಲಿ ಎನ್‌ಕೌಂಟರ್ ಎಂದು ಆರೋಪಿಸುವ ನಕ್ಸಲೀಯರಿಗೂ ಇದೇ ನಮ್ಮ ಡೆಮಾಕ್ರಸಿ ಅನ್ಯರ ಮನಸ್ಸನ್ನು ಗೆಲ್ಲಲು, ಸಕಾರಾತ್ಮಕವಾಗಿ ಪರಿವರ್ತಿಸಲು, ರಚನಾತ್ಮಕವಾಗಿ ಸ್ಪಂದಿಸುವ ಹಕ್ಕು ಮತ್ತು ಮುಕ್ತ ಸ್ವಾತಂತ್ರ್ಯ ನೀಡುತ್ತದೆಯಲ್ಲವೇ?

ರವೀಂದ್ರ ರೇಷ್ಮೆ
(ಲಂಕೇಶ್ ಪತ್ರಿಕೆ - ಸಂಪಾದಕಿ ಗೌರಿ ಲಂಕೇಶ್‌ಗೆ)

ತುಮಕೂರು ಜಿಲ್ಲೆ ಪಾವಗಡದಲ್ಲಿ ಪೊಲೀಸರ ಬರ್ಬರ ಹತ್ಯೆ ಮತ್ತು ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿ ಕಾಣದ ಕೈಗಳಿಂದ ಕೋಮುವಾದಿ ಹಿಂಸಾಕಾಂಡ ಒಂದಾದಮೇಲೊಂದರಂತೆ ಎರಡೇ ದಿನಗಳಲ್ಲಿ ನಡೆದಿರುವುದು ಶಾಂತಿ ಪ್ರಿಯ ನಾಗರಿಕರಿಗೆ ಎಚ್ಚರಿಕೆಯ ಗಂಟೆಯಾಗಿದೆ. ಬಹಿರಂಗವಾಗಿಯೇ ಹಿಂಸೆಯ ಮೂಲಕ ಸಮಸ್ಯೆಗಳಿಗೆ ಪರಿಹಾರ ಹುಡುಕುವುದು ನಕ್ಸಲೀಯರ ದಾರಿಯಾದರೆ, ಗುಪ್ತ ಕಾರ್ಯಾಚರಣೆಯ ಮೂಲಕ ಸಮಸ್ಯೆಗಳನ್ನು ಹುಟ್ಟುಹಾಕುವುದು ಕೋಮುವಾದಿಗಳ ಮಾರ್ಗ.

ಜನಪರ ಹೋರಾಟವೆಂಬ ಹೆಸರಿನಲ್ಲಿ ಬಂದೂಕುಗಳನ್ನು ಹಿಡಿದು ಸರಕಾರಕ್ಕೆ, ಜನಗಳಿಗೆ ಬೆದರಿಕೆಗಳನ್ನು ಹಾಕುವವರ ಜತೆಗೆ ಮಾತುಕತೆ ನಡೆಸುವಷ್ಟು ಆತ್ಮಸ್ಥೈರ್ಯ ಕಳೆದುಕೊಂಡ ಸರಕಾರದ ಕುರಿತಾಗಿ ಜನತೆಗೆ ಯಾವ ಗೌರವ ಉಳಿಯಲು ಸಾಧ್ಯ ಎಂದು ಯೋಚಿಸಬೇಕಾಗುತ್ತದೆ. ಮಾತುಕತೆ ಎಂಬುದು ಶೂನ್ಯದಲ್ಲಿ ನಡೆಯುವುದಿಲ್ಲ; ಐದು ಸಂದರ್ಭದಲ್ಲಿ ನಡೆಯುತ್ತದೆ. ಕೆಲವು ಸಾಮಾನ್ಯಾಂಶಗಳ ಕುರಿತಾದ ಪರಸ್ಪರ ನಂಬಿಕೆ, ಶ್ರದ್ಧೆಗಳ ತಳಹದಿಯ ಮೇಲೆ ನಡೆಯುತ್ತದೆ. ಈ ಸಂದರ್ಭಗಳೆಂದರೆ ಪ್ರಜಾಪ್ರಭುತ್ವ, ಪಾರ್ಲಿಮೆಂಟರಿ ವ್ಯವಸ್ಥೆ, ಸಂವಿಧಾನ ಹಾಗೂ ಚುನಾವಣಾ ರಾಜಕೀಯ ಮುಂತಾದವು. ನಕ್ಸಲೀಯರಿಗೆ ಈ ಎಲ್ಲ ಮೌಲ್ಯಗಳಲ್ಲಿಯೂ ನಂಬಿಕೆ ತೃಣಮಾತ್ರವೂ ಇಲ್ಲ ಎಂದು ನಮಗೆ ಈಗ ತಿಳಿಯುತ್ತಿದೆ. ಅಂತಹುದರಲ್ಲಿ ಬಂದೂಕುಗಳನ್ನು ಹಿಡಿದು ಸಮಸ್ಯೆಗಳ ಪರಿಹಾರಕ್ಕೆ ಸರಕಾರದೊಡನೆ ಮಾತುಕತೆಗೆ ಜನಗಳಿಂದ ಚುನಾಯಿತರಾದ ಪ್ರತಿನಿಧಿಗಳೊಂದಿಗೆ ಸಮಾನವಾಗಿ ಕೂತು ಚರ್ಚೆ ಮಾಡಬೇಕೆಂದು ಬಯಸುವುದು ಸರ್ವಥಾ ಸ್ವೀಕಾರ ಯೋಗ್ಯ ನಿಲುವಲ್ಲ. ಜನರ ಸಮಸ್ಯೆಗಳ ಕುರಿತು ಮಾತನಾಡಬಯಸುವವರು ಬೇಷರತ್ತಾಗಿ ಬಂದೂಕುಗಳನ್ನು ತ್ಯಜಿಸಬೇಕು. ಆಗ ಮಾತ್ರ ಸರಕಾರ ಅವರುಗಳೊಡನೆ ಮಾತುಕತೆಗೆ ಒಪ್ಪಿಗೆ ನೀಡಬಹುದು.

ಆದರ್ಶ, ನಂಬಿಕೆ, ಬದ್ಧತೆ ಇವುಗಳಿಲ್ಲ ಇದ್ದ ಯುವಕರು ಈ ನಕ್ಸಲರು ಎಂದು ನಂಬಿದ್ದ ನಮಗೆ ಭ್ರಮನಿರಸನವಾಗಿದೆ.

ಟಿ.ಎಸ್.ಸೀತಾರಾಮ್,
ಜಿ.ಕೆ.ಗೋವಿಂದರಾವ್,
ಡಾ.ಮರುಳಸಿದ್ದಪ್ಪ,
ಕೆ.ರಾಮದಾಸ್
ವಿಜಯ ಕರ್ನಾಟಕ 14.02.05

ಇತ್ತೀಚಿನ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಪ್ರಧಾನಮಂತ್ರಿಯವರು 'ದೇಶದ ಆರ್ಥಿಕತೆಯು ಉತ್ತಮವಾಗಿ ಮುನ್ನಡೆಯುತ್ತಿದ್ದು ಉದಾರೀಕರಣವನ್ನು ವಿರೋಧಿಸಿದವರ ಬಾಯಿ ಮುಚ್ಚಿಸಿದೆ' ಎಂದು ಹೇಳಿದ್ದರು.

ದೇಶದ ಆರ್ಥಿಕವು ಬೆಳವಣಿಗೆ ಹೊಂದುವುದನ್ನು ಎಲ್ಲಾ ಭಾರತೀಯರು ಸ್ವಾಗತಿಸುತ್ತಾರೆ. ಆದರೆ, ಅದರ ಫಲ ಕೆಲವೇ ಶ್ರೀಮಂತರ ಕೈಗೆ ಹೋಗಿ ಬಡವರ ಬಾಯಿಗೆ ಮಣ್ಣಾಗುವುದನ್ನು ಮಾತ್ರ ಬಹಳಷ್ಟು ಮಂದಿ, ವಿಶೇಷವಾಗಿ ಎಡಪಕ್ಷಗಳು ವಿರೋಧಿಸುತ್ತವೆ. ಆದ್ದರಿಂದಲೇ ಉದಾರೀಕರಣಕ್ಕೆ ವಿರೋಧ.

ಹಿಂದಿನ ಬಿಜೆಪಿ ಸರಕಾರದ ಚುನಾವಣಾ ಘೋಷಣೆ 'ಭಾರತ ಪ್ರಕಾಶಿಸುತ್ತಿದೆ' 'ಫೀಲ್‌ಗುಡ್'ಗಳು ಗಾಳಿಗೆ ತೇಲಿ ಹೋದದ್ದನ್ನು ಯಾರೂ ಮರೆತಿಲ್ಲ. ಭಾರತ ಪ್ರಕಾಶಿಸಿದ್ದು ಕೆಲವೇ ಕೆಲವು ಜನರಿಗೆ ಮಾತ್ರ, ಜನ ಸಾಮಾನ್ಯರಿಗಲ್ಲ ಎಂಬುದನ್ನು ಜನರು ತಮ್ಮ ಅನುಭವದಿಂದ ತಿಳಿದುಕೊಂಡಿದ್ದಲ್ಲದೆ, ತಮ್ಮ ಮತದಾನದ ಮೂಲಕ ಅದನ್ನು ವ್ಯಕ್ತಪಡಿಸಿದ್ದರು.

ಉದಾರೀಕರಣದ ಈ ಅವಧಿಯು ದೇಶದ ಆರ್ಥಿಕ ಅನುಭವವನ್ನು ಹೇಳುತ್ತಿದೆ. ಈ ಕೆಳಗಿನ ಮೂರು ಅಂಶಗಳನ್ನು ಗಮನಿಸಿದರೆ ನಿಜ ಸಂಗತಿ ಬೆಳಕಿಗೆ ಬರುತ್ತದೆ. (ಲೇಖನದ ಎಲ್ಲಾ ಅಂಕಿ ಅಂಶಗಳನ್ನು ಹಣಕಾಸು ಸಚಿವಾಲಯದ ವೆಬ್‌ಸೈಟ್‌ನಿಂದ ಪಡೆದುಕೊಳ್ಳಲಾಗಿದೆ).

ಮೊದಲನೆಯದಾಗಿ, ಈ ಅವಧಿಯಲ್ಲಿ ಕೇಂದ್ರ ಸರಕಾರವು ವಿಧಿಸಿದ ತೆರಿಗೆ ಮತ್ತು ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ)ಗಳ ಅನುಪಾತವು 1989-90ರಲ್ಲಿ 10.62 ಇದ್ದದ್ದು 1998-99 ರಲ್ಲಿ 8.26 ಕ್ಕೆ ಇಳಿದಿದೆ. ಅಂದರೆ ತೆರಿಗೆಯ ಒಟ್ಟು ಪ್ರಮಾಣದಲ್ಲಿ ಎರಡು ಪಾಯಿಂಟುಗಳಷ್ಟು ಕಡಿತ ಉಂಟಾಗಿದೆ.

2000-01 ರಲ್ಲಿ ಮಾತ್ರ 9.5ಕ್ಕೆ ಏರಿತ್ತು. ಇದು ಜಗತ್ತಿನಲ್ಲೇ ಅತ್ಯಂತ ಕಡಿಮೆ ತೆರಿಗೆ ವಿಧಿಸುವ ದೇಶ ಭಾರತ ಎಂದಾಗಿದೆ. (ಶ್ರೀಮಂತರಿಗೆ ಮಾತ್ರ) 'ಏಸಿಯಾದ ಹುಲಿಗಳು' ಎಂದು ಕರೆಯಲ್ಪಡುವ ಮಲೇಶ್ಯಾ, ಸಿಂಗಾಪುರ ಇತ್ಯಾದಿ ದೇಶಗಳಲ್ಲಿ ತೆರಿಗೆ ಮತ್ತು ಜಿಡಿಪಿ ಅನುಪಾತವು 20ಕ್ಕಿಂತ ಹೆಚ್ಚಾಗಿದ್ದು, ಮುಂದುವರಿದ ಯುರೋಪು ರಾಷ್ಟ್ರಗಳಲ್ಲಿ 30 ರಿಂದ 40 ಮತ್ತು ಸ್ವೀಡನ್‌ನಂತಹ ದೇಶಗಳಲ್ಲಿ ತೆರಿಗೆ ಮತ್ತು ಜಿಡಿಪಿ ಅನುಪಾತವು 50ಕ್ಕಿಂತಲೂ ಹೆಚ್ಚಿದೆ.

ಇಂತಹ ಪರಿಸ್ಥಿತಿಯಲ್ಲಿ ಸರಕಾರವು ಶ್ರೀಮಂತ ವಿಭಾಗಕ್ಕೆ ತೆರಿಗೆ ಹೆಚ್ಚಿಸಿ, ಬಡವರಿಗೆ ಸಂವಿಧಾನಬದ್ಧ ಅಗತ್ಯಗಳನ್ನು ಪೂರೈಸಬೇಕಾಗಿತ್ತು. ಉದಾರೀಕರಣದ ಅವಧಿಯಲ್ಲಿ ಜಿಡಿಪಿಯ ಶೇ.2ರಷ್ಟು ತೆರಿಗೆ ಕಡಿಮೆ ಮಾಡಲಾಗಿದೆ. ದೇಶದ ಒಟ್ಟು ಆಂತರಿಕ ಉತ್ಪನ್ನ 3,00,000 ಕೋಟಿ ರೂ. (3 ಲಕ್ಷ ಕೋಟಿ) ಎಂದು ಅಂದಾಜು ಮಾಡಲಾಗಿದ್ದು ಶೇ.2ರಷ್ಟು ತೆರಿಗೆ ಕಡಿಮೆ ಆಗಿದೆ ಎಂದರೆ, ಶ್ರೀಮಂತರಿಗೆ 60,000 ಕೋಟಿ ರೂ ತೆರಿಗೆ ಲಾಭ ಆಗಿದೆ ಎಂದರ್ಥ. ಇನ್ನೊಂದು ಅರ್ಥದಲ್ಲಿ ತೆರಿಗೆ ಮತ್ತು ಜಿಡಿಪಿಗಳ ಅನುಪಾತದಲ್ಲಿ ಕಡಿಮೆ ಆಗಿದೆ ಎಂದರೆ ಹಿಂದೆ ಜಾಸ್ತಿ ತೆರಿಗೆ ನೀಡುತ್ತಿದ್ದ ಶ್ರೀಮಂತರು ಇಂದು ಕಡಿಮೆ ತೆರಿಗೆ ನೀಡುತ್ತಿದ್ದಾರೆ ಎಂದಾಗುತ್ತದೆ. ಬಂಡವಾಳ ಹೂಡಿಕೆಯ ಹೆಸರಿನಲ್ಲಿ ಶ್ರೀಮಂತರಿಗೆ ಮತ್ತು ದೊಡ್ಡ ದೊಡ್ಡ ಉದ್ದಿಮೆಗಳಿಗೆ ಉದಾರೀಕರಣದ ಅವಧಿಯಲ್ಲಿ

ಸರ್ಕಾರ ಬಜೆಟ್ ಆರ್ಥಿಕ ಸಮೀಕ್ಷೆಗಳು ಪ್ರಕಟವಾಗುತ್ತವೆ. ಈ ಆಳುವವರ ನೀತಿಯು ದೇಶದ ಜನಸಾಮಾನ್ಯರ ಸ್ಥಿತಿಯನ್ನು ಎಷ್ಟು ಘಾಸಿಗೊಳಿಸಿವೆಯೆಂದು ನೋಡಬೇಕಾಗ ಅಗತ್ಯವಿದೆ. ಈ ಸರ್ಕಾರ ಕನಿಷ್ಠ ಕಾರ್ಯಕ್ರಮ ಜಾರಿಯ ಆಧಾರವಾಗಬೇಕಿದೆ.

ಉದಾರೀಕರಣದ ಫಲ

ಉಳ್ಳವರಿಗೆ ಉತ್ಸವ ಬಡವರಿಗೆ ಕಣ್ಣೀರು

ಸೀತಾರಾಂ ಯೆಚೂರಿ

ತೆರಿಗೆ ವಿನಾಯಿತಿ ನೀಡಿದ್ದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು.

ಒಟ್ಟಾರೆ ಹೇಳುವುದಾದರೆ, ವಿವಿಧ ಷರತ್ತುಗಳ ಹೆಸರಿನಲ್ಲಿ ಬಡವರಿಗೆ ಮಧ್ಯಮವರ್ಗದವರಿಗೆ ನೀಡುತ್ತಿದ್ದ ರೇಶನ್, ಸೀಮೆ ಎಣ್ಣೆ, ಗ್ಯಾಸ್, ಪೆಟ್ರೋಲ್, ಡೀಸೆಲ್, ಗೊಬ್ಬರ ಇತ್ಯಾದಿಗಳಲ್ಲಿ ಸಬ್ಸಿಡಿ ಕಡಿಮೆ ಮಾಡಿದ ಸರಕಾರ ತೆರಿಗೆ ಕಡಿಮೆ ಮಾಡುವುದರ ಮೂಲಕ ಶ್ರೀಮಂತರಿಗೆ ಸಬ್ಸಿಡಿ ಹೆಚ್ಚು ಮಾಡಿದೆ. ಇದು ಭಾರತ ಸರಕಾರ ಅನುಸರಿಸುತ್ತಿರುವ ಉದಾರೀಕರಣ ನೀತಿಯ ಫಲ.

ಉದಾರೀಕರಣ ನೀತಿಗಳು ಬಡಜನರಿಗೆ ಎಷ್ಟು ವಿರುದ್ಧವಾಗಿತ್ತೆಂದರೆ, 1991ರಿಂದೀಚೆಗೆ ನರಸಿಂಹರಾವ್ ಸೇರಿದಂತೆ ಯಾವುದೇ ಪ್ರಧಾನ ಮಂತ್ರಿಗಳು ಹೆಚ್ಚು ಕಡಿಮೆ ಎರಡನೇ ಬಾರಿಗೆ ಆಯ್ಕೆಯಾಗಿಲ್ಲ. ಜನಪ್ರಿಯ ಸರಕಾರಗಳು ಎಂದೆನಿಸಿಕೊಂಡಿದ್ದ ಕರ್ನಾಟಕದ ಎಸ್.ಎಂ.ಕೃಷ್ಣ ಸರಕಾರ, ಆಂಧ್ರದ ಚಂದ್ರಬಾಬು ನಾಯ್ಡು ಸರಕಾರ ಸೋತದ್ದು ಉದಾರೀಕರಣ ನೀತಿಗಳನ್ನು ಲಂಗುಲಗಾಮಿಲ್ಲದೆ ಜಾರಿ ಮಾಡಿದುದರ ಫಲವಾಗಿ. ಆದ್ದರಿಂದ ಜನರ ಅತೃಪ್ತಿಯನ್ನು ಕಡಿಮೆ ಮಾಡಬೇಕಾದರೆ, ಕುಸಿಯುತ್ತಿರುವ ತೆರಿಗೆಯ ಆದಾಯವನ್ನು ಹೆಚ್ಚು ಮಾಡಲೇಬೇಕಾಗುತ್ತದೆ. ಹಾಗೆ ಮಾಡಬೇಕೆಂದಾದಲ್ಲಿ ಜನರ ಒತ್ತಡ ತೀವ್ರಗೊಳ್ಳಬೇಕಾಗುತ್ತದೆ.

ಎರಡನೆಯದಾಗಿ, ಉದಾರೀಕರಣವಾದಿಗಳು ದೇಶದ ಕೈಗಾರಿಕಾ ಕ್ಷೇತ್ರವನ್ನು ವಿಶೇಷವಾಗಿ ಆಂತರಿಕ ಉತ್ಪನ್ನವನ್ನು ಹೆಚ್ಚಿಸುವ ಕೈಗಾರಿಕೆಗಳನ್ನು ಬಲಪಡಿಸುವುದಾಗಿ ಹೇಳುತ್ತಿದ್ದಾರೆ. ಆದರೆ, ಹಾಗೆ ಆಗುತ್ತಿಲ್ಲ. 1990-91 ರಲ್ಲಿ ಸಿದ್ಧ ವಸ್ತು ತಯಾರಿಕೆ ಮತ್ತು ಜಿಡಿಪಿ ನಡುವಿನ ಅನುಪಾತ 18.7 ಇದ್ದದ್ದು 2003-04 ರಲ್ಲಿ 15.6 ಕ್ಕೆ ಇಳಿದಿದೆ. ಅಂದರೆ ಕಾರ್ಖಾನೆಗಳಲ್ಲಿ ತಯಾರಾಗುತ್ತಿರುವ ಸಾಮಗ್ರಿಗಳ ಪಾಲು ಹೆಚ್ಚಾಗುವ ಬದಲಾಗಿ ಕಡಿಮೆ ಆಗಿದೆ. ಏಕೆ ಹೀಗಾಗಿದೆ ಎಂಬುದನ್ನು ಸರಕಾರ ಮತ್ತು ಉದಾರೀಕರಣಪರ ವ್ಯಕ್ತಿಗಳು ಆಲೋಚಿಸಬೇಕಾಗಿದೆ.

> **ಜನಪ್ರಿಯ ಸರಕಾರಗಳು ಎಂದೆನಿಸಿಕೊಂಡಿದ್ದ ಕರ್ನಾಟಕದ ಎಸ್.ಎಂ.ಕೃಷ್ಣ ಸರಕಾರ, ಆಂಧ್ರದ ಚಂದ್ರಬಾಬು ನಾಯ್ಡು ಸರಕಾರ ಸೋತದ್ದು ಉದಾರೀಕರಣ ನೀತಿಗಳನ್ನು ಲಂಗುಲಗಾಮಿಲ್ಲದೆ ಜಾರಿ ಮಾಡಿದುದರ ಫಲವಾಗಿ.**

ಕಾರ್ಖಾನೆಗಳಲ್ಲಿ ಸಿದ್ಧವಸ್ತುಗಳ ಉತ್ಪಾದನೆ ಹೆಚ್ಚು ಆಗಬೇಕಾದರೆ, ಆಂತರಿಕ ಬೇಡಿಕೆ ಹೆಚ್ಚಾಗಬೇಕು ಎಂದು ಹೇಳಲು ಆರ್ಥಿಕ ತಜ್ಞರು ಬೇಕಾಗಿಲ್ಲ. ಯಾವುದೇ ಸಾಮಾನ್ಯ ಜನ ಇದನ್ನು ಅಂದಾಜು ಮಾಡಬಹುದು. ಆದರೆ ಉದಾರೀಕರಣದ ಅವಧಿಯಲ್ಲಿ ಆಂತರಿಕ ಬೇಡಿಕೆ ಕುಸಿದಿದೆ. ಉದಾರೀಕರಣದ ಮೂಲಕ ಕಡಿಮೆ ಬಡ್ಡಿದರದಲ್ಲಿ ಬಂಡವಾಳ ಸುಲಭವಾಗಿ ಸಿಕ್ಕಿದರೆ ಕೈಗಾರಿಕಾ ಅಭಿವೃದ್ಧಿಯಾಗುತ್ತದೆ ಎಂದು ಆಳುವ ಸರ್ಕಾರಗಳು ಭಾವಿಸಿದ್ದವು. ಆದರೆ ಉತ್ಪಾದನೆ ಹೆಚ್ಚಿಗೆ ಮಾಡಲು ಬಂಡವಾಳ ಸಿಕ್ಕಿದರೆ ಸಾಲದು. ಬಂಡವಾಳದಿಂದ ಉತ್ಪಾದನೆಯಾದ ವಸ್ತುಗಳನ್ನು ಖರೀದಿಸಲು ಸಾಮರ್ಥ್ಯವುಳ್ಳ ಜನರ ಸಂಖ್ಯೆ ಜಾಸ್ತಿಯಾಗದಿದ್ದರೆ, ಕೈಗಾರಿಕಾ ಬೆಳವಣಿಗೆ ಹೆಚ್ಚುವುದಿಲ್ಲ, ಬದಲಾಗಿ ಕುಂಠಿತವಾಗುತ್ತದೆ. ಆದ್ದರಿಂದ ಸಮಾಜದಲ್ಲಿರುವ ಜನರ ಕೊಳ್ಳುವ ಸಾಮರ್ಥ್ಯ ಹೆಚ್ಚಾಗಬೇಕು. ಆಗ ಆಂತರಿಕ ಬೇಡಿಕೆ ಹೆಚ್ಚುತ್ತದೆ. ಅಂದರೆ ಎಷ್ಟೇ ಬಂಡವಾಳ ಹರಿದುಬಂದರೂ, ಆಂತರಿಕ ಬೇಡಿಕೆ ಹೆಚ್ಚಾಗದಿದ್ದಲ್ಲಿ ಕೈಗಾರಿಕಾ ಬೆಳವಣಿಗೆ ಆಗಲು ಸಾಧ್ಯವಿಲ್ಲ.



ಉದಾರೀಕರಣವನ್ನು ಟೀಕೆ ಮಾಡುವ ನಮ್ಮಂತಹವರು ಇದನ್ನು ಹಲವು ಬಾರಿ ಸರಕಾರಕ್ಕೆ ಮನವರಿಕೆ ಮಾಡಲು ಪ್ರಯತ್ನಿಸಿದ್ದೇವೆ. ಸಾಮಾಜಿಕ ಮತ್ತು ಆರ್ಥಿಕ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸಲು ಸಾರ್ವಜನಿಕ ಬಂಡವಾಳವನ್ನು ದೊಡ್ಡ ಪ್ರಮಾಣದಲ್ಲಿ ಹೂಡಿದರೆ ಮಾತ್ರ, ಆ ಮೂಲಕ ಉದ್ಯೋಗ ಅವಕಾಶಗಳು ಹೆಚ್ಚುವುದರಿಂದ ಮಾತ್ರವೇ ಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ. ಮಾತ್ರವಲ್ಲದೆ, ಕೈಗಾರಿಕಾ ಬೆಳವಣಿಗೆಗಳಿಗೂ ಸಹಾಯವಾಗುತ್ತದೆ. ಆದರೆ ನಮ್ಮ ವಸ್ತುನಿಷ್ಠ ಸಲಹೆಗಳಿಂದ, ಉನ್ನತಮಟ್ಟದ ಆರ್ಥಿಕ ನಿರ್ಧಾರಕರ ಮನಃ ಪರಿವರ್ತಿಸಲು ಸಾಧ್ಯವಾಗುತ್ತಿಲ್ಲ. 'ಬಂಡವಾಳದ ಹರಿವು ಕಡಿಮೆಯಾಗಿದೆ' ಎಂದು ಅದರ ಬಗ್ಗೆ ಒತ್ತು ಕೊಡುವುದರ ಬದಲಾಗಿ, 'ಆಂತರಿಕ ಬೇಡಿಕೆ ಕಡಿಮೆ ಆಗಿದೆ' ಎಂಬ ವಾಸ್ತವ್ಯವನ್ನು ಗಮನದಲ್ಲಿರಿಸಿ ಉದಾರೀಕರಣ ನೀತಿಗಳು ಆ ಕಡೆ ಗಮನ ನೀಡಬೇಕು. ಆಗ ಮಾತ್ರವೇ ಉತ್ಪಾದನೆ ಹೆಚ್ಚಿ ಆರ್ಥಿಕ ಬೆಳವಣಿಗೆ ಆಗಲು ಸಾಧ್ಯ.

ಮೂರನೆಯದಾಗಿ, ದೇಶದ ಆರ್ಥಿಕತೆಯ ಬೆಳವಣಿಗೆಯನ್ನು ಅಂದಾಜು ಮಾಡಬೇಕಾದಲ್ಲಿ ಆಂತರಿಕ ಬಂಡವಾಳ ಸಂಚಯ (Capital Formation) ಎಷ್ಟು ಹೆಚ್ಚಿದೆ ಎಂಬುದನ್ನು ಪರಿಗಣಿಸಬೇಕಾಗುತ್ತದೆ. ಬಂಡವಾಳ ಸಂಚಯವು ಬೆಳವಣಿಗೆಯ ಹಾದಿಯಲ್ಲಿದೆ ಎಂದಾದರೆ, ಆರ್ಥಿಕತೆಯ ತಳಹದಿ ಮತ್ತು ಭವಿಷ್ಯತ್ತು ಉತ್ತಮವಾಗಿದೆ ಎಂದರ್ಥ. ಆದರೆ ಉದಾರೀಕರಣದ ಅವಧಿಯಲ್ಲಿ, ಅಂದರೆ 1991 ರಲ್ಲಿ ಬಂಡವಾಳ ಸಂಚಯ ಮತ್ತು ಜಿಡಿಪಿ ಅನುಪಾತವು 26.3 ಇದ್ದದ್ದು, 2001-02 ರಲ್ಲಿ 22.6 ಕ್ಕೆ ಕುಸಿದಿದೆ. 2003-04 ರಲ್ಲಿ ಇದು ಸ್ವಲ್ಪ ಏರಿಕೆಯಾಗುತ್ತಿದೆ ಎಂಬುದನ್ನು ತೋರಿಸಿದರೂ, ಅದೇ ಬೆಳವಣಿಗೆ ಮುಂದುವರಿಯುತ್ತದೆಯೇ ಎಂಬುದನ್ನು ಕಾದು ನೋಡಬೇಕಾಗಿದೆ. ಕಳೆದ ಒಂದು ದಶಕದ ಅವಧಿಯಲ್ಲಿ ಜಿಡಿಪಿ ಮತ್ತು ಬಂಡವಾಳ ಸಂಚಯದ ಅನುಪಾತದಲ್ಲಿ ಕಡಿಮೆಯಾಗುತ್ತಿರುವುದು ಕಳವಳಕಾರಿಯಾಗಿದೆ ಮಾತ್ರವಲ್ಲ, ಉದಾರೀಕರಣದ ಕಸರತ್ತುಗಳು ಇದಕ್ಕೆ ಕಾರಣ ಎಂಬುದು ಸ್ಪಷ್ಟ. ಇತ್ತೀಚಿನ ಅಂಕಿಅಂಶಗಳ ಪ್ರಕಾರ, ಬಂಡವಾಳ ಸಂಚಯವು ಮೊದಲಿನ ಹಂತಕ್ಕೆ ಬರುತ್ತಿದೆ ಎಂದು ಭಾವಿಸಿದರೂ, ಅದು ಸತತವಾಗಿ ಕಾಯ್ದುಕೊಳ್ಳಲಿದೆಯೇ ಎಂದು ಗಮನಿಸಬೇಕು.

ಮೇಲಿನ ಮೂರು ಅಂಶಗಳನ್ನು ಒಟ್ಟಾರೆಯಾಗಿ ಗಮನಿಸಿದರೆ, ದೇಶದ ಆರ್ಥಿಕ ಪರಿಸ್ಥಿತಿ ಮತ್ತು ಜನತೆ ಗಂಭೀರ ಸವಾಲುಗಳನ್ನು ಎದುರಿಸುತ್ತಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ನಿರಂತರ ಆರ್ಥಿಕ ಅಭಿವೃದ್ಧಿ ಮತ್ತು ಅದರಲ್ಲಿ ಜನರಿಗೆ ನ್ಯಾಯವಾದ ಪಾಲು ದೊರೆಯುವಿಕೆ ಇಂದಿನ ಅಗತ್ಯಗಳು. ಹಸಿವಿನ ಸಾವು ಮತ್ತು ರೈತರ ಆತ್ಮಹತ್ಯೆಗಳು ಮುಂದುವರಿಯುತ್ತಿರುವ ಕೃಷಿ ಬಿಕ್ಕಟ್ಟಿಗೆ ಮೂಕ ಸಾಕ್ಷಿಯಾಗಿದ್ದು ಇಂದಿನ ಆರ್ಥಿಕ ನೀತಿಗಳು ಜನರ ಬವಣೆಯನ್ನು ನೀಗಲು ವಿಫಲವಾಗಿದೆ ಎಂದೇ ನಮ್ಮಂತಹ ಉದಾರೀಕರಣದ ಟೀಕಾಕಾರರು ಹೇಳಬೇಕಾಗುತ್ತದೆ.

2004ರ ಚುನಾವಣೆಯ ಜನಾದೇಶದ ಮೂಲಕ ಭಾರತದ ಜನತೆ, ' ದೊಡ್ಡ ಉದ್ದಿಮೆದಾರರ ಲಾಭ ಹೆಚ್ಚಳ ಮಾತ್ರ ಆರ್ಥಿಕ ಬೆಳವಣಿಗೆಯ ಸೂಚ್ಯಾಂಕವಲ್ಲ, ಅದು ಜನರ ಕಲ್ಯಾಣ ಕೇಂದ್ರಿತವಾಗಿರಬೇಕು' ಎಂಬ ಅಂಶವನ್ನು ಒತ್ತಿ ಹೇಳಿದ್ದಾರೆ. ಯುಪಿಎ ಸರಕಾರದಿಂದ ಈ ಬದಲಾವಣೆಯನ್ನು ಜನತೆ ಬಯಸುತ್ತದೆ. ಅಂತಹ ಬದಲಾವಣೆಯನ್ನು ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಒಳಗೊಂಡಿದ್ದು, ಅದನ್ನು ಜಾರಿಗೊಳಿಸಿದಲ್ಲಿ ಮಾತ್ರ ಸರಕಾರ ಉತ್ತಮ ಸೇವೆ ಸಲ್ಲಿಸಿದಂತಾಗುತ್ತದೆ.

ಕಣ್ಣೀರು ಅನುಭವ

ಎಲ್ಲಿಂದ ಬರುತಿಹುದು ಕಣ್ಣೀರು ಗೊತ್ತೇ?
ಹಗಲಿರುಳು ಸುರಿಸಿದರು ಬತ್ತದ್ದೆ ಮತ್ತೆ
ಶುದ್ಧ ನೀರೂ ಸಿಗದ ಬಡಜನರ ಬಾಳು
ಕಣ್ಣೀರಿನಲ್ಲಿಯೇ ಕೈತೊಳೆವ ಗೋಳು
- ವಿಡಂಬಾರಿ

ಬೆಂಗಳೂರಿನಲ್ಲಿ ವಿಮಾ


'ಶಾಂತಿ ಮತ್ತು ಸಮೃದ್ಧಿಯ ಮುಂ



ಕಳೆದ ವಾರ ಆರು ದಿನಗಳ ಕಾಲ ಕರ್ನಾಟಕದ ರಾಜಧಾನಿಯಲ್ಲಿ ಭಾರತದ 'ವಿವಿಧತೆಯಲ್ಲಿ ಏಕತೆ'ಯ ಒಂದು ಮಹಾದರ್ಶನ ದೊರೆಯಿತು. ದೇಶದ ಪ್ರಜಾಪ್ರಭುತ್ವ ಆಂದೋಲನದಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ, ಒಂದು ಲಕ್ಷದಷ್ಟು ಸದಸ್ಯತ್ವವಿರುವ ಅಖಿಲ ಭಾರತ ವಿಮಾ ನೌಕರರ ಸಂಘದ 20ನೇ ಮಹಾಸಮ್ಮೇಳನ ಬೆಂಗಳೂರಿನಲ್ಲಿ ಫೆಬ್ರವರಿ 19 ರಂದು ಸಡಗರದ ವಾತಾವರಣದಲ್ಲಿ ಆರಂಭವಾಯಿತು. ತಮ್ಮ ಶಾಂತಿ, ಸಮೃದ್ಧಿಯ ಹೋರಾಟಗಳ ಜತೆ-ಜತೆಗೇ ದೇಶದ ಎಲ್ಲಾ ಶ್ರಮಜೀವಿಗಳೊಂದಿಗೂ ಹೆಜ್ಜೆ ಹಾಕುವ ನಿರ್ಧಾರದೊಂದಿಗೆ, 'ಆ ಮುಂಜಾವ'ನ್ನು ಶ್ರಮಜೀವಿ ವರ್ಗವೇ ತರುತ್ತದೆ' ಎಂಬ ಆತ್ಮವಿಶ್ವಾಸದೊಂದಿಗೆ ಫೆಬ್ರವರಿ 24 ರಂದು ಮುಕ್ತಾಯಗೊಂಡಿತು.

ವರದಿ : ಎನ್.ಕೆ.ವೇದರಾಜ

ರವೀಂದ್ರ ಕಲಾಕ್ಷೇತ್ರದಿಂದ ಆರಂಭಗೊಂಡು ಶಿವಾಜಿನಗರದ ಸ್ಟೇಡಿಯಂವರೆಗೆ ನಡೆದ ಒಂದು ಭವ್ಯ ಹಾಗೂ ಉತ್ಸಾಹಭರಿತ ಮೆರವಣಿಗೆಯ ನಂತರ ಶಿವಾಜಿನಗರ ಸ್ಟೇಡಿಯಂನಲ್ಲಿ ಫೆಬ್ರವರಿ 19 ರಂದು ಉದ್ಘಾಟನಾ ಅಧಿವೇಶನ ನಡೆಯಿತು. ಕುವೆಂಪುರವರ 'ಸರ್ವರಿಗು ಸಮಪಾಲು, ಸರ್ವರಿಗೂ ಸಮಬಾಳು' ಹಾಗೂ ಸಾಹಿರ್ ಲುಧಿಯಾನ್‌ವೀಯವರ 'ವೋ ಸುಬಹ್ ಹಮೀಂಸೆ ಆಯೆಗಿ' (ಆ ಮುಂಜಾವು ನಮ್ಮಿಂದಲೇ ಬರಲಿದೆ) ಎಂಬ ಸ್ವಾತಂತ್ರ್ಯ ಆಂದೋಲನದ ಆಶಯಗಳನ್ನು ಬಿಂಬಿಸುವ ಸಮ್ಮೇಳನಕ್ಕೆ ಪೀಠಿಕೆಯಂತಿದ್ದವು.




ಮಹಾಸಮ್ಮೇಳನ ಉದ್ಘಾಟಿಸಿದ ರೂಪಚಂದ್ ಪಾಲ್

ಮಹಾಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಪ್ರೊ. ಬಿ.ಕೆ.ಚಂದ್ರಶೇಖರ್ ಅಖಿಲ ಭಾರತ ವಿಮಾ ನೌಕರರ ಸಂಘ(ಎಐಐಇಎ)ಈ ಮಹಾಸಮ್ಮೇಳನ ಎರಡನೇ ಬಾರಿಗೆ ಬೆಂಗಳೂರಿನಲ್ಲಿ ನಡೆಯುತ್ತಿದೆ (ಈ ಹಿಂದೆ 1982 ರಲ್ಲಿ ನಡೆದಿತ್ತು) ಎನ್ನುತ್ತಾ ಬೆಂಗಳೂರು ನಗರ ಸ್ವಾತಂತ್ರ್ಯದ ನಂತರ ಒಂದು ಸ್ವಾವಲಂಬೀ ಆರ್ಥಿಕದ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದೆ ಎಂದರು. ಹಲವು ಸಾರ್ವಜನಿಕ ವಲಯದ ಉದ್ದಿಮೆಗಳೊಂದಿಗೆ ಕಾರ್ಮಿಕವರ್ಗದ ಸಂಖ್ಯೆಯೂ ಹೆಚ್ಚಿತು. ಜತೆಗೆ ಪ್ರಗತಿಪರ ಆಂದೋಲನಗಳೂ ಮೂಡಿಬಂದವು. ಇತ್ತೀಚಿನ ಬೆಳವಣಿಗೆಗಳಿಂದ ಒಂದೆಡೆ ಈ ಸಾರ್ವಜನಿಕ ವಲಯದ ಉದ್ದಿಮೆಗಳ ಮೇಲೆ ದುಷ್ಪರಿಣಾಮ ಉಂಟಾಗಿದ್ದರೆ, ಮತ್ತೊಂದೆಡೆ ಮಾಹಿತಿ ತಂತ್ರಜ್ಞಾನ, ಜೀವತಂತ್ರಜ್ಞಾನದ ಕ್ಷೇತ್ರಗಳು ಇಲ್ಲಿ ಬೆಳೆಯುತ್ತಿವೆ. ಜತೆಗೆ ಅಸಮಾನತೆಗಳೂ ಬೆಳೆಯುತ್ತಿವೆ ಎಂದರು. ನಗರದ ಕಾರ್ಮಿಕವರ್ಗದ ಹೋರಾಟಗಳನ್ನು ನೆನಪಿಸುತ್ತಾ ಎಐಐಇಎ ನೇತೃತ್ವದಲ್ಲಿ ವಿಮಾ ನೌಕರರು ಕರ್ನಾಟಕದ ಪ್ರಗತಿಪರ ಆಂದೋಲನದ ಅವಿಭಾಜ್ಯ ಅಂಗವಾಗಿದ್ದಾರೆ, ಹಲವೆಡೆ ನೇತೃತ್ವದಲ್ಲಿದ್ದಾರೆ ಎಂದರು. ಇತ್ತೀಚೆಗೆ ಶೃಂಗೇರಿಯಲ್ಲಿ ಈ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ನಡೆದ ಜಾಥಾಗಳ ಸಂದರ್ಭದಲ್ಲಿ ಭಜರಂಗದಳದವರು ನಡೆಸಿದ ದುಷ್ಕೃತ್ಯವನ್ನು ಖಂಡಿಸುತ್ತಾ ರಾಜ್ಯದ ಕೋಮು ಸೌಹಾರ್ದ, ಶಾಂತಿಯನ್ನು ಕದಡಿಸುತ್ತಿರುವ ಕೋಮುವಾದ ವನ್ನು ನೇರವಾಗಿ ಎದುರಿಸಬೇಕು ಎಂದು ಕರೆ ನೀಡಿದರು.

'ಸುಧಾರಣೆ' ಯಾರಿಗಾಗಿ?

ಸಮ್ಮೇಳನದ ಉದ್ಘಾಟನೆ ನಡೆಸಿದ ಹಿರಿಯ ಸಿಪಿಐ(ಎಂ) ಸಂಸತ್ ಸದಸ್ಯ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಂಸದೀಯ ಸಮಿತಿಯ ಅಧ್ಯಕ್ಷ ಕಾಂ. ರೂಪ್‌ಚಂದ್ ಪಾಲ್ ದೇಶದ ಪ್ರಜಾಪ್ರಭುತ್ವ ಆಂದೋಲನದ ಅತ್ಯಂತ ಸಂಘಟಿತ ತುಕಡಿಯಾಗಿರುವ ಎಐಐಇಎ "ಆರ್ಥಿಕ ಸುಧಾರಣೆಯ ಹಿಂದಿನ ದಿನಗಳಲ್ಲೂ ಹಾಗೂ ನಂತರದ ದಿನಗಳಲ್ಲೂ ನಡೆಸಿದ ಅವಿಶ್ರಾಂತ ಹೋರಾಟಗಳು ಇತರರಿಗೆ ಸ್ಫೂರ್ತಿಯ ಚಿಲುಮೆಯಾಗಿವೆ ಎಂದೇ ಆರಂಭಿಸುತ್ತಾ ವಿಮಾ ಖಾಸಗೀಕರಣದ ವಿರುದ್ಧ ಹೋರಾಟ ಇತಿಹಾಸವನ್ನೇ ನಿರ್ಮಿಸಿತು ಎಂದು ನೆನಪಿಸಿದರು. ಈ ಹೋರಾಟದಲ್ಲಿ ವಿಮಾ ನೌಕರರು ಸಮಾಜದ ಪ್ರತಿಯೊಂದು ವಿಭಾಗವನ್ನು ತಲುಪಿ ವಿಮಾ ಖಾಸಗೀಕರಣದ ವಿರುದ್ಧ ಒಟ್ಟು ಒಂದೂವರೆ ಕೋಟಿಗೂ ಹೆಚ್ಚು ಸಹಿಗಳನ್ನು ಸಂಗ್ರಹಿಸಿ ಲೋಕಸಭಾಧ್ಯಕ್ಷರಿಗೆ ಅರ್ಪಿಸಿದರು. ಎಐಐಇಎ ನ ನಿರಂತರ ಶ್ರಮದಿಂದಾಗಿ ಎಲ್‌ಐಸಿ ಅಮೋಘ ಸಾಧನೆ ಮಾಡಲು ಸಾಧ್ಯವಾಗಿರುವುದು ಪ್ರಶಂಸನೀಯವಾದರೂ ನೌಕರರಿಗೆ ಆಗಸ್ಟ್ 2002 ರಿಂದ ಸಿಗಬೇಕಾಗಿರುವ ವೇತನ ಪರಿಷ್ಕರಣೆ ಹಾಗೂ ಅಗತ್ಯವಾದ ಸಿಬ್ಬಂದಿ ನೇಮಕಾತಿ ನಡೆಸಲು ಸರ್ಕಾರ ಅವಕಾಶ ನೀಡದಿರುವ ಬಗ್ಗೆ ಖೇದ ವ್ಯಕ್ತಪಡಿಸಿದರು.

2004 ರ ಜನಾದೇಶವನ್ನು ಪ್ರಸ್ತಾಪಿಸುತ್ತಾ ಒಂದು ಅಂಶವೆಂದರೆ ಕೋಮುವಾದದ ವಿರುದ್ಧ ಜನಗಳ ಸ್ಪಷ್ಟ ತೀರ್ಪು ಹಾಗೂ ಇನ್ನೊಂದು ಆರ್ಥಿಕ ನೀತಿಗಳ ವಿರುದ್ಧವೂ ಸ್ಪಷ್ಟ ತೀರ್ಪು ಎಂದರು; ಕರ್ನಾಟಕ ಆಂಧ್ರ ಪ್ರದೇಶಗಳಲ್ಲಿ ಇದು ಸ್ಪಷ್ಟವಾಗಿದೆ ಎಂದರು. ಆದರೂ ಯುಪಿಎ ಸರ್ಕಾರವೂ 'ಸುಧಾರಣೆ'ಯ ಬಗ್ಗೆ ಮಾತನಾಡತ್ತಿದೆ. ಈ 'ಸುಧಾರಣೆ' ಎಂದರೆ ಏನು? ಯಾರಿಗಾಗಿ ಈ 'ಸುಧಾರಣೆ'? ಎಡಪಕ್ಷಗಳು ಸುಧಾರಣೆಗೆ ವಿರುದ್ಧವಾಗಿಲ್ಲ. ಏಕೆಂದರೆ ಪಶ್ಚಿಮ ಬಂಗಾಳದಲ್ಲಿ ಎಡರಂಗ ಭೂಸುಧಾರಣೆ ತಂದಿದೆ. ಇದು ಜನಪರವಾದ ಒಂದು ಸುಧಾರಣೆ. ಆದರೆ ಈಗ 'ಸುಧಾರಣೆ'ಯೆನ್ನುವುದು ವಿಶ್ವ ಬ್ಯಾಂಕ್ (ಐಎಂಎಫ್ ಪ್ರಾಯೋಜಿತ) 'ಸುಧಾರಣೆ' ಮಾತ್ರ ಎಂದ ಅವರು ನಮ್ಮ ಸುಧಾರಣೆಗಳು ನಮ್ಮ ವಾಸ್ತವದೊಳಗೆ ಅನುಗುಣವಾಗಿರಬೇಕು ಎಂದರು. ಅದೇ ರೀತಿ ಅಗತ್ಯ ಕ್ಷೇತ್ರಗಳಲ್ಲಿ ವಿದೇಶಿ ನೇರ ಹೂಡಿಕೆಗೆ ಎಡಪಕ್ಷಗಳ ವಿರೋಧವಿಲ್ಲ. ಆದರೆ ವಿಮಾ ರಂಗದಲ್ಲಿ ಇದರ ಅಗತ್ಯ ಏನೇನೂ ಇಲ್ಲ



ಮುಖ್ಯ ಅತಿಥಿ ಎಲ್.ಸಿ.ಜೈನ್

ಎಂದು ಅವರು ಸ್ಪಷ್ಟವಾಗಿ ಸಾರಿದರು. ಸ್ವಾವಲಂಬೀ ಆರ್ಥಿಕ ಬೆಳವಣಿಗೆಗೆ ವಿರುದ್ಧವಾಗಿರುವ ನೀತಿಗಳ ವಿರುದ್ಧ ಐಕ್ಯ ಹೋರಾಟವನ್ನು ಬೆಸೆಯಬೇಕಾಗಿದ್ದು ಎಐಐಇಎ ಕೋಮುವಾದದ ವಿರುದ್ಧ ಹಾಗೂ ಜನಪರ ಸುಧಾರಣೆಗಳಿಗಾಗಿ ಹೋರಾಟಗಳಲ್ಲಿ ಮಹತ್ವದ ಪಾತ್ರವಹಿಸುತ್ತದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಭಾರತ ಮಾತೆಯ ನೋವನ್ನು ಗಮನಿಸಿ

ಹಿಂದೆ ಯೋಜನಾ ಆಯೋಗದ ಸದಸ್ಯರಾಗಿದ್ದ, ದಕ್ಷಿಣ ಆಫ್ರಿಕಾದಲ್ಲಿ ಭಾರತದ ರಾಯಭಾರಿ ಆಗಿದ್ದ ಹಾಗೂ ಪ್ರಸ್ತುತ ಬೆಂಗಳೂರಿನ 'ಭಾರತಪರ ಜನವೇದಿಕೆ'ಯ ಅಧ್ಯಕ್ಷರೂ ಆಗಿರುವ



ಸ್ವಾಗತಿಸುತ್ತಿರುವ ಪ್ರೊ. ಬಿ.ಕೆ.ಚಂದ್ರಶೇಖರ್

ಎಲ್.ಸಿ.ಜೈನ್ ಸಮಾರಂಭದ ಮುಖ್ಯ ಅತಿಥಿಯಾಗಿದ್ದರು. "ನೀವು ಬಹಳಷ್ಟು ವಿಮಾ ಪಾಲಿಸಿಗಳನ್ನು ನೀಡಿದ್ದೀರಿ. ಈಗ ಇನ್ನೊಂದು ವಿಮಾ ಪಾಲಿಸಿಯನ್ನು ನೀಡಿ. ಭಾರತ ಮಾತೆಗೆ. ಏಕೆಂದರೆ ಆಕೆ ನೋವುಣ್ಣುತ್ತಿದ್ದಾಳೆ' ಎಂದು ತಮ್ಮ ಭಾಷಣವನ್ನು ಆರಂಭಿಸಿದ ಅವರು ಭಾರತದ ಜನತೆಯ, ಮಕ್ಕಳ ಈಗಿನ ಪರಿಸ್ಥಿತಿಯ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದರು. ಸರ್ಕಾರೀ ಅಂಕೆ-ಸಂಖ್ಯೆಗಳ ಪ್ರಕಾರವೇ 5 ವರ್ಷಗಳವರೆಗಿನ ಕೂಸುಗಳಲ್ಲಿ ಅರ್ಧದಷ್ಟು ಕುಪೋಷಣೆಯಿಂದ ನರಳುತ್ತಿವೆ. ಸರ್ಕಾರದ ಗೋದಾಮುಗಳಲ್ಲಿ ಇರುವ 4 ಕೋಟಿ ಟನ್ ಆಹಾರಧಾನ್ಯಗಳು ಈ ಮಕ್ಕಳ ಹೊಟ್ಟೆ ತುಂಬಲು ಸಿಗುವುದಿಲ್ಲ ಎಂಬುದು ನೋವಿನ ಸಂಗತಿ. ಆದರೆ ದೇಶದ ಹಣಕಾಸು ಮಂತ್ರಿ ಶೇರು ಮಾರುಕಟ್ಟೆಯ 'ನೋವು'ಗಳನ್ನು ಶಮನ ಮಾಡಲು ಮುಂಬೈಗೆ ಧಾವಿಸುತ್ತಾರೆ. ಭಾರತ ಮಾತೆಯ ನೋವಿನ ಪರಿವೆ ಅವರಿಗಿಲ್ಲ ಎಂದು ಖೇದದಿಂದ ಎಲ್.ಸಿ.ಜೈನ್ ನುಡಿದರು. 'ಆರ್ಥಿಕ ಸುಧಾರಣೆ'ಗಳ ಬಗ್ಗೆ ಮಾತನಾಡುತ್ತಾ ಅವು 'ಸುಧಾರಣೆ'ಗಳಲ್ಲ, ವಿಷಪ್ರಾಶನ ಎಂದು ವರ್ಣಿಸುತ್ತಾ ಜಾಗತೀಕರಣವಿಲ್ಲದೆ ನಾವು ಬದುಕಲು ಸಾಧ್ಯವೇ ಇಲ್ಲ ಎಂದು ದಾರಿತಪ್ಪಿಸಲಾಗುತ್ತಿದೆ ಎಂದು ಅವರು



ಸಭೆಗೆ ಮೊದಲು ಭಾರಿ ಮೆರವಣಿಗೆ

ಭವ್ಯ, ಉತ್ಸಾಹವರ್ಧಕ ಮೆರವಣಿಗೆ

ಬೆಂಗಳೂರಿಗೆ ಮೆರವಣಿಗೆಗಳೇನೂ ಹೊಸತಲ್ಲ, ದುಡಿಯುವ ಜನರ ಸಮರಧೀರ ಮೆರವಣಿಗೆಗಳೂ ಹೊಸದಲ್ಲ. ಆದರೂ ಫೆಬ್ರವರಿ 19 ರ ವಿಮಾ ನೌಕರರ ಮೆರವಣಿಗೆ ವಿಶಿಷ್ಟವಾಗಿತ್ತು. ಅಖಿಲ ಭಾರತ ವಿಮಾ ನೌಕರರ ಸಂಘ ದೇಶದ ವಿಮಾ ನೌಕರರ ಅತಿ ಹಳೆಯ ಹಾಗೂ ಅತೀ ದೊಡ್ಡ ಸಂಘಟನೆ. ದೇಶದ ಮೂಲೆ-ಮೂಲೆಗಳಲ್ಲೂ ಎಐಐಇಎ ಬಾವುಟ ಹಾರುತ್ತಿರುತ್ತದೆ. ಫೆಬ್ರವರಿ 19 ರಂದು ಇವೆಲ್ಲಾ ಬೆಂಗಳೂರಿಗೆ ಬಂದಂತಿತ್ತು. ಶ್ರೀನಗರದಿಂದ ಹಿಡಿದು ತಿರುವನಂತಪುರ ದವರೆಗೆ, ಸೂರತ್‌ನಿಂದ ಹಿಡಿದು ಗುವಾಹಟಿಯವರೆಗೆ ವಿವಿಧ ಭಾಷೆಗಳ ನೂರಕ್ಕೂ ಹೆಚ್ಚು ಕೆಂಪು ಬ್ಯಾನರುಗಳು, ಸಾವಿರಾರು ಘೋಷಣಾ ಫಲಕಗಳು ವೈವಿಧ್ಯತೆಯಲ್ಲಿ ಏಕತೆಯನ್ನು ಸಾರುತ್ತಿದ್ದವು. ಒಂದು ಬಲಿಷ್ಠ ಪ್ರಜಾ ಪ್ರಭುತ್ವ ಆಂದೋಲನವೇ ದೇಶದ ಐಕ್ಯತೆಯೇ ಆಧಾರ ಎಂಬುದನ್ನು ಇದು ಮತ್ತೊಮ್ಮೆ ಮನದಟ್ಟು ಮಾಡಿಸಿತು.

ಇತರ ದುಡಿಯುವ ಜನಗಳಿಗಿಂತ ಹೆಚ್ಚು ವೇತನ ಗಳಿಸುತ್ತಿರುವ ಮಧ್ಯಮ ವರ್ಗದ ನೌಕರರಲ್ಲಿ ಸಂತೃಪ್ತ, ಸ್ವಾರ್ಥ ಮನೋಭಾವವೇ ಹೆಚ್ಚು. ಸಮರಶೀಲತೆ ಕಡಿಮೆ ಎಂದು ನಂಬಿದವರನ್ನು ಬೆರಗಾಗಿಸುವಂತಿತ್ತು ಈ ಮೆರವಣಿಗೆ. ಕಾರ್ಮಿಕ ಸಂಘಟನೆಯ ಪ್ರಜ್ಞಾಪೂರ್ವಕ ಪ್ರಯತ್ನಗಳಿಂದ ಈ ವಿಭಾಗ ದೇಶದ ಪ್ರಜಾಪ್ರಭುತ್ವ ಆಂದೋಲನದ ಒಂದು ಬಲಿಷ್ಟ ತುಕಡಿಯಾಗಲು ಸಾಧ್ಯ ಎಂಬುದು ಮೆರವಣಿಗೆಯ ಮಾರ್ಗಮಧ್ಯದಲ್ಲಿ ಶುಭಾಶಯ ಕೋರಲು ನಿಂತಿದ್ದ ಕೃಷಿ ಕೂಲಿಕಾರರ ಸಂಘ, ರೈತ ಸಂಘ, ಮಹಿಳಾ ಸಂಘಟನೆ, ಡಿವೈಎಫ್‌ಐ, ಎಸ್‌ಎಫ್‌ಐ ಸಂಗಾತಿಗಳನ್ನು ಕಂಡ ಕೂಡಲೇ ಅರಳಿದ ಮುಖಗಳು ಸಾರುತ್ತಿದ್ದವು. 5000 ಕ್ಕೂ ಹೆಚ್ಚು ವಿಮಾ ನೌಕರರು ಭಾಗವಹಿಸಿದ್ದ ಈ ಮೆರವಣಿಗೆ ಎರಡು ಗಂಟೆಗಳ ಕಾಲ ನಡೆಯಿತು. ನಂತರ ಬಹಿರಂಗ ಅಧಿವೇಶನ ಮೂರು ಗಂಟೆಗಳ ಕಾಲ ನಡೆಯಿತು.

ಎಚ್ಚರಿಸಿದರು. ಜಾಗತೀಕರಣ ಎಂದರೆ ಏನು? ಯುರೋಪಿಯನ್ ಒಕ್ಕೂಟದ ಒಂದು ಸರ್ವೆ 'ನಾವು ಬೆಳವಣಿಗೆಯಲ್ಲಿ ಅತ್ಯುತ್ತಮ ಸಾಧನೆ ಕಂಡಿದ್ದೇವೆ, ಸ್ಪರ್ಧಾತ್ಮಕತೆಯನ್ನು ಸಾಧಿಸಿದ್ದೇವೆ. ಈ ಪ್ರಕ್ರಿಯೆಯಲ್ಲಿ ನಮ್ಮ ಉದ್ಯೋಗವಕಾಶಗಳನ್ನು ಧ್ವಂಸ ಮಾಡಿದ್ದೇವೆ' ಎಂದಿದೆ. ಇಂತಹ ಬೆಳವಣಿಗೆಯನ್ನು ಮತ್ತು ಸ್ಪರ್ಧಾತ್ಮಕತೆಯನ್ನೇ ತಾನೇ ಭಾರತದಲ್ಲೂ ಬಯಸುವುದು. ಆದರೆ ಅಲ್ಲಿ ಉದ್ದಿಮೆಗೆ ಕಳೆದ ವರ್ಷ ಶೇ 17 ಸಬ್ಸಿಡಿ ನೀಡಲಾಯಿತು ಎಂಬುದು ಗೊತ್ತಿದೆಯೇ ಎಂದು ಅವರು ಪ್ರಶ್ನಿಸಿದರು.'ನೀವು ದ್ವೀಪಗಳಾಗಿ ಉಳಿಯಲು ಸಾಧ್ಯವೇ? ಸ್ವಾತಂತ್ರ್ಯ ಅವಿಭಾಜ್ಯ. ನಿಮ್ಮ ಸುತ್ತ ಸುನಾಮಿ ಏಳುತ್ತಿದೆ' ಎಂದು ಎಚ್ಚರಿಸುತ್ತಾ 'ನಿಮಗೆ ಈಗಾಗಲೇ ಇದರ ಅರಿವಿದೆ. ನೀವು ಈಗಾಗಲೇ ಕಾರ್ಯಪ್ರವೃತ್ತರಾಗಿದ್ದೀರಿ. ಅದನ್ನು ವಿಸ್ತರಗೊಳಿಸಿ. ಭಾರತದ ವ್ಯವಹಾರಗಳನ್ನು ನಿಮ್ಮ ಕೈಗೆ ತಗೊಳ್ಳಿ' ಎಂದು ಕರೆ ನೀಡಿದರು.

ಉದ್ಘಾಟನಾ ಅಧಿವೇಶನವನ್ನು ಉದ್ದೇಶಿಸಿ ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷ ವಿ.ಜೆ.ಕೆ.ನಾಯರ್ ಹಾಗೂ ಸಿಪಿಐ(ಎಂ) ಶಾಸಕ ಹಾಗೂ ಸ್ವಾಗತ ಸಮಿತಿಯ ಉಪಾಧ್ಯಕ್ಷರಾದ –

ಯ ಬದ್ಧತೆಯ ಆಶ್ವಾಸನೆ ನೀಡುತ್ತಾ ಎಐಐಇಎ ಕೇವಲ 'ರೊಟ್ಟಿ ಬೆಣ್ಣೆ'ಯ ಸಂಘವಲ್ಲ ಎಂದು ಹೇಳಿದರು. ದೇಶದ ಸುಮಾರು 2000 ಕೇಂದ್ರಗಳಲ್ಲಿ ಎಲ್ಲೆಲ್ಲಿ ಎಐಐಇಎ ಬಾವುಟ ಹಾರುತ್ತಿದೆಯೋ ಅಲ್ಲೆಲ್ಲಾ ಎಐಐಇಎ ಸದಸ್ಯರು ಈ ಕರ್ತವ್ಯವವನ್ನು ನೆರವೇರಿಸುತ್ತಾರೆ. ಈ ಸಮ್ಮೇಳನ ವಿಮಾ ನೌಕರರ ಪ್ರಶ್ನೆಗಳನ್ನಷ್ಟೇ ಅಲ್ಲ, ಇಡೀ ಜನಸಮೂಹದ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತದೆ, ಜನಸಾಮಾನ್ಯರ ಹೋರಾಟಗಳೊಂದಿಗೆ ಸೇರಿಕೊಳ್ಳದೆ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ರಕ್ಷಿಸಲು ಸಾಧ್ಯವಿಲ್ಲ ಎಂದು ನಾವು ಬಹಳ ಹಿಂದೆಯೇ ಅರಿತಿದ್ದೇವೆ ಎಂದು ಅವರು ಹೇಳಿದರು.

ಪ್ರಧಾನ ಕಾರ್ಯದರ್ಶಿ ಕೆ.ವೇಣುಗೋಪಾಲ್ ಈ ಸಂದರ್ಭದಲ್ಲಿ 120 ಕೇಂದ್ರಗಳಲ್ಲಿ 'ಭಾರತಪರ ವೇದಿಕೆ' ಯ ರಚನೆ ಹಾಗೂ ಚಟುವಟಿಕೆಗಳ ಬಗ್ಗೆ ತಿಳಿಸಿದರು. ಕೊನೆಯಲ್ಲಿ ದಕ್ಷಿಣ-ಮಧ್ಯವಲಯ ವಿಮಾ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಿ.ರಮೇಶ್ ವಂದನಾರ್ಪಣೆ ಮಾಡಿದರು.



ಆಡಳಿತ ಆಡಳಿತವನ್ನು ಕೋಮುಗ್ರಸ್ತಗೊಳಿಸಿ, ನವಉದಾರವಾದಿ ಅಜೆಂಡಾವನ್ನು ಅನುಸರಿಸಿ ಜನಸಾಮಾನ್ಯರ ಬದುಕನ್ನು ಶೋಚನೀಯಗೊಳಿಸಿತ್ತು. ಕೇಂದ್ರದಲ್ಲಿ ಒಂದು ಜಾತ್ಯತೀತ ಸರ್ಕಾರ ರಚನೆಗೊಂಡಿರುವುದು ಸ್ವಾಗತಾರ್ಹ. ರಾಷ್ಟ್ರೀಯ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಜನಸಾಮಾನ್ಯರ ಪರಿಹಾರ ತರುವ, ಎಲ್‌ಐಸಿ, ಜಿಐಸಿಗಳನ್ನು ಸಾರ್ವಜನಿಕ ವಲಯದಲ್ಲೇ ಉಳಿಸಿಕೊಳ್ಳುವ ಭರವಸೆಗಳಿವೆ. ಆದರೆ ಸರ್ಕಾರ ಈ ಭರವಸೆಗಳಿಂದ ನುಣುಚಿಕೊಂಡು ಅದೇ ವಿನಾಶಕಾರಿ ಆರ್ಥಿಕ ನೀತಿಗಳನ್ನು ಅನುಸರಿಸುವ ಸೂಚನೆಗಳಿವೆ. ಈ ಬಗ್ಗೆ ಎಚ್ಚರದಿಂದಿರಬೇಕು ಎಂದಿದೆ.

ಈ ವರದಿ ರಾಷ್ಟ್ರೀಕೃತ ವಿಮಾ ಉದ್ದಿಮೆಯ ಸಾಧನೆ ಹಾಗೂ ರಾಷ್ಟ್ರೀಯ ಅಭಿವೃದ್ಧಿಗೆ ಅದರ ಕಾಣಿಕೆಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿದೆ. ಈ ವರ್ಷ ಒಂದರಲ್ಲೇ ಮೂಲರಚನಾ ವಲಯದಲ್ಲಿ ಎಲ್‌ಐಸಿ 40000 ಕೋಟಿ ರೂ.ಗಳನ್ನು ತೊಡಗಿಸುವುದು ಸಾಧ್ಯವಾಗಿದೆ. ಆದರೂ ಆಗಸ್ಟ್ 2002 ರಿಂದ ಇತ್ಯರ್ಥವಾಗಿರಬೇಕಾಗಿದ್ದ ವೇತನ ಪರಿಷ್ಕರಣ ಇನ್ನೂ ನಡೆದಿಲ್ಲ. ಇದಕ್ಕಾಗಿ ಮುಂಬರುವ ದಿನಗಳಲ್ಲಿ ಗಂಭೀರ ಹೋರಾಟಗಳಿಗೆ ಸಿದ್ದರಾಗಬೇಕೆಂದು ನೌಕರಿಗೆ ಕರೆ ನೀಡಿದೆ.

ಈ ವರದಿಯ ಮೇಲೆ ನಾಲ್ಕು ದಿನಗಳ ಕಾಲ ಚರ್ಚೆ ನಡೆಯಿತು. ಈ ನಡುವೆ ದೇಶದ ಐಕ್ಯತೆ ಮತ್ತು ಕೋಮು ಸೌಹಾರ್ದದ ರಕ್ಷಣೆ, ಉದ್ಯೋಗ ಭರವಸೆ ಕಾನೂನು, ಮಹಿಳಾ ಮೀಸಲಾತಿ ಮಸೂದೆ, ವಿಮಾ ವಲಯದಲ್ಲಿ ಎಫ್‌ಡಿಐ ಏರಿಕೆಗೆ ವಿರೋಧ ಮುಂತಾದ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಫೆಬ್ರವರಿ 21 ರಂದು ಮಹಿಳಾ ನೌಕರರ ವಿಶೇಷ ಅಧಿವೇಶನವೊಂದನ್ನು ಏರ್ಪಡಿಸಲಾಗಿತ್ತು. ಸಿಐಟಿಯುನ ಕಾರ್ಯದರ್ಶಿ ಹಾಗೂ ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಯೋಜಕಿಯಾದ ಡಾ. ಹೇಮಲತಾ ಈ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು. ವಿಮಾರಂಗದ ಮಹಿಳಾ ಮುಖಂಡರೂ ಈ ಅಧಿವೇಶನದಲ್ಲಿ ಮಹಿಳಾ ನೌಕರರ ಪ್ರಶ್ನೆಗಳು ಹಾಗೂ ಸಮಸ್ಯೆಗಳ ಬಗ್ಗೆ ಮಾತನಾಡಿದರು. ○

ಮುಷ್ಕರ ಕಾರ್ಯಾಚರಣೆಗಳು

ಫೆಬ್ರವರಿ 24 ರಂದು ಸಂಘಟನೆಯ ಜಂಟಿ ಕಾರ್ಯದರ್ಶಿ ಅಮಾನುಲ್ಲಾ ಖಾನ್ ಹಾಗೂ ಪ್ರಧಾನ ಕಾರ್ಯದರ್ಶಿ ಕೆ.ವೇಣುಗೋಪಾಲ್ ಚರ್ಚೆಗಳಿಗೆ ಉತ್ತರಿಸಿದರು. ಸಮ್ಮೇಳನ ಈ ಕೆಳಗಿನ ಹೋರಾಟದ ಕಾರ್ಯಕ್ರಮಗಳನ್ನು ಅಂಗೀಕರಿಸಿತು.

1. ಮಾರ್ಚ್ 31, 2005 ರಂದು ವೇತನ ಏರಿಕೆಯನ್ನು ಇನ್ನಷ್ಟು ವಿಳಂಬಗೊಳಿಸದೆ ಇತ್ಯರ್ಥ ಮಾಡಲು ಆಗ್ರಹಿಸಿ ಎಲ್‌ಐಸಿ ಯಲ್ಲಿ ಒಂದು ದಿನದ ಮುಷ್ಕರ.
2. ಸರ್ಕಾರ ವಿಮಾ ವಲಯದಲ್ಲಿ ಎಫ್‌ಡಿಐ ಏರಿಕೆಗೆ ಅನುವು ಮಾಡಿಕೊಡಲು ಐಆರ್‌ಡಿಎ ಕಾನೂನಿನಲ್ಲಿ ತಿದ್ದುಪಡಿ ತರಲು ಹೊರಟರೆ ಒಂದು ದಿನದ ಮುಷ್ಕರ.
3. ಜಿಐಸಿ ಹಾಗೂ ನಾಲ್ಕು ಸಾರ್ವಜನಿಕ ವಲಯದ ಸಾಮಾನ್ಯ ವಿಮಾ ಕಂಪನಿಗಳಲ್ಲಿ ವೇತನ ಏರಿಕೆಯನ್ನು ಆಗ್ರಹಿಸಿ ಮಾರ್ಚ್ 23 ಹಾಗೂ 24 ರಂದು ಎರಡು ದಿನಗಳ ಮುಷ್ಕರ - ಆ ದಿನ ದೇಶಾದ್ಯಂತ ಎಲ್‌ಐಸಿ ನೌಕರರು ಸೌಹಾರ್ದ ಕಾರ್ಯಾಚರಣೆ ನಡೆಸುತ್ತಾರೆ.
4. ಎಲ್‌ಐಸಿ ಮತ್ತು ಸಾರ್ವಜನಿಕ ವಲಯದ ನಾಲ್ಕು ಸಾಮಾನ್ಯ ವಿಮಾ ಕಂಪನಿಗಳಲ್ಲಿ ನೇಮಕಾತಿ ಆಗ್ರಹಿಸಿ ಒಂದು ಚಳುವಳಿ ಕಾರ್ಯಕ್ರಮ. ಭಾರತಪರ ಜನವೇದಿಕೆಯ ಚಟುವಟಿಕೆಗಳನ್ನು ವಿಸ್ತರಿಸಲು ಕೂಡಾ ನಿರ್ಧರಿಸಲಾಯಿತು.

...ರರ ರಾಷ್ಟ್ರ ಸಮ್ಮೇಳನ

...ು' ತರುವ ಹೋರಾಟದ ನಿರ್ಧಾರ

ಜೆ.ವಿ.ಶ್ರೀರಾಮರೆಡ್ಡಿ ಮಾತನಾಡಿದರು. ವಿ.ಜೆ.ಕೆಯವರು 60 ರದಶಕದಲ್ಲಿ ಗಣಕೀಕರಣದ ವಿರುದ್ಧ, 1970 ರ ದಶಕದಲ್ಲಿ ವೇತನಸ್ತಂಭನದ ವಿರುದ್ಧ ಹಾಗೂ ನಂತರ ವಿಮಾ ಖಾಸಗೀಕರಣದ ವಿರುದ್ಧ ಅಮೋಘ ಹೋರಾಟ ನಡೆಸಿದ್ದನ್ನು ನೆನಪಿಸಿಕೊಳ್ಳುತ್ತಾ ಇಂತಹ ಹೋರಾಟವನ್ನು ಇತರ ಕಾರ್ಮಿಕ ಸಂಘಗಳು ಮಾಡಿದ್ದರೆ ಬೆಂಗಳೂರಿನ ಸ್ವರೂಪವೇ ಬೇರೆಯದಾಗಿರುತ್ತಿತ್ತು ಎಂದರು. 1973 ರಲ್ಲಿ ಎಐಐಇಎ ವೇತನ ಪ್ರಶ್ನೆಯು ಹೋರಾಟದಲ್ಲಿ ಮುಂಚೂಣಿಯಲ್ಲಿತ್ತು. ಈಗ ಮತ್ತೆ ವೇತನ ಪ್ರಶ್ನೆಯನ್ನು ಕೈಗೆತ್ತಿಕೊಂಡು ಹೋರಾಡಬೇಕಿದೆ; ಎಲ್ಲ ಕಾರ್ಮಿಕರಿಗೂ ಅಗತ್ಯ ಆಧಾರಿತ ಕನಿಷ್ಟ ಸಂಬಳಕ್ಕಾಗಿ ಹೋರಾಟ ರೂಪಿಸಬೇಕಾಗಿದೆ ಎಂದರು.

ಜೆ.ವಿ.ಶ್ರೀರಾಮರೆಡ್ಡಿಯವರು ಕಾರ್ಮಿಕ ವರ್ಗದ ಮೇಲೆ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನಿರಂತರ ಧಾಳಿಗಳನ್ನು ಪ್ರಸ್ತಾಪಿಸುತ್ತಾ ಕಾರ್ಮಿಕ ವರ್ಗ ಇವನ್ನು ಎದುರಿಸಲು ಒಂದುಗೂಡಬೇಕು ಎಂದರು.

ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಎಐಐಇಎ ಅಧ್ಯಕ್ಷ ಎನ್.ಎಂ.ಸುಂದರಂ ಅತಿಥಿಗಳಿಗೆ ಜನಪರ ಹೋರಾಟಗಳಿಗೆ ಎಐಐಇಎ

ಪ್ರತಿನಿಧಿ ಅಧಿವೇಶನ

ಸುಮಾರು 2000 ಪ್ರತಿನಿಧಿಗಳು ಹಾಗೂ ವೀಕ್ಷಕರು ಭಾಗವಹಿಸಿದ್ದ ಮಹಾ ಸಮ್ಮೇಳನದ ಪ್ರತಿನಿಧಿ ಅಧಿವೇಶನ ಫೆಬ್ರವರಿ 20 ರಂದು ಅಂಬೇಡ್ಕರ್ ಭವನದಲ್ಲಿ ಕಾರ್ಯಕಾರಿ ಸಮಿತಿಯ ವರದಿಯ ಮಂಡನೆಯೊಂದಿಗೆ ಆರಂಭವಾಯಿತು. ಈ ವರದಿ ಸಾಮ್ರಾಜ್ಯಶಾಹಿ ದೇಶಗಳ ಸಾರ್ವಭೌಮತೆಯ ಮೇಲೆ ಧಾಳಿ ಮಾಡಿ, ತನ್ನ ಆರ್ಥಿಕ ಬಿಕ್ಕಟ್ಟನ್ನು ದೇಶಗಳನ್ನು ಮಿಲಿಟರಿ ಶಕ್ತಿಯ ಮೂಲಕ ಆಕ್ರಮಿಸಿಕೊಳ್ಳುವ ಮೂಲಕ ಬಗೆಹರಿಸಿಕೊಳ್ಳುವ ಪ್ರಯತ್ನ ನಡೆಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿತು. ಇರಾಕಿನ ಮೇಲೆ ಕಾನೂನುಬಾಹಿರ, ಅನ್ಯಾಯಪೂರ್ಣ ಯುದ್ಧ ಇರಾಕಿಗಳ ಮೇಲೆ ಹೇಳತೀರದ ಸಂಕಟಗಳನ್ನು ಹೇರಿದೆ. ಬಹಳವಾಗಿ ಡಂಗುರ ಹೊಡಿಸಿಕೊಂಡ ಚುನಾವಣೆ ಇರಾಕಿಗಳಿಗೆ ಪ್ರಜಾಪ್ರಭುತ್ವವನ್ನು ನೀಡಿಲ್ಲ. ಭದ್ರತೆಯನ್ನು ನೀಡಿಲ್ಲ. ಇದು ಇಡೀ ಜಗತ್ತಿಗೇ ವಿನಾಶಕಾರಿ. ವಿಶ್ವಾದ್ಯಂತ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟಗಳು ಹೆಚ್ಚುತಿವೆ. ಭಾರತದ ಕಾರ್ಮಿಕ ವರ್ಗವೂ ಮಾನವಕುಲವನ್ನು ಸಾಮ್ರಾಜ್ಯಶಾಹಿ ಬರ್ಬರತೆಗಳಿಂದ ರಕ್ಷಿಸುವ ಈ ಹೋರಾಟಗಳಲ್ಲಿ ಭಾಗವಹಿಸಬೇಕು ಎಂದು ವರದಿ ಕರೆ ನೀಡಿದೆ.

ಕಾರ್ಯಕಾರಿ ಸಮಿತಿಯ ವರದಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಪರಾಭವವನ್ನು ಸ್ವಾಗತಿಸಿದೆ. ಏಕೆಂದರೆ ಆ



ಅಧಿವೇಶನದ ವೇದಿಕೆ



ಸುಂದರಂ ಅಮಾನುಲ್ಲಾ ವೇಣುಗೋಪಾಲ

ಸಮ್ಮೇಳನ ಎನ್.ಎಂ.ಸುಂದರಂರವರನ್ನು ಅಧ್ಯಕ್ಷರಾಗಿ, ಕೆ.ವೇಣುಗೋಪಾಲ್‌ರವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಬಿ.ಎಸ್.ರವಿ ಅವರನ್ನು ಖಜಾಂಚಿಯಾಗಿ ಮತ್ತು ಬೆಂಗಳೂರಿನ ಅಮಾನುಲ್ಲಾ ಖಾನ್‌ರವರನ್ನು ಒಬ್ಬ ಜಂಟಿ ಕಾರ್ಯದರ್ಶಿಯಾಗಿ ಅವಿರೋಧವಾಗಿ ಚುನಾಯಿಸಿತು.

ರಾಜ್ಯಾದ್ಯಂತ ಸಂಚರಿಸಿದ ಜಾಥಾಗಳು

ಮಹಾ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಸಮ್ಮೇಳನದ ಸಂದೇಶಗಳನ್ನು ಹೊತ್ತ ಎಂಟು ಜಾಥಾಗಳು ಕರ್ನಾಟಕದಾದ್ಯಂತ ಒಂದು ವಾರದ ಕಾಲ ಸಂಚರಿಸಿ ಬೆಂಗಳೂರಿಗೆ ಬಂದು ಸೇರಿದವು. ಆಂಧ್ರ ಪ್ರದೇಶದಿಂದಲೂ ಒಂದು ಜಾಥಾ ಬಂದಿತ್ತು. ಉದ್ಯೋಗ ಭರವಸೆ ಕಾನೂನು ತರಬೇಕು, ವಿಮಾ ವಲಯದ ಮೇಲೆ ಸೇವಾ ತೆರಿಗೆಯನ್ನು ರದ್ದು ಮಾಡಬೇಕು, ಎಫ್‌ಡಿಐ ಹೇರಿಕೆಯ ಪ್ರಸ್ತಾಪವನ್ನು ಹಿಂತೆಗೆದುಕೊಳ್ಳಬೇಕು, ಎಲ್‌ಐಸಿ, ಜಿಐಸಿಗಳನ್ನು ಸಾರ್ವಜನಿಕ ವಲಯದಲ್ಲಿ ಬಲಗೊಳಿಸಬೇಕು ಹಾಗೂ ಕೋಮುಸೌಹಾರ್ದವನ್ನು ಕಾಪಾಡಿಕೊಳ್ಳಬೇಕು ಎಂಬ ಘೋಷಣೆಗಳನ್ನು .....ಸಭೆಗಳಲ್ಲಿ ಭಾಷಣ ಗಳು, ನಾಟಕ ಹಾಗೂ ಹಾಡುಗಳ ಮೂಲಕ ಜನರಿಗೆ ತಲುಪಿಸಲು ಪ್ರಯತ್ನಿಸಲಾಯಿತು. ಈ ಜಾಥಾಗಳು ಸುಮಾರು 10 ಸಾವಿರ ಕಿ.ಮಿ. ಸಂಚರಿಸಿದ್ದು ಜನತೆಯಿಂದ ಭಾರಿ ಸ್ಪಂದನೆ ಗಳಿಸಿದವು. ಒಟ್ಟು 142 ಸಂಗಾತಿಗಳು ಇದರಲ್ಲಿ ಭಾಗವಹಿಸಿದ್ದರು. ಇದರಿಂದ ಕುಪಿತಗೊಂಡ ಭಜರಂಗ ದಳದವರು ಶೃಂಗೇರಿಯಲ್ಲಿ ಜಾಥಾದ ಮೇಲೆ ದಾಳಿ ನಡೆಸಿ, ಜಾಥಾದ ಸದಸ್ಯರನ್ನು ಬಂಧಿಸುವಂತೆ ಮಾಡಿ ಕೋಮುಸೌಹಾರ್ದಕ್ಕೆ ತಾವು ವಿರೋಧಿಗಳು ಎಂಬ ಸತ್ಯವನ್ನು ಮತ್ತೊಮ್ಮೆ ಸಾರಿದವು. ಆದರೂ ಪ್ರಜಾಪ್ರಭುತ್ವ ವಾದಿ ಜನತೆಯ ಬೆಂಬಲದಿಂದ ಈ ಸಂಗಾತಿಗಳು ಬಿಡುಗಡೆ ಹೊಂದಿ ಬೆಂಗಳೂರು ತಲುಪಿದರು. ಬೆಂಗಳೂರು ನಗರದಲ್ಲೂ ಹಲವೆಡೆ ಈ ಜಾಥಾ ತಂಡಗಳು ಪ್ರದರ್ಶನ ನೀಡಿದವು. ಇವು ಫೆಬ್ರವರಿ 19 ರಂದು ಭವ್ಯ ಮೆರವಣಿಗೆಯ ಭಾಗವಾಗಿದ್ದವು.

ಬಜರಂಗ ದಳದ ಅಟ್ಟಹಾಸಕ್ಕೆ ಅಮಾಯಕ ಜೀವ ಬಲಿ

ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ಬಜರಂಗದಳದ ಗೂಂಡಾ ಪಡೆಯ ಹಾವಳಿ, ದಾಂಧಲೆ ಒಂದೆರಡಲ್ಲ. ಗೋರಕ್ಷಣೆಯ ಹೊಣೆ ಇವರೇ ವಹಿಸಿಕೊಂಡಿದ್ದಾರೆ! ಯುವಕ-ಯುವತಿಯರು ನಡೆ-ನುಡಿ ಹೇಗಿರಬೇಕೆಂದು ನೀತಿ ಸಂಹಿತೆ ಘೋಷಿಸಿಬಿಟ್ಟಿದ್ದಾರೆ. ಹೆಜಮಾಡಿ ವನಿತಾಳ ಸಾವಿಗೆ ಕಾರಣವಾದ ಈ ಸ್ವಯಂ ಘೋಷಿತ ಕಾವಲು ನಾಯಿಗಳ ದುಷ್ಕೃತ್ಯಗಳ ವಿರುದ್ಧ ಪ್ರತಿಭಟನೆಗಳ ವರದಿಯಿಲ್ಲಿದೆ.



ಮುಲ್ಕಿ ಸಮೀಪದ ಹೆಜಮಾಡಿಯಲ್ಲಿ ಇತ್ತೀಚೆಗೆ ಅನ್ಯಮತೀಯ ಯುವಕನೊಂದಿಗೆ ಮಾತನಾಡಿದ ಕಾರಣಕ್ಕಾಗಿ ಬಜರಂಗದಳದವರಿಂದ ಹೊಡೆತ ಮತ್ತು ಅವಮಾನಿತಳಾದ ತರುಣಿ ಆತ್ಮಹತ್ಯೆಗೆ ಶರಣಾದ ವಿದ್ಯಮಾನದ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಮತ್ತು ಇಂತಹ 'ಅಮಾನುಷ ಕೊಲೆ' ಗೆ ಕಾರಣರಾದ ವ್ಯಕ್ತಿಗಳನ್ನು ಬಂಧಿಸಬೇಕು ಎಂದು ಉಡುಪಿಯಲ್ಲಿ 19.02.2005ರ ಶನಿವಾರ ನಡೆದ ಧರಣಿಯಲ್ಲಿ ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಲಾಯಿತು.

ಜಿಲ್ಲಾ ಸೌಹಾರ್ದ ವೇದಿಕೆ, ವಿಮಾ ನೌಕರರ ಸಂಘ, ದಲಿತ ಸಂಘರ್ಷ ಸಮಿತಿ, ಜಿಲ್ಲಾ ಅಲ್ಪ ಸಂಖ್ಯಾತರ ವೇದಿಕೆ, ಕೆಥೋಲಿಕ್ ಸಭಾ, ಡಿವೈಎಫ್ಐ, ಎಸ್ಎಫ್ಐ, ವಿಚಾರವಾದಿ ವೇದಿಕೆ ಪೀಪಲ್ಸ್ ಫಾರ್ ಇಂಡಿಯಾ ಫೋರಂ (ವೇದಿಕೆ), ಸಿಐಟಿಯು ಸೇರಿದಂತೆ ವಿವಿಧ ಸಂಘಟನೆಗಳ ನೂರಾರು ಕಾರ್ಯಕರ್ತರು, ನಾಯಕರು ತಾಲೂಕು ಕಛೇರಿಯ ಮುಂಭಾಗದಲ್ಲಿ ಧರಣಿ ನಡೆಸಿ ರಾಜ್ಯದಲ್ಲಿ ಬಜರಂಗದಳದ ದುಂಡಾವರ್ತನೆ, ಅಟ್ಟಹಾಸದಿಂದ ನಾಲ್ಕು ಅಮಾಯಕ ಜೀವಗಳು ಬಲಿಯಾಗಿವೆ ಎಂದು ಜಿಲ್ಲಾಡಳಿತದ ಗಮನ ಸೆಳೆದರು.

ಕಳೆದ ಫೆಬ್ರವರಿ 5 ರಂದು ಮುಲ್ಕಿ ಸಮೀಪದ ಹೆಜಮಾಡಿಯಲ್ಲಿ ವನಿತಾ ಎಂಬ 18ರ ಹರೆಯದ ತರುಣಿ ತನಗಾದ ಅಪಮಾನ ಸಹಿಸಲು ಸಾಧ್ಯವಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಕೆ ಮಾಡಿದ ಅಪರಾಧವೆಂದರೆ, ತಾನು ಕೆಲಸ ಮಾಡುತ್ತಿದ್ದ ಹೊಯ್ಗೆ ಫ್ಯಾಕ್ಟರಿಯ ಉದ್ಯೋಗಿ ಇಸ್ಮಾಯಿಲ್ ಎಂಬ ಅನ್ಯಮತೀಯ ತರುಣನ ಜತೆ ಹೆದ್ದಾರಿಯಲ್ಲಿ ಮಾತನಾಡಿದ್ದು, ಅದೂ ಹಗಲು ಹೊತ್ತಿನಲ್ಲಿ, ಇದನ್ನು ಆಕ್ಷೇಪಿಸಿದ ಬಜರಂಗದಳದವರು ಎನ್ನಲಾದ ಕೆಲವರು ಗುಂಪು ಕಟ್ಟಿಕೊಂಡು ಬಂದು ಇವರ ಮೇಲೆ ಹಲ್ಲೆ ಮಾಡಿದ್ದಾರೆ. ಬಿದ್ದ ಹೊಡೆತದ ತೀವ್ರತೆಯಿಂದಾಗಿ ಇಸ್ಮಾಯಿಲ್ ಆಸ್ಪತ್ರೆ ಸೇರಿಸಲ್ಪಟ್ಟರೆ ವನಿತಾ ಈ ಘಟನೆಯಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಳು ಎಂದು ಘಟನೆಯ ಕೂಲಂಕುಷ ಪರಿಶೀಲನೆ ನಡೆಸಿದವರಿಂದ ತಿಳಿಯಿತು. ಇಂತಹ ಘಟನೆಗಳು ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇಲಿಂದ ಮೇಲೆ ನಡೆಯುತ್ತಿವೆ.

ಪುತ್ತೂರು ಘಟನೆ ಎರಡು ವರ್ಷಗಳ ಹಿಂದೆ ಸುಳ್ಯದ ಅಡಿಕೆ ತೋಟದಲ್ಲಿ ಗಾರ್ಬ್ಲಿಂಗ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ತರುಣಿಯರು ಅದೇ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ತಮ್ಮ ಸಹೋದ್ಯೋಗಿಯ ಮದುವೆಗೆಂದು ಪುತ್ತೂರಿಗೆ ಬಂದರು. ಮದುವೆ ಊಟ ಮುಗಿಸಿ ಪುತ್ತೂರು ಥಿಯೇಟರ್ ಒಂದರ ಬಳಿಯಲ್ಲಿ ಬಜರಂಗದಳದವರು ಆಕ್ಷೇಪಿಸಿದರು. ದೊಂಬಿ ನಡೆಯಿತು. ಪುತ್ತೂರಿನಲ್ಲಿ 3 ದಿನಗಳ ಕಾಲ 144 ಸೆಕ್ಷನ್ ಜ್ಯಾರಿಯಾಗಲು ಕಾರಣವಾಯಿತು.

ಪೆಣವಲದಲ್ಲಿ ಮೂರು ಬಲಿ : ಕಾರ್ಕಳ ತಾಲೂಕಿನ ಹೊಸ್ಮಾರು ಸಮೀಪದ ಪಣವಲ ಎಂಬಲ್ಲಿ ಬಜರಂಗದಳದವರ ಇಂತಹುದೇ ಅಧಿಕ ಪ್ರಸಂಗತನದಿಂದಾಗಿ 2003ರ ಮೇ ತಿಂಗಳಲ್ಲಿ, ಭಾರತಿ, ನಳಿನಿ ಮತ್ತು ಸುರೇಶ್ ಎಂಬ 3 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಅಮಾಯಕ ಹುಡುಗಿಯರ ಬಗ್ಗೆ ಏನೇನೋ ಕತೆ ಕಟ್ಟಿ ಅವರನ್ನು ಹಿಂಸೆಗೆ ಒಳಪಡಿಸಿದ ಹಿನ್ನೆಲೆಯಲ್ಲಿ ಈ ಸಾವುಗಳ ಸಂಭವಿಸಿದವು ಎಂದು ನೆನಪಿಸಿಕೊಳ್ಳಬೇಕು.

ಹಿಂದೂ ಯುವತಿ ಅನ್ಯ ಮತೀಯ ಯುವಕರೊಡನೆ ಹೋಟೇಲಿನಲ್ಲಿ ಟೀ ಕುಡಿಯುತ್ತಿದ್ದರು ಎಂಬ ಕಾರಣಕ್ಕೆ ಇತ್ತೀಚೆಗೆ ಇಂತಹ ಘಟನೆಗಳು ನಡೆದಿದೆ ಅನ್ಯಮತೀಯರಿಗೆ ಈ ಸಮಾಜದಲ್ಲಿ ಪ್ರಜೆಗಳಾಗಿ ಸೌಹಾರ್ದತೆಯಿಂದ ಬಾಳುವ ಹಕ್ಕಿಲ್ಲ ಎನ್ನುವ ಸಿದ್ಧಾಂತವನ್ನು ಬಜರಂಗದಳದವರು ಜ್ಯಾರಿಗೆ ತರುತ್ತಿರುವ ರೀತಿಯಿದು. ಅವರ ವರ್ತನೆ ಸ್ತ್ರೀಯರನ್ನು ಅವಮಾನಿಸುವಂತಾದ್ದು ಆಗಿದೆ. ಇದನ್ನು ಎಲ್ಲಾ ಪ್ರಜಾಪ್ರಭುತ್ವವಾದಿಗಳು ತೀವ್ರವಾಗಿ ಖಂಡಿಸಬೇಕಾಗಿದೆ. ಅವರು ನಿರ್ಧರಿಸಬೇಕಾಗಿಲ್ಲ.

ಯಾರೊಂದಿಗೆ ಮಾತನಾಡಬೇಕು ಮತ್ತು ಮಾತನಾಡಬಾರದು ಎನ್ನುವುದನ್ನು ಬಜರಂಗದಳ ಅಥವಾ ಇತರ ಸಂಘಟನೆಗಳು ಹೇಳಿಕೊಡಬೇಕಾಗಿಲ್ಲ. ಯಾರೊಂದಿಗಾದರೂ ಮಾತನಾಡಬೇಕಾದರೆ ಇವರ ಪರ್ಮಿಶನ್ (ಅಪ್ಪಣೆ) ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆಯೆ? ಸಂವಿಧಾನಕ್ಕೆ ವ್ಯತಿರಿಕ್ತವಾಗಿರುವ ಇಂತಹ ದಾದಾಗಿರಿಯನ್ನು ನಾಗರೀಕರು ವಿರೋಧಿಸಬೇಕು ಎಂದು ಸೌಹಾರ್ದ ವೇದಿಕೆಯ ಸಂಚಾಲಕ ರಾಜಶೇಖರ್ ಮತ್ತು ಕೆ.ಫಣಿರಾಜ್ ಹೇಳಿದರು.

"ಕಳೆದ ಕೆಲವು ವರ್ಷಗಳಲ್ಲಿ ಬಜರಂಗದಳದಂತಹ ಸಂಘಟನೆಗಳು ಹೆಚ್ಚುತ್ತಿದ್ದು ಈ ಸಂಘಟನೆಯ ಬಗ್ಗೆ ಸರಕಾರ ಕಟ್ಟೆಚ್ಚರ ವಹಿಸಿ, ಕಾನೂನನ್ನು ಸಂವಿಧಾನ ಬಾಹೀರವಾಗಿ ಕೈಗೆತ್ತಿಕೊಳ್ಳುವವರ ವಿರುದ್ಧ ತೀವ್ರ ಕ್ರಮಗಳನ್ನು ಕೈಗೊಳ್ಳುವಂತಾಗಬೇಕಿದೆ. ಇಂಥಹ ಶಕ್ತಿಗಳ ಕಾನೂನು ಬಾಹಿರ ಚಟುವಟಿಕೆಗಳು ಹೆಚ್ಚುತ್ತಿವೆ.



ಸಂಘಟನೆಗಾಗಿ ಬರುವ ಹಣವನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತದೆ" ಎಂದು ಶ್ರೀ ಜನಾರ್ದನ ಭಂಡಾರ್ಕರ್ ಅವರು ತಿಳಿಸಿದರು.

'ಬಜರಂಗದಳ ದವರು ಬಡವರ ವಿರುದ್ಧ ಬಡವರನ್ನು ಕೋಮುವಾದ ವಿಷ ಪ್ರಚಾರದಿಂದ ಧಾಳಿ ನಡೆಸಲಾಗುವ ಪ್ರಯತ್ನವನ್ನು ಸಾರ್ವಜನಿಕವಾಗಿ ವಿರೋಧಿಸಬೇಕಾಗಿದೆ. ಹೆಜಮಾಡಿ ಪ್ರಕರಣದಲ್ಲಿ ಕೂಡಾ ಬಡಜನರ ಮೂಲಕವೇ ಹೊಡೆಸುವ ಪ್ರಯತ್ನ ನಡೆದಿದೆ' ಎಂದೂ ಭಂಡಾರ್ಕರ್ ಹೇಳಿದರು.

ಜಿಲ್ಲಾ ಕೋಮು ಸೌಹಾರ್ದ ವೇದಿಕೆಯ ಅಧ್ಯಕ್ಷರಾದ ಶ್ರೀ ಜಿ.ರಾಜಶೇಖರ್‌ರವರು, ಜಿಲ್ಲಾ ಅಲ್ಪ ಸಂಖ್ಯಾತ ವೇದಿಕೆಯ ಅಧ್ಯಕ್ಷ ಶ್ರೀ ಖಾಸಿಂ ಬೋರ್ಕೊರು ಕ್ಯಾಥೋಲಿಕ್ ಸಭಾ ಉಡುಪಿ ಪ್ರಾಂತದ ಅಧ್ಯಕ್ಷ ಶ್ರೀ ವೆಲೇರಿಯನ್ ಡಿಸೋಜ, ದಲಿತ ಸಂಘರ್ಷ ಸಮಿತಿಯ ಶ್ರೀ ಸುಂದರ ಮಾಸ್ತರ್, ಸೌಹಾರ್ದ ವೇದಿಕೆಯ ಕೋಶಾಧಿಕಾರಿ ಶ್ರೀ ಎ.ಎಂ.ಜಫರುಲ್ಲಾ, ಜನಜಾಗೃತಿ ವೇದಿಕೆಯ ಅಧ್ಯಕ್ಷ ಶ್ರೀ ಗೋಪಾಲ ಶೆಟ್ಟಿ, ಸಿಐಟಿಯು ಜಿಲ್ಲಾ ಸಮಿತಿ ಕಾರ್ಯದರ್ಶಿ ಶ್ರೀ ಪಿ.ವಿಶ್ವನಾಥ ರೈ, ಡಿವೈಎಫ್ಐನ ವಿ.ಚಂದ್ರಶೇಖರ, ಎಸ್ಎಫ್ಐನ ವಿನಾಯಕ ಕುಂದಾಪುರ, ಅಮುಕ್ತ್ ಸಂಘಟನೆ, ಶ್ರೀ ರೊಬರ್ಟ್ ಮೊದಲಾದವರು ಮಾತನಾಡಿದರು.

ಸುಪ್ರಸಿದ್ದ ಲೇಖಕಿ ಶ್ರೀಮತಿ ವೈದೇಹಿಯವರು ಮಾತನಾಡುತ್ತಾ ಮಹಿಳೆಯರಾದ ನಮಗೆ ಹೇಗೆ ವರ್ತಿಸಬೇಕು ಎಂದು ಯಾರೂ ಹೇಳಿಕೊಡಬೇಕಾಗಿಲ್ಲ. ಅನಾಥೆಯಾದ ವನಿತಾಳಿಗೆ ಬಂದೊದಗಿದ ಪಾಡು ಕೇಳಿ ಆಕೆ ನನ್ನ ಮಗಳು ಎಂದು ನನಗೆ ಅನ್ನಿಸಿತು. ಮಹಿಳೆಯಾಗಿ ಹಾಗೂ ಗೃಹಿಣಿಯಾಗಿ ನಾನು ಈ ಪ್ರತಿಭಟನೆಗೆ ಬೆಂಬಲ ಸೂಚಿಸುತ್ತೇನೆ ಎಂದು ಮಾರ್ಮಿಕವಾಗಿ ನುಡಿದರು.

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯವರಿಗೆ, ಕಾನೂನು ಭಂಜಕರ ಮೇಲೆ ತೀವ್ರ ಕ್ರಮ ಕೈಗೊಳ್ಳುವಂತೆ ಮನವಿಯನ್ನು ತಹಶೀಲ್ದಾರರ ಮೂಲಕ ಅರ್ಪಿಸಲಾಯಿತು.

■ **ಡೇವಿಡ್ ಎ.ಕರ್ಕಡ**

(ಸೌಜನ್ಯ ಕರಾವಳಿ ಅಲೆ ಪ್ರತಿಕೆಯ ಮಾಹಿತಿಗಳಿಂದ)

ಕಟ್ಟಡ ಕಾರ್ಮಿಕರ ಸೇವಾಭದ್ರತೆಗೆ ಆಗ್ರಹಿಸಿ ಮೆರವಣಿಗೆ

ಕರ್ನಾಟಕದಲ್ಲಿ ಅಸಂಘಟಿತ ವಲಯದಲ್ಲಿ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಲಕ್ಷಾಂತರ ಕಾರ್ಮಿಕರು ನಿರತರಾಗಿದ್ದಾರೆ. ಕಟ್ಟಡ ನಿರ್ಮಾಣ ಕೆಲಸಗಳಲ್ಲಿ ಕೂಲಿ ಆಳುಗಳು, ಮೇಸ್ತ್ರಿಗಳು, ಪ್ಲಂಬರ್‌ಗಳು, ಬಾರ್ ಬೆಂಡರ್ಸ್, ಕಾರ್ಪೆಂಟರ್ಸ್, ಬುನಾದಿ ತೋಡುವ ಕಾರ್ಮಿಕರು ಮತ್ತು ಪೇಂಟರುಗಳು ಹಾಗೂ ಇತ್ಯಾದಿ ಹಲವು ಕುಶಲತೆಗಳಿರುವ ಕಾರ್ಮಿಕರು ಯಾವುದೇ ಕೆಲಸದ ಭದ್ರತೆಯಿಲ್ಲದೆ ದುಡಿಯುತ್ತಿದ್ದಾರೆ. ಅದೇ ರೀತಿ ಗಂಗಾವತಿಯಲ್ಲಿಯೂ ಸುಮಾರು 10 ಸಾವಿರಕ್ಕೂ ಹೆಚ್ಚು ಕಾರ್ಮಿಕರಿಗೆ ಯಾವುದೇ ವಿಧವಾದ ಸೇವಾ ಭದ್ರತೆಗಳಾಗಲೀ, ಕಲ್ಯಾಣ ಕಾರ್ಯಕ್ರಮಗಳಾಗಲೀ ಇಲ್ಲದೇ ವಂಚಿತರಾಗಿದ್ದಾರೆ.

1996 ರಲ್ಲಿ ಕೇಂದ್ರ ಸರ್ಕಾರ ಕಟ್ಟಡ ನಿರ್ಮಾಣ ಕಾರ್ಮಿಕರಿಗಾಗಿ ಕಾನೂನು ಜಾರಿಗೆ ತಂದಿದೆ. ಇದರಡಿಯಲ್ಲಿ ರೂಪಿಸಬೇಕಾದ ನಿಯಮಾವಳಿಗಳನ್ನು ಇದುವರೆಗೂ ಕರ್ನಾಟಕ ಸರ್ಕಾರ ರೂಪಿಸಿಲ್ಲ. ಇದರಿಂದಾಗಿ ಕಾರ್ಮಿಕರಿಗೆ ದೊರಕಬೇಕಾದ ಸೌಲಭ್ಯಗಳು ದೊರಕುತ್ತಿಲ್ಲ.

ಕಟ್ಟಡ ಕಾರ್ಮಿಕ ಕಾಯ್ದೆ ಪ್ರಕಾರ ಸ್ಥಳೀಯರಿಗೆ ಶೇಕಡಾ 90 ರಷ್ಟು ಕೆಲಸ ಕೊಡಬೇಕೆಂದು ಸರೋಜಿನಿ ಮಹಿಷಿ ಸಮಿತಿ ಹೇಳುತ್ತದೆ. ಆದರೆ, ಹೊರರಾಜ್ಯದ ಕಟ್ಟಡ ಕಾರ್ಮಿಕರು, ಮೇಸ್ತ್ರಿಗಳು ಬಂದು ಕೆಲಸ ಮಾಡುವುದರಿಂದ ಇಲ್ಲಿನ ಕಾರ್ಮಿಕರಿಗೆ ಕೆಲಸದ ಅಭಾವ ಉಂಟಾಗಿದೆ. ಅದೇ ರೀತಿ ಸರ್ಕಾರಿ ಮತ್ತು ಖಾಸಗಿ ಇಂಜನಿಯರ್‌ಗಳು ಕೂಡ ಹೊರರಾಜ್ಯದ ಮೇಸ್ತ್ರಿಗಳಿಗೆ ಕೆಲಸ ಕೊಡುತ್ತಿದ್ದಾರೆ. ಆಳುವ ಸರ್ಕಾರಗಳು ಜನಪ್ರತಿನಿಧಿಗಳು ದುಡಿಯುವ ಕಾರ್ಮಿಕರಿಗೆ ಸರಿಯಾದ ಕೆಲಸ ಒದಗಿಸದೇ ಇರುವುದರಿಂದ ಈ ರೀತಿಯ ತೊಂದರೆ ಉಂಟಾಗಿದೆ. ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಜಾರಿಯಲ್ಲಿರುವಂತೆ ಕರ್ನಾಟಕದಲ್ಲಿಯೂ ಜಾರಿಗೊಳಿಸಬೇಕೆಂದು ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಸಂಘದ ಗಂಗಾವತಿ ತಾಲ್ಲೂಕು ಸಮಿತಿ ಸರ್ಕಾರಕ್ಕೆ ಆಗ್ರಹಿಸಿದೆ.

ಕಟ್ಟಡ ನಿರ್ಮಾಣ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ವಸತಿ ಸೌಲಭ್ಯ, ಹಳದಿಕಾರ್ಡು, ಆಶ್ರಯ ಮನೆಗಳನ್ನು ಒದಗಿಸಬೇಕು. ಕಟ್ಟಡ ನಿರ್ಮಾಣ ಕಾರ್ಮಿಕರ ಕಾನೂನು 1996 ರ ಅಡಿಯಲ್ಲಿ ರಾಜ್ಯ ಸರ್ಕಾರ ಕೂಡಲೇ ನಿಯಮಾವಳಿಗಳನ್ನು ರಚಿಸಬೇಕು. ಕಟ್ಟಡ ನಿರ್ಮಾಣ ಕೆಲಸದಲ್ಲಿ ಎಲ್ಲಾ ಕಾರ್ಮಿಕರಿಗೆ ಗುರುತಿನ ಚೀಟಿ ನೀಡಬೇಕು. ಕೆಲಸದ ಸಮಯದಲ್ಲಿ ಉಂಟಾಗುವ ಅಪಘಾತಗಳಿಗೆ ಪರಿಹಾರ ನೀಡಬೇಕು. ನಿವೃತ್ತಿಯ ನಂತರ ಪಿಂಚಣಿ ಸೌಲಭ್ಯ ಕೊಡಬೇಕು. ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ, ಮಕ್ಕಳ ಶಿಕ್ಷಣಕ್ಕಾಗಿ ಸಹಾಯಧನ ನೀಡಬೇಕು. ಸಾಮಾಜಿಕ ಭದ್ರತೆಯನ್ನು ಒದಗಿಸಬೇಕು. ಇತ್ಯಾದಿ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಭಾರಿ ಮೆರವಣಿಗೆ ನಡೆಸಿತು.

ಫೆಬ್ರವರಿ 1 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಸಾವಿರಾರು ಕಟ್ಟಡ ನಿರ್ಮಾಣ ಕಾರ್ಮಿಕರು ಬೃಹತ್ ಮೆರವಣಿಗೆ ನಡೆಸಿದರು. ಮೆರವಣಿಗೆ ಸಿಬಿಎಸ್ ಗಂಜ್‌ನಿಂದ ಪ್ರಾರಂಭವಾಗಿ ಮಹಾವೀರ್ ಚೌಕ, ಗಾಂಧಿ ಚೌಕ, ಗಣೇಶ್ ಚೌಕ ಹಾಯ್ದು ತಾಲ್ಲೂಕು ಕಛೇರಿ ತಲುಪಿತು. ಸಭೆಯನ್ನುದ್ದೇಶಿಸಿ ಮುಖಂಡರಾದ ಎ.ಹುಲುಗಪ್ಪ, ಮಾರುತಿ ಡಿ., ಬಾಳಪ್ಪ, ಜಿ.ನಾಗರಾಜ್, ವಿ.ಮನೋಹರ್, ಎಂ.ಡಿ.ಫರೂಕ್ ಸಾಬ್, ಮುದಿಯಪ್ಪ, ಲಿಂಗಪ್ಪ ಹಣವಾಳ ಮೊದಲಾದವರು ಮಾತನಾಡಿದರು. ನಂತರ ತಹಶೀಲ್ದಾರರಿಗೆ ಮನವಿ ಪತ್ರ ಸಲ್ಲಿಸಲಾಯಿತು

ಟೆಲಿಕಾಂನಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ವಿರೋಧಿಸಿ ದಾವಣಗೆರೆಯಲ್ಲಿ ಪ್ರತಿಭಟನೆ

ಟೆಲಿಕಾಂನಲ್ಲಿ ವಿದೇಶಿ ಬಂಡವಾಳ ಹೂಡಿಕೆಯನ್ನು ಶೇಕಡಾ 74ರಷ್ಟು ಹೆಚ್ಚಿಸಹೊರಟಿರುವ ಕೇಂದ್ರ ಸರ್ಕಾರದ ನೀತಿಯನ್ನು ವಿರೋಧಿಸಿ ಫೆ.7ರಂದು ಸಿಪಿಐ(ಎಂ) ಪಕ್ಷವು ಪ್ರತಿಭಟನಾ ಪ್ರದರ್ಶನ ಮಾಡಿತು. ಪಿ.ಬಿ.ರಸ್ತೆ ಹಳೆ ಬಸ್ ನಿಲ್ದಾಣದ ಬಳಿಯ ಟೆಲಿಕಾಂ ಕಛೇರಿಯ ಮುಂದೆ ಪಕ್ಷದ ಸದಸ್ಯರು ಹಿತೈಷಿಗಳು ಸೇರಿ, ಮತ ಪ್ರದರ್ಶನ ಮಾಡಿ, ಪ್ರಧಾನ ಮಂತ್ರಿಯವರಿಗೆ ಟೆಲಿಕಾಂ ಜಿಲ್ಲಾ ಮುಖ್ಯ ಅಧಿಕಾರಿ ಮೂಲಕ ಮನವಿ ಸಲ್ಲಿಸಿದರು. ಕೆ.ಎಲ್.ಭಟ್, ಪ್ರದೇಶ ಸಮಿತಿಯ ಕಾರ್ಯದರ್ಶಿಯವರು, ಮಾತನಾಡುತ್ತಾ ಕಾಂಗ್ರೆಸ್ ನೇತೃತ್ವದ ಸರ್ಕಾರದ ಈ ದೇಶ ವಿರೋಧಿ ನೀತಿಯನ್ನು ದೇಶ ಪ್ರೇಮಿಗಳೆಂದು ಕರೆಸಿಕೊಳ್ಳುವ ವಿರೋಧ ಪಕ್ಷವಾದ ಬಿಜೆಪಿಯೂ ಬೆಂಬಲಿಸಿರುವುದನ್ನು ಖಂಡಿಸಿದರು. ದೇಶವನ್ನು ಸಾಮ್ರಾಜ್ಯಶಾಹಿಗಳಿಗೆ ಮಾರುವಲ್ಲಿ ಬಿಜೆಪಿಯೂ ಮುಂದಾಗಿರುವುದು ನಿಸ್ಸಂಶಯವಾಗಿದೆ ಎಂದರು.

ಆರ್.ಸಿ. ಉನ್ನಿತ್ತನ್ ಯೂಕೊಬ್, ಮಮ್ತಾಜ್‌ಬಿ, ಮಂಜುನಾಥ್, ಓಬಳೇಶ, ನೀಲಕಂಠೇಶ್, ನಾಗರಾಜ್ ಮೊದಲಾದ ಸಂಗಾತಿಗಳು ಮತಪ್ರದರ್ಶನದಲ್ಲಿ ಭಾಗವಹಿಸಿದ್ದರು.

ವರದಿ : **ಲಕ್ಷ್ಮಿನಾರಾಯಣ ಭಟ್**

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಘಟಕದ 21ನೇ ಸಮ್ಮೇಳನವನ್ನು ಫೆಬ್ರವರಿ 9 ರಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಅವರು ಧ್ವಜಾರೋಹಣ ಮಾಡುವ ಮೂಲಕ ಉದ್ಘಾಟಿಸಿದರು. 602 ಪ್ರತಿನಿಧಿಗಳು, 124 ವೀಕ್ಷಕರು ಮತ್ತು 33 ಗೌರವ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಜ್ಯೋತಿಬಸು, ಭೀಮನ್ ಬಸು, ಮಹ್ಮದ್ ಅಮೀನ್, ಶ್ಯಾಮಲಿ ಗುಪ್ತಾ, ಕಾಂತಿ ಬಿಸ್ವಾಸ್ ಮತ್ತು ರೂಪಚಂದ್ ಮುರ್ಮು ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯ ಸಮ್ಮೇಳನದ ಕಲಾಪಗಳನ್ನು ನಡೆಸಿತು. ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ಮತ್ತು ಸೀತಾರಾಂ ಯೆಚೂರಿ ಹಾಗೂ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾದ ಬೃಂದಾಕಾರಟ್, ಸುಕುಮೋಲ್ ಸೇನ್, ಜನಾರ್ಧನ್ ಪಾಟಿ, ಉದ್ದಬ್ ಬರ್ಮನ್, ಹನ್ನನ್ ಮುಲ್ಲಾ ಹಾಗೂ ಮಹಮ್ಮದ್ ಸಲೀಂ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಹಿರಿಯ ಮುಂದಾಳು ಸಮರ್ ಮುಖರ್ಜಿ ಅವರು ಸಮ್ಮೇಳನದ ಉದ್ದಕ್ಕೂ ಉಪಸ್ಥಿತರಿದ್ದರು.

ಉದ್ಘಾಟನೆ : ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಹರ್ಕಿಶನ್ ಸಿಂಗ್ ಸುರ್ಜಿತ ಅವರು 'ಬಂಗಾಳದ ಕಮ್ಯೂನಿಸ್ಟ್‌ರು ಹಿಂದಿನಿಂದಲೂ ಹೋರಾಟಗಳ ಮುಂಚೂಣಿಯಲ್ಲಿದ್ದವರು'. ಇಂದು ಸಿಪಿಐ(ಎಂ) ಈ ಹೋರಾಟಗಳನ್ನು ದೇಶದ ಇತರ ಭಾಗಗಳಲ್ಲಿಯೂ ಮುನ್ನಡೆಸುತ್ತಿದೆ. ಐವತ್ತು -ಅರವತ್ತರ ದಶಕಗಳಲ್ಲಿ ಪಕ್ಷವನ್ನು ಬಲಪಂಥೀಯ ವರ್ಗ ಸಹಕಾರದ ಆ ದಾರಿಯನ್ನು ತಿರಸ್ಕರಿಸಿದ ಸಿಪಿಐ(ಎಂ) ನಂತರದ ದಶಕದಲ್ಲಿ ಗಣನೀಯವಾಗಿ ಬೆಳೆಯಿತು. ಪಕ್ಷದ ಈ ಬೆಳವಣಿಗೆಗೆ ಪಕ್ಷವು ಅನುಸರಿಸುತ್ತಿರುವ ಸರಿಯಾದ ರಾಜಕೀಯ-ಸೈದ್ಧಾಂತಿಕ ದಾರಿಯೇ ಕಾರಣವಾಗಿದೆ. ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರವುಕಳೆದ 28 ವರ್ಷಗಳಿಂದ ನಿರಂತರವಾಗಿ ಅಧಿಕಾರದಲ್ಲಿ ಮುಂದುವರೆದಿರುವುದು ಸಿಪಿಐ(ಎಂ) ಅನುಸರಿಸುತ್ತಿರುವ ರಾಜಕೀಯ-ಸೈದ್ಧಾಂತಿಕ ಧೋರಣೆ ಸರಿಯಾಗಿದೆ ಎಂದೂ ಜನತೆ ಅದನ್ನು ಅಪಾರ ಬೆಂಬಲದೊಂದಿಗೆ ಅಂಗೀಕರಿಸುತ್ತಿದೆ ಎಂದು ವ್ಯಕ್ತವಾಗುತ್ತದೆ ಎಂದು ಸುರ್ಜಿತ್ ಹೇಳಿದರು.

ಕಾರ್ಯದರ್ಶಿಗಳ ವರದಿ: ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್ ಪ್ರತಿನಿಧಿಗಳ ಚರ್ಚೆಗಾಗಿ ರಾಜಕೀಯ-ಸಂಘಟನಾತ್ಮಕ ವರದಿಯನ್ನು ಮಂಡಿಸಿದರು. ಕಳೆದ 3 ವರ್ಷಗಳ ಅಂತರರಾಷ್ಟ್ರೀಯ ಬೆಳವಣಿಗೆಗಳನ್ನು ಪ್ರಸ್ತಾಪಿಸಿದ ಅವರು, ಸಾಮ್ರಾಜ್ಯಶಾಹಿ ಜಾಗತೀಕರಣದ ಪರಿಣಾಮವಾಗಿ ವಿಶ್ವದಲ್ಲಿ ಆರ್ಥಿಕ ಅಸಮಾನತೆ, ಹಸಿವು, ನಿರುದ್ಯೋಗ ಹಾಗೂ ಸಾವು-ನೋವುಗಳು ವ್ಯಾಪಕಗೊಂಡಿವೆ ಎಂದು ಹೇಳಿದರು. ಪಶ್ಚಿಮ ಬಂಗಾಳವು ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ಒಂದು ಭದ್ರ ನೆಲೆಯಾಗಿದೆ ಎಂದು ಹೇಳಿದ ಅವರು ಈ ಹೋರಾಟವನ್ನು ಮುನ್ನಡೆಸಬೇಕಾಗಿದೆ ಎಂದರು.

ರಾಷ್ಟ್ರೀಯ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಾ, ಕೋಮುವಾದಿ ಶಕ್ತಿಗಳ ವಿರುದ್ಧದ ಹೋರಾಟದಲ್ಲಿ ಸಿಪಿಐ(ಎಂ) ಎಡ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಮುನ್ನಡೆಸುವ ಪಾತ್ರವನ್ನು ಯಶಸ್ವಿಯಾಗಿ




ಪಶ್ಚಿಮ ಬಂಗಾಳದ 21ನೇ ಸಿಪಿಐ(ಎಂ) ರಾಜ್ಯ ಸಮ್ಮೇಳನ

ಪಕ್ಷದ ಐಕ್ಯತೆ ಬಲಪಡಿಸಲು, ನೆಲೆ ವಿಸ್ತರಿಸಲು, ಬಡವರಲ್ಲಿ ಕಡುಬಡವರಿಗಾಗಿ ದುಡಿಯಲು ದೃಢ ಸಂಕಲ್ಪ

ನಿರ್ವಹಿಸಿದೆ ಎಂದು ಅನಿಲ್ ಬಿಸ್ವಾಸ್ ಹೇಳಿದರು. ಇದರ ಪರಿಣಾಮವಾಗಿ 2004 ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಕೇಂದ್ರದಲ್ಲಿ ಅಧಿಕಾರದಿಂದ ಕೆಳಗಿಳಿಸಲು ಸಾಧ್ಯವಾಯಿತು. ಸಂಸತ್ತಿನಲ್ಲಿ ಎಡಪಕ್ಷಗಳಿಗೆ 61 ಸ್ಥಾನಗಳನ್ನು ಪಡೆಯಲು ಸಾಧ್ಯವಾಗಿರುವುದು ಒಂದು ಗಮನಾರ್ಹ ಬೆಳವಣಿಗೆಯಾಗಿದೆ. ಇದರಿಂದ ಉಂಟಾಗಿರುವ ಅನುಕೂಲಕರ ಪರಿಸ್ಥಿತಿಯನ್ನು ಜನರ ನಡುವೆ ಪಕ್ಷದ ನೆಲೆಯನ್ನು ವಿಸ್ತರಿಸಿ ಬಲಪಡಿಸಲು ಬಳಸಿಕೊಳ್ಳಬೇಕಾಗಿದೆ.

ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ದೂರ ಇಡುವ ಉದ್ದೇಶದಿಂದ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಎಡಪಕ್ಷಗಳು ಹೊರಗಿನಿಂದ ಬೆಂಬಲ ನೀಡುತ್ತಿದ್ದಾಗ್ಯೂ ಸಿಪಿಐ(ಎಂ) ಕಾಂಗ್ರೆಸ್ ಪಕ್ಷದ ಬಗ್ಗೆ ಯಾವುದೇ ಭ್ರಮೆಗಳನ್ನು ಇಟ್ಟುಕೊಂಡಿಲ್ಲ. ಸಿಪಿಐ(ಎಂ) ಮತ್ತು ಎಡಪಕ್ಷಗಳ ಒತ್ತಡದಿಂದಾಗಿ ಯುಪಿಎ ಸರ್ಕಾರವು ಕೆಲವು ಸಕಾರಾತ್ಮಕ ಅಂಶಗಳನ್ನು ಒಳಗೊಂಡ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಅಂಗೀಕರಿಸಿದೆ. ಸಾಮೂಹಿಕ ಚಳುವಳಿ ಮತ್ತು ಸಮರಶೀಲ ಹೋರಾಟಗಳ ಮೂಲಕವಷ್ಟೇ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಭರವಸೆಗಳನ್ನು ಅನುಷ್ಠಾನಗೊಳಿಸಲು ಸಾಧ್ಯ.



ಬೃಹತ್ ಬಹಿರಂಗ ಸಭೆ

ಯುಪಿಎ ಸರ್ಕಾರವನ್ನು ಹೊರಗಿನಿಂದ ಬೆಂಬಲಿಸುವ ಮತ್ತು ಅದೇ ಸಮಯದಲ್ಲಿ ಅದರ ಜನವಿರೋಧಿ ನೀತಿಗಳ ವಿರುದ್ಧ ಹೋರಾಡುವ ಅತ್ಯಂತ ಕ್ಲಿಷ್ಟಕರವಾದ ಜವಾಬ್ದಾರಿ ಎಡಪಕ್ಷಗಳ ಮೇಲಿದೆ. ಜನತೆಗೆ ಈ ಪರಿಸ್ಥಿತಿಯ ಗಂಭೀರತೆ ಅರ್ಥವಾಗುವಂತೆ ಮಾಡುತ್ತಾ ಅವರ ಬೆಂಬಲ ದೊರಕಿಸಿಕೊಳ್ಳಬೇಕಾಗಿದೆ. ತಕ್ಷಣದಲ್ಲಿ ತೃತೀಯ ರಂಗ ರಚನೆಯ ಸಾಧ್ಯತೆಗಳು

ಸಿಪಿಐ(ಎಂ) ಪಕ್ಷದ ಅತ್ಯಂತ ಪ್ರಮುಖ ಘಟಕವಾಗಿರುವ ಪಶ್ಚಿಮ ಬಂಗಾಳ ರಾಜ್ಯ ಘಟಕದ 21ನೇ ಸಮ್ಮೇಳನವು ಯಶಸ್ವಿಯಾಗಿ ನಡೆಯಿತು. ಪಶ್ಚಿಮ ಬಂಗಾಳದಲ್ಲಿ ಪಕ್ಷವು ನಡೆಸುತ್ತಾ ಬಂದಿರುವ ಪ್ರಜಾಸತ್ತಾತ್ಮಕ ಚಳುವಳಿಯ ಅನುಭವವು ಇಡೀ ದೇಶಕ್ಕೆ ಮಾದರಿಯಾಗಿದೆ. ಪರ್ಯಾಯ ರಾಜಕೀಯದ ಅನ್ವೇಷಣೆಯಲ್ಲಿರುವ ಕರ್ನಾಟಕದ ಜನತೆಗಾಗಿ ಸಮ್ಮೇಳನದ ಮುಖ್ಯಾಂಶಗಳನ್ನು ಇಲ್ಲಿ ಒದಗಿಸಲಾಗಿದೆ.

ನಿತ್ಯಾನಂದಸ್ವಾಮಿ

ಕಂಡುಬರುವುದಿಲ್ಲ. ಪರ್ಯಾಯ ಧೋರಣೆಗಳಿಗಾಗಿ ಜನ ಚಳುವಳಿಗಳನ್ನು ಸಂಘಟಿಸುವ ಮೂಲಕವಷ್ಟೇ ಪರ್ಯಾಯ ರಂಗವೊಂದು ಹೊರಹೊಮ್ಮುವುದು ಎಂದು ಅವರು ಹೇಳಿದರು.

ಪಶ್ಚಿಮ ಬಂಗಾಳದ ಅನುಭವ ಸಿಪಿಐ(ಎಂ) ತನ್ನ 20ನೇ ರಾಜ್ಯ ಸಮ್ಮೇಳನದ ನಂತರದ ಈ ಮೂರು ವರ್ಷಗದಲ್ಲಲಿ ಉದಾರೀಕರಣದ ದಿವಾಳಿಕೋರ ಆರ್ಥಿಕ ನೀತಿಗಳ ವಿರುದ್ಧ, ಕೋಮುವಾದ, ಪ್ರತ್ಯೇಕವಾದದ ವಿರುದ್ಧ ಮತ್ತು ಬಂಗಾಳದಲ್ಲಿ ಅರಾಜಕತೆಯನ್ನು ಉಂಟುಮಾಡಲು ಹವಣಿಸುತ್ತಿರುವ ಶಕ್ತಿಗಳ ವಿರುದ್ಧ ಜನತೆಯನ್ನು ಅಣಿನೆರೆಸುತ್ತಾ ನಿರಂತರವಾಗಿ ಸಾಮೂಹಿಕ ಚಳುವಳಿಗಳನ್ನು ನಡೆಸುತ್ತಾ ಬಂದಿದೆ.

2003 ರ ಪಂಚಾಯತ್ ಚುನಾವಣೆಗಳಲ್ಲಿ ಎಡರಂಗವನ್ನು ಹೇಗಾದರೂ ಮಾಡಿ ಸೋಲಿಸಬೇಕೆಂಬ ಉದ್ದೇಶದಿಂದ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿಗಳೆಲ್ಲರೂ ಒಂದಾಗಿ ಬಂದರು. ತೃಣಮೂಲ ಕಾಂಗ್ರೆಸ್ ಜನಜೀವನವನ್ನು ಅಸ್ತವ್ಯಸ್ತಗೊಳಿಸಲು ಪ್ರಯತ್ನ ಪಟ್ಟಿತು. ಆದರೆ ಪಶ್ಚಿಮ ಬಂಗಾಳದ ಜನತೆ ಎಡರಂಗವನ್ನು ಪ್ರಚಂಡವಾಗಿ ಬೆಂಬಲಿಸುವ ಮೂಲಕ ಇಂತಹ ಹತಾಶ ಶಕ್ತಿಗಳ ಕನಸುಗಳನ್ನು ನುಚ್ಚುನೂರು ಮಾಡಿತು.

ಈ ಅವಧಿಯಲ್ಲಿ ಎಡರಂಗ-ವಿರೋಧಿ ಶಕ್ತಿಗಳು ಒಂದಾಗಿ ಎಡರಂಗ ಸರ್ಕಾರದ ವಿರುದ್ಧ ಸಲ್ಲದ ಅಪಪ್ರಚಾರ ಮಾಡುತ್ತಾ ಎಡರಂಗ ಸರ್ಕಾರ ತನ್ನ ಧೋರಣೆಗಳನ್ನು ಜಾರಿ ಮಾಡುವಲ್ಲಿ ಸಾಕಷ್ಟು ಅಡೆತಡೆಗಳನ್ನು ನಿರ್ಮಿಸಿದವು. ಇಂತಹ ಶಕ್ತಿಗಳ ದುರುದ್ದೇಶವನ್ನು ಜನರ ನಡುವೆ ಬಯಲು ಮಾಡುತ್ತಾ ಜನರ ಪ್ರಜ್ಞೆಯನ್ನು ವಿಸ್ತರಿಸಲು ಸಿಪಿಐ(ಎಂ) ಬಡವರಲ್ಲಿ ಕಡು ಬಡವರತ್ತ ಗಮನವನ್ನು ಕೇಂದ್ರಿಕರಿಸಿತು.

ಗುಜರಾತ್‌ನಲ್ಲಿ ಮೋದಿ ಸರ್ಕಾರ ನಡೆಸಿದ ಜನಾಂಗೀಯ ಹತ್ಯೆ ಮತ್ತು ಅದಕ್ಕೆ ವಾಜಪೇಯಿ ಸರ್ಕಾರ ಲಜ್ಜೆಗೆಟ್ಟು ನೀಡಿದ ಬೆಂಬಲದ ವಿರುದ್ಧ ಸಿಪಿಐ(ಎಂ) ನಡೆಸಿದ ಪ್ರಚಾರ ಪ್ರಕ್ಷೋಭೆಯಿಂದಾಗಿ ತೃಣಮೂಲ ಕಾಂಗ್ರೆಸ್ಸಿನ ಬಣ್ಣ ಬಯಲಾಯಿತು. ನೆರೆಯ ಬಾಂಗ್ಲಾದೇಶದಲ್ಲಿ ಹೆಚ್ಚುತೊಡಗಿರುವ ಮುಸ್ಲಿಂ ಮೂಲಭೂತವಾದ ಮತ್ತು ಅದರ ಸಿದ್ಧಾಂತದ ವಿರುದ್ಧ ಸಿಪಿಐ(ಎಂ) ಅಷ್ಟೇ ಪರಿಣಾಮಕಾರಿಯಾಗಿ ಜನಜಾಗೃತಿಯಲ್ಲಿ ತೊಡಗಿತು. ಇದರ ಪರಿಣಾಮವಾಗಿ ಜನತೆಯನ್ನು ಒಂದುಗೂಡಿಸುವಲ್ಲಿ ಪಕ್ಷ ಗಣನೀಯವಾಗಿ ಯಶಸ್ವಿಯಾಯಿತು. ಇದುವೇ 2004 ರ ಲೋಕಸಭಾ ಚುನಾವಣೆಯ ಸಾಧನೆಯ ಗುಟ್ಟು.

ಈ ಅವಧಿಯಲ್ಲಿ 'ಕಾಮ್ತಾಪುರಿ ವಿಮೋಚನಾ ಸಂಘಟನೆ' (ಕೆಎಲ್‌ಓ) ಎಂಬ ಪ್ರತ್ಯೇಕತಾವಾದಿ ಸಂಘಟನೆಯು ಸಾಕಷ್ಟು ಹಾವಳಿಯನ್ನುಂಟುಮಾಡಿತು. ಅವರ ದಾಳಿಯಲ್ಲಿ ಪಕ್ಷದ ಜಲಪೈಗುರಿ ಜಿಲ್ಲಾ ಸಮಿತಿಯ ಸದಸ್ಯ ಗೋಪಾಲ ಚಾಕಿ ಅವರೂ ಸೇರಿದಂತೆ ಒಟ್ಟು 22 ಜನ ಸಂಗಾತಿಗಳು ಹತರಾದರು. ಕೂಚ್ ಬಿಹಾರ್ ಮತ್ತು ಡಾರ್ಜಲಿಂಗ್ ಪ್ರದೇಶದಲ್ಲಿ 35 ಜನ ಪಕ್ಷದ ಸದಸ್ಯರನ್ನು,ಹಿತೈಷಿಗಳನ್ನು ಸಾಯಿಸಲಾಗಿದೆ. ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ ಇಂತಹ ಪ್ರತ್ಯೇಕತಾವಾದಿ ಸಂಘಟನೆಗಳೊಂದಿಗೆ ಕೈಜೋಡಿಸಿಕೊಂಡು ಕೆಲಸಮಾಡುತ್ತಿದೆ. ಇದರಿಂದಾಗಿ ಚುನಾವಣೆಯಲ್ಲಿ ಜನರಿಂದ ತಿರಸ್ಕರಿಸಲ್ಪಟ್ಟರೂ ಕೆಎಲ್ ಓ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ.

ಮಾವೋವಾದಿಗಳು


ದಕ್ಷಿಣ ಬಂಗಾಳದ ಪಶ್ಚಿಮ ಭಾಗಗಳಲ್ಲಿ ಮಾವೋವಾದಿಗಳು ತಮ್ಮ ತೀವ್ರವಾದಿ ಚಟುವಟಿಕೆಗಳನ್ನು ಹೆಚ್ಚಿಸಿಕೊಂಡಿವೆ. ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸುತ್ತಾ ಅವರು ಕೊಲೆ, ಲೂಟಿ ಮಾಡುತ್ತಿದ್ದಾರೆ. ನೇಪಾಳದ ಮಾವೋವಾದಿಗಳೊಂದಿಗೆ ಸಂಪರ್ಕ ಹೊಂದಿದ್ದಾರೆ. ಸಿಪಿಐ(ಎಂ) ಕಾರ್ಯಕರ್ತರನ್ನು ಸಾಯಿಸುವುದೇ ಅವರ ಮುಖ್ಯಗುರಿಯಾಗಿದೆ. ಪಕ್ಷವು ಇಂತಹ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ನಿರಂತರ ಹೋರಾಟ ನಡೆಸುತ್ತಿದೆ. ದುಡಿಯುವ ಜನಗಳು ಇವರ ಬೆದರಿಕೆಗಳಿಗೆ ಸೊಪ್ಪು ಹಾಕದೆ ಪಕ್ಷವನ್ನು ಚುನಾವಣೆಗಳಲ್ಲಿ ಪ್ರಚಂಡವಾಗಿ ಬೆಂಬಲಿಸಿದ್ದಾರೆ. ಈ ಹೋರಾಟವನ್ನು ಬಲಪಡಿಸಿ ಮುನ್ನಡೆಸುವುದು ಪಕ್ಷದ ಕರ್ತವ್ಯವಾಗಿದೆ. ರಾಜ್ಯದಲ್ಲಿ ಅಭಿವೃದ್ಧಿಯಾಗದೆ ಇರುವ ಪ್ರದೇಶಗಳತ್ತ ಹೆಚ್ಚು ಗಮನ ನೀಡುತ್ತಾ ಆರ್ಥಿಕ ಮತ್ತು ಸಾಮಾಜಿಕ ನ್ಯಾಯದ ಹೋರಾಟವನ್ನು ಮುಂದುವರೆಸಬೇಕಾಗಿದೆ ಎಂದು ಅನಿಲ್ ಬಿಸ್ವಾಸ್ ಅಭಿಪ್ರಾಯಪಟ್ಟರು.

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ವಿರುದ್ಧ ಕಳೆದ 28 ವರ್ಷಗಳಿಂದ ಪಿತೂರಿಯೊಂದು ನಡೆಯುತ್ತಲೇ ಇದೆ.

ಪುಟ 10 ಕ್ಕೆ

ಬಡವರಿಂದ ಕಸಿದು ಶ್ರೀಮಂತರಿಗೆ ಕೊಡುವ ಬಜೆಟ್ ಎಂಬ ಕಸರತ್ತು

ಕುರುಡು ಕಾಂಚಾಣ



ಜಿ.ಎಸ್.ಮಣಿ

ಇದು ಪ್ರಕಟವಾಗುವ ಹೊತ್ತಿಗೆ ಭಾರತ ಸರ್ಕಾರದ 205-06ನೇ ಸಾಲಿನ ಬಜೆಟ್ ಬಂದಿರುತ್ತದೆ. ಮುಂದಿನ ಒಂದು ವರ್ಷದಲ್ಲಿ ಯಾವ್ಯಾವ ಮೂಲಗಳಿಂದ ಸಂಪನ್ಮೂಲಗಳನ್ನು ಸಂಗ್ರಹಿಸಿ ಯಾವ್ಯಾವ ಬಾಬತ್ತುಗಳಿಗೆ ಖರ್ಚು ಮಾಡಲಾಗುವುದು ಎನ್ನುವುದನ್ನು ಹೇಳುವುದೇ ಬಜೆಟ್. ಈ ಬಜೆಟ್‌ಗಾಗಿ ಭಾರೀ ತಯಾರಿ ಹಲವು ತಿಂಗಳುಗಳಿಂದಲೇ ನಡೆದಿದೆ. ದೇಶದ ಜನಸಾಮಾನ್ಯರಿಗೆ ಅನುಕೂಲಗಳನ್ನು ಹೆಚ್ಚಿಸಿ ಎಂದು ಎಡಪಕ್ಷಗಳು ಹಣಕಾಸು ಮಂತ್ರಿಗಳನ್ನು ಭೇಟಿ ಮಾಡಿ ಹೇಳುರುವುದೂ ಈ 'ತಯಾರಿ' ಎಂಬ ಕೆಲಸದಲ್ಲಿಯೇ.

ದುಡಿಮೆಯಿಂದಲೇ ಸಂಪತ್ತಿನ ಸೃಷ್ಟಿಯಾಗುವುದು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಮಂತ್ರಗಳಿಂದ ಸಂಪತ್ತಿನ ಸೃಷ್ಟಿಯಾಗುವುದಾಗಿದ್ದರೆ ಭಾರತ ಅತ್ಯಂತ ಶ್ರೀಮಂತ ರಾಷ್ಟವಾಗಿರಬೇಕಾಗಿತ್ತು. ಯಾಕೆಂದರೆ ಇಲ್ಲಿ ಅತಿ ಹೆಚ್ಚು ಮಂತ್ರ ಸಂಪತ್ತಿನ ಸೃಷ್ಟಿ ಯಾಗುವುದು. ಈ ಹಿನ್ನೆಲೆಯಲ್ಲಿಯೇ ಶ್ರಮದ ಬೆಲೆ ಕಡಿಮೆ ಮಾಡಿ ಬಂಡವಾಳದ ಬೆಲೆಯನ್ನು ಹೆಚ್ಚಿಸುವ ಕೆಲಸವನ್ನು ಬಂಡವಾಳಿಗರು (ಅಂದರೆ ಸ್ವತಃ ಬಂಡವಾಳವೇ) ಮಾಡುತ್ತ ಬಂದಿದೆ.

ಇದೆ ಕೆಲಸವನ್ನು ಹಲವು ಸೋಗುಗಳಡಿ ಬಜೆಟ್ಟಿನಲ್ಲೂ ಮಾಡಲಾಗುತ್ತದೆ. ಶ್ರಮದಿಂದಲೇ ಸಂಪತ್ತಿನ ಸೃಷ್ಟಿ ಎಂಬುದು ಒಪ್ಪಿಕೊಂಡರೆ ಶ್ರಮಕ್ಕೆ ಅತ್ಯಂತ ಹೆಚ್ಚಿನ ಬೆಲೆ ಕೊಡಬೇಕಾಗುತ್ತದೆ. ಇದರ ಅರ್ಥ ಶ್ರಮಿಕರು ಅಂದರೆ ಕಾರ್ಮಿಕರು ರೈತ ಕೂಲಿಕಾರರಿಗೆ ಆದ್ಯತೆ ನೀಡಬೇಕಾಗುತ್ತದೆ. ಇಂದು ಇಂತಹ ಮಾತನ್ನಾಡಿದರೇ ಜನ ನಗುವಂತಹ ಪರಿಸ್ಥಿತಿ ಇದೆ.

ಹಿಂದಿನ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಸಾಮ್ರಾಜ್ಯಶಾಹಿಗಳು ಅಥವಾ ಜಾಗತಿಕ ಬಂಡವಾಳಿಗರಿಗೆ ಅನುಕೂಲವಾಗುವ ಎಲ್ಲ ಕ್ರಮಗಳನ್ನು ಬಜೆಟ್ಟುಗಳ ಮೂಲಕ ಕೈಗೊಂಡಿತು. ಜನ ಅದನ್ನು ಅಧಿಕಾರದಿಂದ ಕೆಳಗಿಳಿಸಿ ಯುಪಿಎ ಸರ್ಕಾರಕ್ಕೆ ಅಧಿಕಾರ ನೀಡಿದರು. ಎಡಪಕ್ಷಗಳ ಬೆಂಬಲದ ಅವಶ್ಯಕತೆ ಇರುವುದರಿಂದ ಈ ಸರ್ಕಾರ ಅಷ್ಟು ನಿರ್ದಾಕ್ಷಿಣ್ಯವಾಗಿ ನಿರ್ಧಾರಗಳನ್ನು ಕೈಗೊಳ್ಳುವಂತಿಲ್ಲ. ಆದರೂ ಬಿಜೆಪಿಯಂತಹದ್ದೇ ಆರ್ಥಿಕ ನೀತಿಗಳನ್ನು ಹೊಂದಿರುವ ಕಾಂಗ್ರೆಸ್ ಬಂಡವಾಳಿಗರಿಗೆ / ಸಾಮ್ರಾಜ್ಯಶಾಹಿಗಳಿಗೇ ಅನುಕೂಲ ಮಾಡಿಕೊಡುವ ಹುನ್ನಾರದಲ್ಲಿದೆ. ಬಜೆಟ್ ಪೂರ್ವದ ಸದ್ದುಗಳನ್ನು ನೋಡಿ :

1. ಗ್ರಾಮೀಣ ಉದ್ಯೋಗ ಭರವಸೆ ಯೋಜನೆಗೆ ಹಣವೆಲ್ಲಿದೆ ಎಂದು ಇವರು ಕೇಳುತ್ತಾರೆ. ಅದೇ ಉದ್ಯಮಿಗಳಿಗೆ, ಶೇರು ಮಾರುಕಟ್ಟೆ ಎಂಬ ಜೂಜಿನ ಅಡ್ಡೆಯಲ್ಲಿ ಹಣತೊಡಗಿಸುವವರಿಗೆ ರಿಯಾಯಿತಿ ನೀಡಲು ಹಣವಿರುತ್ತದೆ.

2. ಲಾಭದಾಯಕ ಸಾರ್ವಜನಿಕ ವಲಯದ ಘಟಕಗಳನ್ನು ಮಾರಿದರೆ ಹಣ ಬರುವ ಒಳಗುಟ್ಟು : ಬಂಡವಾಳಿಗಳಿಗೆ ಸಂಪತ್ತನ್ನೇ ಹೇರಿಕೊಡುವುದು, ದುಡಿವ ಜನರ ಕೆಲಸಗಳನ್ನು ಕಳೆದು ಅವರನ್ನು ಬೀದಿ ಪಾಲಾಗಿಸುವುದು.

3. ಸಾರ್ವಜನಿಕ ಆರೋಗ್ಯ, ಶಿಕ್ಷಣದಂತಹ ಬಹುಮುಖ್ಯ ಕಾರ್ಯಗಳಿಗೆ ಹಣವಿಲ್ಲ. ಇದನ್ನು ಸಂಗ್ರಹಿಸಲು ಬಡವರನ್ನೇ ಯಾಕೆ ಹಿಂಡಬಾರದೆಂಬ ವಿಚಾರವೂ ಇದೆ.

4. ರೋಗಗ್ರಸ್ತ ಸರ್ಕಾರೀ ಉದ್ದಿಮೆಗಳನ್ನು ಪುನರುಜ್ಜೀವನಗೊಳಿಸಲು ಹಣವಿಲ್ಲ, ಇದಕ್ಕೆ ಒಳಗುಟ್ಟು ಏನೆಂದರೆ ಬಂಡವಾಳಿಗರಿಗೆ ಇದರ ಪೂರ್ತಿ ಅನುಕೂಲ ಮಾಡಿಕೊಡುವುದು. ಉದ್ದಿಮೆಗಳನ್ನು ಅವರಿಗೆ ವಹಿಸುವುದು. ಆ ಮೂಲಕ ಕೆಲಸಗಾರರನ್ನು ಹೇಗೆ ಬೇಕಾದರೂ ತೆಗೆದುಹಾಕಲು ಅನುಕೂಲ ಮಾಡಿಕೊಡುವುದು.

5. ರೈಲು ಪ್ರಯಾಣದರವನ್ನು ಜನಸಾಮಾನ್ಯರ ಮಟ್ಟದಲ್ಲಿ ಹೆಚ್ಚಿಸುವುದು. ಯಾಕೆಂದರೆ ಶ್ರೀಮಂತರಿಗೆ ಹೆಚ್ಚಿಸಿದರೆ ಶ್ರೀಮಂತರಿಂದ ಬಡವರಿಗೆ ಸಹಾಯಧನ ನೀಡಿದಂತಾಗುತ್ತದಲ್ಲ.

ಹೀಗೆ ಹಲವು ಕ್ರಮಗಳು ಬಡಜನಸಾಮಾನ್ಯರ ವಿರುದ್ಧ ಮತ್ತು ಬಂಡವಾಳಿಗರ ಪರವಾಗಿಯೇ ಇರುತ್ತದೆ. ಅವರ ವಿಚಾರ ಲಹರಿಯೇ ಆ ದಿಕ್ಕಿನಲ್ಲಿ ಇರುತ್ತದೆ.

ಭಾರತದ ಮೆಣಸಿನಕಾಯಿ ಪುಡಿಗೆ ಕಲ್ಲು!

ಇದು ಯುರೋಪಿನ ಸಮುದಾಯ ಹಾಕಿದ್ದು, ವಿಶ್ವವ್ಯಾಪಾರ ಸಂಸ್ಥೆಯ ಒಪ್ಪಂದದಡಿ ಬರುವವರಿಗೆ ವಿದೇಶೀ ವ್ಯಾಪಾರೀ ತಡೆಗಳು ಕಡಿಮೆ ಇರುತ್ತದೆ ಎಂಬುದು ಉದಾರೀಕರಣವಾದಿಗಳ ಅಂಬೋಣ. ಹಾಗಾದಾಗ ಭಾರತದ ರಫ್ತು ಬೆಳೆಯುತ್ತದೆ. ಜೊತೆಗೆ ದೇಶದ ಆರ್ಥಿಕವೂ ಸಹ ಎಂಬುದು ಅವರ ವಾದ. ಆದರೆ ನಮ್ಮಿಂದ ಸರಕುಗಳನ್ನು ಆಮದು ಮಾಡಿಕೊಳ್ಳುವ ಅಭಿವೃದ್ಧಿ ಹೊಂದಿದ ದೇಶಗಳು ಬಹಳ ಜಾಣ ದೇಶಗಳು. ಏನಾದರೊಂದು ನೆವ ಹೇಳಿ ನಮ್ಮ ರಫ್ತನ್ನು ಅವರು ತಡೆಯುತ್ತಾರೆ.

ಈಗ ಯುರೋಪಿನ ಸಮುದಾಯ ಭಾರತದ ಮೆಣಸಿನಕಾಯಿ ಪುಡಿಯಲ್ಲಿ ಕ್ಯಾನ್ಸರ್‌ಕಾರಕ ವಸ್ತುಗಳಿವೆ. ಆದ್ದರಿಂದ ಆಮದು ಮಾಡಲು ಅನುಮತಿಯಿಲ್ಲವೆಂದು ನಿರ್ಬಂಧ ಹಾಕಿದ್ದಾರೆ. ಈಗ ಮುಕ್ತ ಮಾರುಕಟ್ಟೆ ಎನ್ನುವಾಗಲೂ ಇಂತಹ ಖ್ಯಾತೆ ತೆಗೆಯುವುದು ಸುಲಭ. ಕ್ಯಾನ್ಸರ್‌ಕಾರಕ ವಸ್ತು ಯಾವುದು. ಯಾರು ಈ ಸಂಶೋಧನೆ ಮಾಡಿದರು? ಇದನ್ನೆಲ್ಲ ಕೇಳಬೇಡಿ.

ಉದಾರೀಕರಣದಡಿ ನಮಗೆ ಮುಕ್ತ ಮಾರುಕಟ್ಟೆ ದೊರೆತಿದೆಯಲ್ಲವೆ? ಬಂಡವಾಳಿಗರಿಂದ ಸಂಪನ್ಮೂಲಗಳನ್ನು ಸಂಗ್ರಹಿಸಿ ಜನಸಾಮಾನ್ಯರಿಗೆ ಕನಿಷ್ಠ ಅನುಕೂಲಗಳನ್ನು ಕೊಡುವುದರಿಂದ ಬಂಡವಾಳಿಗರು ಸಾಯುವುದಿಲ್ಲ. ಆದರೆ ಬಡವರಿಂದ ಕಸಿದು ಶ್ರೀಮಂತರಿಗೆ ನೀಡಿದರೆ ಬಡವರ ರೊಟ್ಟಿಯನ್ನೇ ಕಸಿದುಕೊಟ್ಟಂತೆ.

ಬಂಡವಾಳಶಾಹಿಯ ಬಜೆಟ್ ಅಂತಹ ಶೋಷಣಾತ್ಮಕ ಗುಣದ್ದು. ಶ್ರಮಿಕ ವರ್ಗ ಸುಮ್ಮನೆ ಏನೂ ಕುಳಿತಿಲ್ಲ. ಸಿಐಟಿಯುವಿನಂತಹ ಕಾರ್ಮಿಕರ ಸಂಘಟನೆಯ ಮುಖ್ಯಸ್ಥರೂ ಹಣಕಾಸು ಮಂತ್ರಿಗಳನ್ನು ಭೇಟಿ ಮಾಡಿ ಕಾರ್ಮಿಕರ ಹಿತಾಸಕ್ತಿಗಳನ್ನು ಕಾಯುವಂತೆ ಕೇಳಿದ್ದಾರೆ.

ಎಡಪಕ್ಷಗಳ ನೇತೃತ್ವದಲ್ಲಿ ಹಲವು ಹೋರಾಟಗಳನ್ನು ಮಾಡುತ್ತಲೂ ಕಾರ್ಮಿಕರು ಮತ್ತು ರೈತ ಕೂಲಿಕಾರರು ಈ ಕಸಿಯುವ ಕೆಲಸಕ್ಕೆ ತಡೆಯೊಡ್ಡಲು ಪ್ರಯತ್ನಿಸುತ್ತಿದ್ದಾರೆ.

ಹೋರಾಟ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಬಜೆಟ್ ಜನಸಾಮಾನ್ಯರ ಬಜೆಟ್ ಆಗುವವರೆಗೆ.

ಪಶ್ಚಿಮ ಬಂಗಾಳದ 21ನೇ ಸಿಪಿಐ(ಎಂ) ರಾಜ್ಯ ಸಮ್ಮೇಳನ......

ಪುಟ 9 ರಿಂದ

ಎಡರಂಗ ಸರ್ಕಾರದ ತತ್ವಬದ್ಧ ನಿಲುವುಗಳಿಂದಾಗಿ ಜಾಗತೀಕರಣ ಪರವಾದ ಮತ್ತು ಕೋಮುವಾದಿ ಶಕ್ತಿಗಳ ಅಸಹನೆ ತೀವ್ರವಾಗಿದೆ. ಮಾಧ್ಯಮಗಳಲ್ಲಿ ಒಂದು ವಿಭಾಗ ಎಡರಂಗ ಸರ್ಕಾರದ ವಿರುದ್ಧ ಸತತವಾದ ಅಪಪ್ರಚಾರದಲ್ಲಿ ತೊಡಗಿವೆ. ಆಳುವ ವರ್ಗಗಳು ಎಡರಂಗದ ಪತನವನ್ನನು ಬಯಸುತ್ತಿವೆ. ಎಡರಂಗದ ಐಕ್ಯತೆಯನ್ನು ಬಲಪಡಿಸುತ್ತಾ ಜನರ ಹಿತಗಳನ್ನು ಕಾಪಾಡುವತ್ತ ಇನ್ನೂ ಹೆಚ್ಚು ಕ್ರಿಯಾಶೀಲವಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ಸಿಪಿಐ(ಎಂ) ಮೇಲಿದೆ.

ಸಂಘಟನೆ: ಈ ಅವಧಿಯಲ್ಲಿ ರಾಜ್ಯದಲ್ಲಿ ಪಕ್ಷದ ಸದಸ್ಯತ್ವ ಶೇ 11.25 ರಷ್ಟು ಹೆಚ್ಚಾಗಿದೆ. ಕಾರ್ಮಿಕರ ನಡುವೆ ಪಕ್ಷದ ಸದಸ್ಯತ್ವ ಶೇ 13.49 ರಷ್ಟು ಹೆಚ್ಚಾಗಿದೆ. ಮಹಿಳೆಯರ ನಡುವೆ ಪಕ್ಷದ ಸದಸ್ಯತ್ವ ಶೇ 7.72 ರಿಂದ ಶೇ 9.37 ಕ್ಕೆ ಏರಿದೆ. ದಲಿತ ವಿಭಾಗಗಳಿಂದ ಬಂದಿರುವ ಸದಸ್ಯತ್ವ ಶೇ 21.27 ರಷ್ಟು ಹೆಚ್ಚಾಗಿದೆ. ಅಲ್ಪಸಂಖ್ಯಾತರ ನಡುವೆ ಪಕ್ಷದ ಸದಸ್ಯತ್ವ 19.55 ರಷ್ಟು ಹೆಚ್ಚಾಗಿದೆ. ವಿದ್ಯಾರ್ಥಿ ಯುವಜನರ ನಡುವಿನ ಸದಸ್ಯತ್ವವೂ ಗಣನೀಯವಾಗಿ ಹೆಚ್ಚಾಗಿದೆ. ಪಶ್ಚಿಮ ಬಂಗಾಳದಲ್ಲಿ ಈಗ ಪಕ್ಷಕ್ಕೆ ಒಟ್ಟು 25,650 ಶಾಖೆಗಳು 1771 ಸ್ಥಳೀಯ ಸಮಿತಿಗಳು ಮತ್ತು 309 ಪ್ರದೇಶ ಸಮಿತಿಗಳಿವೆ.

ಮುಂದಿನ ಕರ್ತವ್ಯಗಳು: ರಾಜ್ಯ ಕಾರ್ಯದರ್ಶಿಯವರು ಮಂಡಿಸಿದ ರಾಜಕೀಯ ಸಂಘಟನಾತ್ಮಕ ವರದಿಯನ್ನು ಚರ್ಚಿಸಿ ಅಂಗೀಕರಿಸಿದ ಸಮ್ಮೇಳನವು ಕೆಲವು ಮುಖ್ಯ ಕರ್ತವ್ಯಗಳನ್ನು ಅಂಗೀಕರಿಸಿತು. ಪಕ್ಷದ ಐಕ್ಯತೆಯನ್ನು ಬಲಪಡಿಸುವುದು, ಪಕ್ಷದ ಸದಸ್ಯರಿಗೆ ಬೇರೆ ಬೇರೆ ಮಟ್ಟಗಳಲ್ಲಿ ಶಿಕ್ಷಣ ಒದಗಿಸಲು ಈಗ ಇರುವ ವ್ಯವಸ್ಥೆಯನ್ನು ಇನ್ನೂ ಉತ್ತಮಪಡಿಸುವುದು, ಸಾಮ್ರಾಜ್ಯವಾದ, ಉದಾರೀಕರಣ, ಖಾಸಗೀಕರಣ, ಕಾರ್ಮಿಕ ಹಕ್ಕುಗಳ ಮೇಲೆ ಧಾಳಿ, ಸಾಂಸ್ಕೃತಿಕ ರಂಗದ ಮೇಲಿನ ದಾಳಿಯ ವಿರುದ್ಧ ಚಳುವಳಿಯನ್ನು ತೀವ್ರಗೊಳಿಸುವುದು, ಬಹುಸಂಖ್ಯಾತ ಹಾಗೂ ಅಲ್ಪಸಂಖ್ಯಾತ ಕೋಮುವಾದದ ಹಾಗೂ ಜಾತೀಯ ರಾಜಕೀಯದ ಅಪಾಯವನ್ನು ಮನವರಿಕೆ ಮಾಡುತ್ತಾ ದುಡಿಯುವ ಜನರ ಐಕ್ಯತೆಯನ್ನು ಬಲಪಡಿಸುವುದು, ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಸಕಾರಾತ್ಮಕ ಅಂಶಗಳ ಜಾರಿಗಾಗಿ ಹಾಗೂ ವಿಶ್ವಬ್ಯಾಂಕ್ ನಿರ್ದೇಶಿತ ಜನ ವಿರೋಧಿ ನೀತಿಗಳ ವಿರುದ್ಧ ಹೋರಾಟವನ್ನು ಮುನ್ನಡೆಸುವುದು, ರಾಜ್ಯಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡುವಂತೆ ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನರ್‌ರಚಿಸುವುದು, ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ಜನಾಭಿಪ್ರಾಯವನ್ನು ಬಲಪಡಿಸುವುದು, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳ ಸ್ವತಂತ್ರ ಕಾರ್ಯನಿರ್ವಹಣೆ ಹಾಗೂ ನ್ಯಾಯಾಂಗದ ಅನಗತ್ಯ ಹಸ್ತಕ್ಷೇಪಕ್ಕೆ ತಡೆ, ಬಾಲ್ಯ ವಿವಾಹ, ವರದಕ್ಷಿಣೆ, ಮಹಿಳೆಯರ ಮೇಲಿನ ದೌರ್ಜನ್ಯ, ಮೂಢನಂಬಿಕೆ, ಕಂದಾಚಾರ ತಡೆಯಲು ಜನರನ್ನು ಒಂದುಗೂಡಿಸುವುದು, ಎಡರಂಗದ ವಿರುದ್ಧ ಮಾಧ್ಯಮಗಳ ಒಂದು ವಿಭಾಗ ನಡೆಸುತ್ತಿರುವ ಸುಳ್ಳು ಪ್ರಚಾರಗಳ ವಿರುದ್ಧ ಜನಾಭಿಪ್ರಾಯ ರೂಪಿಸುವುದು, ಎಡರಂಗದ ಸರ್ಕಾರದ ಸಾಧನೆಗಳನ್ನು ಜನತೆಗೆ ವಿವರಿಸುವುದು, ಎಡಶಕ್ತಿಗಳ ಐಕ್ಯತೆಯನ್ನು ಬಲಪಡಿಸುವುದು, ಮಾರ್ಕ್ಸ್‌ವಾದಿ ಸಾಹಿತ್ಯ ಪ್ರಸಾರವನ್ನು ಹೆಚ್ಚಿಸುವುದು, ಪಕ್ಷದೊಳಗೆ ತಪ್ಪು ಪ್ರವೃತ್ತಿಗಳನ್ನು ತೆಗೆದುಹಾಕಲು ತಿದ್ದುಪಡಿ ಚಳುವಳಿಯನ್ನು ಮುಂದುವರೆಸಿರುವುದು, ಪಕ್ಷಕ್ಕೆ ಮತ್ತು ಸಾಮೂಹಿಕ ಸಂಘಟನೆಗಳಿಗೆ ಪೂರ್ಣಕಾಲದ ಕಾರ್ಯಕರ್ತರನ್ನು ಹೆಚ್ಚಿಸುವುದು ಮತ್ತು ಅವರಿಗೆ ಅಗತ್ಯವಾದ ತರಬೇತಿಯನ್ನು ನಿರಂತರವಾಗಿ ಒದಗಿಸುವುದು. ಎಲ್ಲಕ್ಕೂ ಮುಖ್ಯವಾಗಿ ಗ್ರಾಮಗಳಲ್ಲಿ ಮತ್ತು ನಗರಗಳಲ್ಲಿ ಬಡವರಲ್ಲಿ ಕಡು ಬಡವರ ನಡುವೆ ಪಕ್ಷದ ಕೆಲಸವನ್ನು ಹೆಚ್ಚಿಸಲು ಮತ್ತು ಈ ಕೆಲಸವನ್ನು ಸಮರ್ಪಣಾ ಭಾವನೆಯಿಂದರೂ ಪಾರದರ್ಶಕ ವಾಗಿಯೂ ಮಾಡುವಂತಾಗಬೇಕೆಂದು ಸಮ್ಮೇಳನ ನಿರ್ಣಯಿಸಿದೆ.



ಸಮ್ಮೇಳನದಲ್ಲಿ ಕಾಂ. ಸುರ್ಜಿತ್

ಬೃಹತ್ ಬಹಿರಂಗ ಸಭೆ:

ಸಮ್ಮೇಳನದ ಕೊನೆಯ ಭಾಗವಾಗಿ ಬೃಹತ್ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಉರಿ ಬಿಸಿಲನ್ನು ಲೆಕ್ಕಿಸದೆ 5 ಲಕ್ಷಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು. ಅವರ ನೆಚ್ಚಿನ ನಾಯಕರು ಭಾಷಣಗಳನ್ನು ಭಾರಿ ಜಯಘೋಷಗಳಿಂದ ಸ್ವಾಗತಿಸುತ್ತಿದ್ದರು. ಎಡರಂಗದ ಅಧ್ಯಕ್ಷರೂ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಭೀಮನ್ ಬಸು ಅಧ್ಯಕ್ಷತೆ ವಹಿಸಿದ್ದರು. ಹರ್‌ಕಿಶನ್ ಸಿಂಗ್ ಸುರ್ಜಿತ್, ಜ್ಯೋತಿಬಸು, ಪ್ರಕಾಶ್ ಕಾರಾಟ್, ಅನಿಲ್ ಬಿಸ್ವಾಸ್ ಮತ್ತು ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದರು ■

ಕ್ರಾಂತಿಕಾರಿ ಚವೇಝ್‌ಗೆ........ ಲಾಲ್ ಸಲಾಂ!

ಶರತ್ ಚಂದ್ರ

ಲ್ಯಾಟಿನ್ ಅಮೆರಿಕಾದ ಜನತೆಯನ್ನೇ ಏಕೆ, ಇಡೀ ಜಗತ್ತಿನ ಬಡಜನರಲ್ಲಿ ಭವಿಷ್ಯದ ಬಗ್ಗೆ ಉತ್ಸಾಹ, ಭರವಸೆ ಮೂಡಿಸಿದ ವೆನೆಜುವೆಲಾ ಅಧ್ಯಕ್ಷ ಚವೇಝ್ ಭಾರತಕ್ಕೆ ಬರುತ್ತಿದ್ದಾರೆ - ಮಾರ್ಚ್ 4 ರಿಂದ 7 ರವರೆಗೆ ಬೆಂಗಳೂರಿಗೂ ಬರಲಿದ್ದಾರೆ. ಕ್ರಾಂತಿಕಾರಿ ಚವೇಝ್‌ಗೆ 'ಲಾಲ್ ಸಲಾಂ' ಹೇಳಲು ಸ್ವಾಗತಿಸಲು ಸಿದ್ಧರಾಗಿರೋಣ!

ಪ್ರಭಾವಶಾಲಿ ನಾಯಕರಾಗಿ ಹೊಮ್ಮಿದ್ದಾರೆ ಚವೇಝ್.

ಅಮೆರಿಕನ್ ಸಾಮ್ರಾಜ್ಯಶಾಹಿಯ ಬೆದರಿಕೆಗೆ ಜಗ್ಗುವುದಿಲ್ಲ ಎಂದು ತೋರಿಸಿಕೊಟ್ಟಿದೆ ವೆನೆಜುವೆಲಾ. ಆಗಸ್ಟ್ 15, 2004 ರಂದು ನಡೆದ ಜನಮತ ಸಂಗ್ರಹದಲ್ಲಿ ಶೇಕಡಾ 60 ರಷ್ಟು ಪ್ರಚಂಡ ಬಹುಮತವನ್ನು ಚವೇಝ್ ಪಡೆದರು. ಚವೇಝ್‌ರನ್ನು ಅಧಿಕಾರದಿಂದ ಇಳಿಸುವ ಎರಡನೇ ಪ್ರಯತ್ನ ವಿಫಲವಾಗಿತ್ತು ಆಗ.

ಬೆಂಗಳೂರಿಗೆ ಸ್ವಾಗತ!

ವೆನೆಜುವೆಲಾ ಅಧ್ಯಕ್ಷ ಚವೇಝ್ ಲ್ಯಾಟಿನ್ ಅಮೆರಿಕಾದ ಹೊಸ ರಾಜಕೀಯ ನಾಯಕತ್ವದ ಪ್ರತೀಕ. ರಾಷ್ಟ್ರೀಯ ಸಾರ್ವಭೌಮತೆ ಎತ್ತಿ ಹಿಡಿಯುವ, ಸಾಮ್ರಾಜ್ಯಶಾಹಿ ಹೊರಿಸಲು ಪ್ರಯತ್ನಿಸುವ ಜಾಗತೀಕರಣದ ನೀತಿಗಳನ್ನು ತಿರಸ್ಕರಿಸುತ್ತಿದೆ ಈ ಹೊಸ ನಾಯಕತ್ವ. ತೈಲಸಂಪನ್ಮೂಲ ಭರಿತವಾಗಿರುವ ತಮ್ಮ ದೇಶದ ಬಡ ಜನರಿಗೆ ಶಿಕ್ಷಣ, ಆರೋಗ್ಯ ಮತ್ತು ಆಹಾರ ಒದಗಿಸಲು ದಿಟ್ಟ ಕ್ರಮಗಳನ್ನು ಕೈಗೊಂಡಿದ್ದಾರೆ. ಮೂರನೇ ಜಗತ್ತಿನ ಬಡದೇಶಗಳ ನಡುವೆ ಸಹಕಾರಕ್ಕೆ ಬಹಳ ಒತ್ತು ಕೊಡುವವರು. ಕ್ರಾಂತಿಕಾರಿ ಕಣ್ಣೋಟದಿಂದ ಜನಮನ ಗೆದ್ದ

ಚವೇಝ್ ಕ್ಯೂಬಾ ಜತೆ ನಿಕಟಸಂಬಂಧ ಬೆಳೆಸಿದ್ದಾರೆ. ಆ ಮೂಲಕ ಲ್ಯಾಟಿನ್ ಅಮೆರಿಕಾದ ಇತರ ದೇಶಗಳಂತೆ ವಿನಾಶಕಾರಿ ಹಾದಿ ಹಿಡಿಯಲಿಲ್ಲ. ಬ್ರೆಜಿಲ್‌ನ ಅಧ್ಯಕ್ಷ ಲುಲಾ ವೆನೆಜುವೆಲಾಕ್ಕೆ ಇತ್ತೀಚಿನ ಭೇಟಿಯಲ್ಲಿ ರಕ್ಷಣೆ ಮತ್ತು ಇಂಧನ ಶಕ್ತಿ ಕ್ಷೇತ್ರದಲ್ಲಿ ಸಹಕಾರ ಬೆಳೆಸುವ ಮೂಲಕ ದೂರಗಾಮಿ ಕೂಟ ಬಲಪಡಿಸಿಕೊಂಡಿದ್ದಾರೆ. ಚವೇಝ್ ಕಳೆದ ವರ್ಷ ರಶ್ಯಾ, ಇರಾನ್ ಮತ್ತು ಚೀನಾಗಳಿಗೆ ಭೇಟಿ ನೀಡಿ ಆ ದೇಶಗಳೊಂದಿಗೆ ಸಂಬಂಧ ಬಲಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಚವೇಝ್‌ರ ಭಾರತ ಭೇಟಿ ಮಹತ್ವಪೂರ್ಣವಾದದ್ದು. ವೆನೆಜುವೆಲಾ ಮತ್ತು ಚವೇಝ್ ಇಂದಿನ ಜಗತ್ತಿನಲ್ಲಿ ಹೊಂದಿರುವ ಮಹತ್ವದ ಪಾತ್ರವನ್ನು ಮೆಚ್ಚಿರುವ ಪ್ರಗತಿಪರ ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳು ಚವೇಝರನ್ನು ತುಂಬು ಮನಸ್ಸಿನಿಂದ ಸ್ವಾಗತಿಸುತ್ತಿವೆ. ಭಾರತ ಭೇಟಿಯ ಸಂದರ್ಭದಲ್ಲಿ ದೆಹಲಿ, ಕಲ್ಕತ್ತಾ ಮತ್ತು ಬೆಂಗಳೂರಿಗೆ ಭೇಟಿ ನೀಡಲಿರುವ ಚವೇಝ್‌ಗೆ ಅಭೂತಪೂರ್ವ ಸ್ವಾಗತ ನೀಡಲು ಅವರು ಕಾದಿದ್ದಾರೆ. ಯುಪಿಎ ಸರ್ಕಾರ ಚವೇಝರ



ಚವೇಝ್

ಅಧಿಕೃತ ಭೇಟಿಯ ಸಂದರ್ಭ ಬಳಸಿ, ವೆನೆಜುವೆಲಾ ಜತೆ ಸಂಬಂಧ ಗಟ್ಟಿಗೊಳಿಸುತ್ತದೆ ಎಂದು ಆಶಿಸಬೇಕಾಗಿದೆ. ಅಧ್ಯಕ್ಷ ಚವೇಝ್ ತಮ್ಮ ವಿದೇಶ ಮತ್ತು ಇಂಧನ ಶಕ್ತಿ ಮಂತ್ರಿಗಳ ಜತೆ ಬರುತ್ತಿದ್ದಾರೆ. ಈ ಸಂದರ್ಭ ಬಳಸಿ ಭಾರತ ಮತ್ತು ವೆನೆಜುವೆಲಾಗಳು ಜ-15 ವೇದಿಕೆ ಮತ್ತು ಮೂರನೇ ಜಗತ್ತಿನ ದೇಶಗಳ ನಡುವೆ ಸಹಕಾರ ಹೇಗೆ ಬಲಪಡಿಸಲು ಯುಪಿಎ ಸರ್ಕಾರ ಬಳಸಿಕೊಳ್ಳಬೇಕು, ಚೀನಾ ಮಾಡಿದಂತೆ ವೆನೆಜುವೆಲಾದಲ್ಲಿ ತೈಲ ನಿಕ್ಷೇಪ ಹುಡುಕಲು ಉಭಯತ್ರ ಒಪ್ಪಂದ ಮಾಡಿಕೊಳ್ಳಬಹುದು.

ಇತ್ತೀಚಿನ ದಿನಗಳಲ್ಲಿ ಅಮೆರಿಕಾದ ಜತೆ ಮಾತ್ರ ಸಂಬಂಧ ಬಲಪಡಿಸುವ ಬಗ್ಗೆ, ದೂರಗಾಮಿ ಕೂಟ ರಚಿಸುವ ಬಗ್ಗೆ ನಮ್ಮ ವಿದೇಶಾಂಗ ಖಾತೆಗೆ ಗೀಳು. ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಬಹು-ಧ್ರುವೀಯತೆಗೆ ಬೆಂಬಲ ತೋರಿಸಲು ಇದು ಒಳ್ಳೆಯ ಅವಕಾಶ. ಅಲಿಪ್ತ ಚಳುವಳಿ ಮತ್ತು ಬಡದೇಶಗಳ ನಡುವೆ ಸಹಕಾರದಲ್ಲಿ ಅಧ್ಯಕ್ಷ ಚವೇಝ್ ರ ನಾಯಕತ್ವದಲ್ಲಿ ವೆನೆಜುವೆಲಾ ಮಹತ್ವದ ಪಾತ್ರ ವಹಿಸಲಿದೆ. ಚವೇಝ್‌ಗೆ 'ಲಾಲ್ ಸಲಾಂ' ಹೇಳಲು, ಸ್ವಾಗತಿಸಲು ಸಿದ್ಧರಾಗೋಣ!

ಸಿಪಿಐ(ಎಂ) 18ನೇ ಕರ್ನಾಟಕ ರಾಜ್ಯ ಸಮ್ಮೇಳನ ನಿರ್ಣಯಗಳು

ರಾಜ್ಯದಲ್ಲಿ ರೈಲು ಮಾರ್ಗಗಳ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ಆಗ್ರಹ

ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರದಲ್ಲಾಗಲಿ, ಬಿ.ಜೆ.ಪಿ ನೇತೃತ್ವದ ಸರಕಾರದಲ್ಲಾಗಲಿ ಕರ್ನಾಟಕ ರಾಜ್ಯದಿಂದಲೇ ಹಲವಾರು ಮಂತ್ರಿಗಳು ಆಗಿಹೋಗಿದ್ದರೂ ಅನೇಕ ರೈಲ್ವೆ ಕಾಮಗಾರಿಗಳು ನೆನೆಗುದಿಗೆ ಬಿದ್ದಿವೆ. ಮಂಗಳೂರು- ಹಾಸನ ಬೆಂಗಳೂರು, ಬಿಜಾಪುರ - ಗದಗ ಬ್ರಾಡ್‌ಗೇಜ್, ಚಾಮರಾಜನಗರ - ಮೆಟ್ಟುಪಾಲ್ಯ ಮೊದಲಾದ ರೈಲು ಮಾರ್ಗಗಳ ಕಾಮಗಾರಿಗಳು ಹಲವಾರು ದಶಕಗಳಿಂದ ಬಾಕಿ ಉಳಿದಿವೆ. ಇದರಲ್ಲಿ ಬಿಜಾಪುರದಿಂದ ಹಾದು ಹೋಗುವ ಸೋಲಾಪುರ- ಗದಗ ಮೀಟರ್‌ಗೇಜ್ ಮಾರ್ಗ 1880 ರಲ್ಲಿ ಆರಂಭವಾಗಿದ್ದು, ದೇಶದಲ್ಲಿ ಮೂರನೆಯ ರೈಲು ಮಾರ್ಗವಾಗಿತ್ತು. ಈ ಮಾರ್ಗ ದಕ್ಷಿಣ ಭಾರತದಿಂದ ದೆಹಲಿಗೆ ಹೋಗಲು ಸಮೀಪದ ಮಾರ್ಗವಾಗಲಿದೆ. 1998 ರ ಚುನಾವಣಾ ಪೂರ್ವದಲ್ಲಿ ಅಂದಿನ ಪ್ರಧಾನ ಮಂತ್ರಿ ಅಟಲ ಬಿಹಾರಿ ವಾಜಪೇಯಿಯವರು ಹುಬ್ಬಳ್ಳಿ - ಅಂಕೋಲ ರೈಲು ಮಾರ್ಗಕ್ಕೆ ಅಡಿಗಲ್ಲು ಹಾಕಿದ್ದರೂ ಯಾವುದೇ ಕಾಮಗಾರಿಗಳು ಪೂರ್ಣಗೊಳ್ಳಲಿಲ್ಲ. ರೈಲು ಮಾರ್ಗದ ಅಭಿವೃದ್ಧಿಯು ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಸಹಾಯವಾಗುತ್ತದೆ.

ಚಿಕ್ಕಬಳ್ಳಾಪುರ - ಚಿಂತಾಮಣಿ- ಶ್ರೀನಿವಾಸಪುರ ಮೂಲಕ ಸಂಚರಿಸುವ ಬಂಗಾರಪೇಟೆ - ಬೆಂಗಳೂರು ಬ್ರಾಡ್‌ಗೇಜ್ ಮಾರ್ಗ ಕೋಲಾರ ಜನತೆಯ ಬಹುದಿನಗಳ ಬೇಡಿಕೆ. ಅಂತೆಯೇ ರೇಷ್ಮೆ ಕೃಷಿಕರ ಹಿತಾಸಕ್ತಿಗಾಗಿ ಚಿಕ್ಕಬಳ್ಳಾಪುರದಿಂದ ಕದಿರಿ ಮತ್ತು ಪೆನುಕೊಂಡಗಳಿಗೆ ಬ್ರಾಡ್‌ಗೇಜ್ ಮಾರ್ಗದ ಅಗತ್ಯವಿದೆ. ಹೈದರಾಬಾದ್ ಮೂಲಕವಾಗಿ ಗುಲ್ಬರ್ಗ- ಬೆಂಗಳೂರು ಮಾರ್ಗದ ಅಗತ್ಯವಿದೆ. ಬೀದರ್- ಗುಲ್ಬರ್ಗ ಮಾರ್ಗ ಮಂಜೂರಾಗಿದ್ದರೂ ಹಣ ಬಿಡುಗಡೆಯಾಗಿಲ್ಲ. ಗುಲ್ಬರ್ಗಾದಲ್ಲಿ ವಿಭಾಗೀಯ ಕಛೇರಿ ಆರಂಭಿಸಿ, ನೈರುತ್ಯ ವಲಯಕ್ಕೆ ಸೇರಿಸುವ ಅಗತ್ಯವಿದೆ. ಅಂತೆಯೇ ಶಿವಮೊಗ್ಗ -ತಾಳಗುಪ್ಪ ರೈಲು ಮಾರ್ಗವನ್ನು ಬ್ರಾಡ್‌ಗೇಜಗೆ ಪರಿವರ್ತಿಸಿ ಕೊಂಕಣ ರೈಲ್ವೆಗೆ ಸೇರಿಸಬೇಕು.

ಬಸ್‌ಪ್ರಯಾಣ, ಸರಕು ಸಾಗಣೆ ದುಬಾರಿಯಾಗುತ್ತಿರುವ ಸಂದರ್ಭದಲ್ಲಿ ರೈಲು ಮಾರ್ಗಗಳ ಕೊರತೆಯಿಂದಾಗಿ ಬಡ ಮಧ್ಯಮ ವರ್ಗದ ಜನರು ಪರದಾಡುವಂತಾಗಿದೆ. ದಕ್ಷಿಣಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಮ್ಯಾಂಗನೀಸ್ ಅದಿರು, ಕೈಗಾರಿಕೆ ಅನಿಲ, ಪೆಟ್ರೋಲಿಯಂ ಇತ್ಯಾದಿ ಉತ್ಪಾದನೆಗಳು ಬೃಹತ್ ಲಾರಿಗಳ ಮೂಲಕ ರಸ್ತೆಗಳಲ್ಲಿ ಸಾಗುತ್ತಿರುವುದರಿಂದ ರಸ್ತೆಗಳು ದುರ್ಬಲವಾಗುತ್ತಿದ್ದು, ಸೇತುವೆಗಳು ಶಿಥಿಲಗೊಳ್ಳುತ್ತಿವೆ. ಘಾಟಿ ಪ್ರದೇಶಗಳಲ್ಲಿ ಅಪಘಾತ, ಟ್ರ್ಯಾಫಿಕ್ ಜ್ಯಾಮ್ ಹೆಚ್ಚುತ್ತಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಬಾಕಿಯಿರುವ ಎಲ್ಲ ರೈಲು ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸಬೇಕೆಂದು ಕರ್ನಾಟಕ ರಾಜ್ಯದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 18ನೇ ರಾಜ್ಯ ಸಮ್ಮೇಳನ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ಸೋಲಾಪುರ - ಗದಗ ಬ್ರಾಡ್‌ಗೇಜ್‌ಗಾಗಿ, 2003 ರಲ್ಲಿ 52 ದಿನಗಳ ನಿರಂತರ ಜಂಟಿ ಹೋರಾಟ ನಡೆದಿತ್ತು ಹಾಗೂ ಪಕ್ಷವು ಇದರಲ್ಲಿ ಸಕ್ರಿಯವಾಗಿ ಭಾಗವಹಿಸಿತ್ತು. ಅಂತೆಯೇ ಮಂಗಳೂರು - ಬೆಂಗಳೂರು ಮಾರ್ಗಕ್ಕಾಗಿ 40 ವರ್ಷಗಳ ಮೊದಲೇ ಅಂದಿನ ಕಮ್ಯೂನಿಸ್ಟ್ ಪಕ್ಷ ಹೋರಾಟ ನಡೆಸಿದ್ದು, ಇಂದಿಗೂ ಪ್ರಚಾರ, ಹೋರಾಟ ನಡೆಸುತ್ತಿದೆ. ಮೈಸೂರು - ವೈನಾಡು ಮಾರ್ಗಕ್ಕಾಗಿ ಕೇರಳದ ಹಾಗೂ ಕರ್ನಾಟಕದ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಜಂಟಿ ಹೋರಾಟ ನಡೆಸಿವೆ.

ಖಾಸಗಿ ಸಾರಿಗೆ ಸಂಸ್ಥೆಗಳು ತಮ್ಮ ಲಾಭಕೋರ ನೀತಿಯಿಂದ ರೈಲ್ವೆ ಮಾರ್ಗಗಳ ಅನುಷ್ಠಾನಕ್ಕೆ ಅಡ್ಡಿಯಾಗಿವೆ. ಆದ್ದರಿಂದ ಜನಪರ ಚಳುವಳಿ ಮಾತ್ರವೇ ತೀವ್ರ ಬದಲಾವಣೆ ತರುವುದು ಸಾಧ್ಯ.

ದರ ಹೆಚ್ಚಳವಿಲ್ಲದ ರೈಲ್ವೆ ಬಜೆಟ್ ಸ್ವಾಗತಾರ್ಹ-ಸಿಪಿಐ(ಎಂ)



ಪ್ರಯಾಣ ದರದಲ್ಲಿ ಮತ್ತು ಹಲವಾರು ವಸ್ತುಗಳ ಸಾಗಣೆ ದರದಲ್ಲಿಯಾವುದೇ ಹೆಚ್ಚಳವಿಲ್ಲದ 2005-06 ರ ರೈಲ್ವೆ ಬಜೆಟ್ಟನ್ನು ಸಿಪಿಐ(ಎಂ) ಬಹುತೇಕ ಸ್ವಾಗತಿಸಿದೆ . ಆದರೆ ಆಹಾರ ಸಾಮಾಗ್ರಿ, ಬೇಳೆಕಾಳುಗಳು ಮತ್ತು ಕೆಲವು ರಾಸಾಯನಿಕ ಗೊಬ್ಬರಗಳದ ಮೇಲೆ ತಂದ ಸಾರಿಗೆ ದರ ಹೆಚ್ಚಳದಿಂದ ಜನಸಾಮಾನ್ಯರಿಗೆ ತೊಂದರೆಯಾಗಲಿದೆ.

2004 -05 ರಲ್ಲಿ ರೈಲ್ವೆ ಪ್ರಗತಿಯನ್ನು ಸಾಧಿಸಿದ್ದು, ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ವಸ್ತುಗಳ ಸಾಗಾಣಿಕೆಯಲ್ಲಿ ಶೇ 7-6 ರಷ್ಟು ಹೆಚ್ಚಳವಾಗಿದೆ. ಇದು ಜಿಡಿಪಿಗಿಂತ ಹೆಚ್ಚಿದ್ದು, ಇದರಿಂದ ಮಾರುಕಟ್ಟೆಯಲ್ಲಿ ರೈಲ್ವೆಯ ಪಾಲಿನ ದರದಲ್ಲಿ ಏರಿಕೆ ಯಾಗಲಿದೆ. ವಿಶೇಷ ರೈಲ್ವೆ ಸುರಕ್ಷತಾ ನಿಧಿಯಿಂದ 12,138 ಕಿ.ಮಿ.ಉದ್ದದ ರೈಲ್ವೆ ಹಳಿಗಳನ್ನು ಬದಲಾಯಿಸಲು 10,149ಕೋಟಿ ರೂ, ಬಳಸಿಕೊಳ್ಳಲಾಗಿದೆ. ಇದು ಈ ವರ್ಷದಲ್ಲಿ 16,538 ಕಿ.ಮೀ .ದೂರದ ಹಳಿಯನ್ನು ಬದಲಾಯಿಸಬೇಕಂಬ ಗುರಿಯತ್ತಸಾಗುತ್ತಿದೆ. ಅಲ್ಲದೆ ರೈಲ್ವೆ ಬಂಡಿಗಳನ್ನು ಖರೀದಿಸಲು ಹೆಚ್ಚು ಹಣವನ್ನು ವ್ಯಯ ಮಾಡಲಾಗಿದ್ದು, ಸಂಚಾರ ವ್ಯವಸ್ಥೆಯನ್ನು ಉತ್ತಮಪಡಿಸಲಿದೆ.

ಆದರೆ ಹಣಕಾಸು ಬಜೆಟ್ ಇನ ಬೆಂಬಲ ಕಳೆದ ವರ್ಷ 4544 ಕೋಟಿರೂ, ಇದ್ದದ್ದು, ಮುಂದಿನ ವರ್ಷಕ್ಕೆ 3821 ಕೋಟಿರೂ ಗಳಿಗೆ ಇಳಿಸಲಾಗಿದೆ. ಇದರಿಂದ ಹಲವಾರು ಪ್ರದೇಶಗಳ ಮತ್ತು ಜನರ ಆಕಾಂಕ್ಷೆಗಳನ್ನು ಪೂರೈಸಲು ಸಾಧ್ಯವಾಗಿಲ್ಲ. ಇಂದಿನ ಇಡೀ ರೈಲ್ವೆ ವ್ಯವಸ್ಥೆಗಳ ಅಗತ್ಯಗಳಿಗೆ ಅನುಗುಣವಾಗಿ ಬದಲಾವಣೆ ತರವಂತಹ ಯೋಜನೆಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗದೇ ಇರುವುದು ಇನ್ನೊಂದು ಕೊರತೆ.



ನಕ್ಸಲೀಯರ ಹತ್ಯೆ


ಭಾವನಾತ್ಮಕ ರಂಜಿತ ವರದಿಗಳ ಮಹಾಪೂರ

ಶರತ್‌ಚಂದ್ರ


ಪಶ್ಚಿಮ ಘಟ್ಟದ ಕಾಡಿನಲ್ಲಿ ಎನ್‌ಕೌಂಟರ್‌ನಲ್ಲಿ ನಕ್ಸಲೀಯರು ಹಾಗೂ ಪಾವಗಡದಲ್ಲಿ ನಕ್ಸಲೀಯರಿಂದ ಪೊಲೀಸರು ಹತ್ಯೆಗೀಡಾದ ಘಟನೆಗಳ ಬಗ್ಗೆ ನಮ್ಮ ಪತ್ರಿಕೆ-ಟಿ.ವಿ. ಮಾಧ್ಯಮ ಹೇಗೆ ಸ್ಪಂದಿಸಿದವು? ಇಲ್ಲಿ ವಿವೇಚನೆ-ವಿಶ್ಲೇಷಣೆ ಇತ್ತೆ? ಅಥವಾ ಅತಿರಂಜಕತೆಯೇ? ಇವುಗಳು ಜನರ ಮೇಲೆ ಬೀರುವ ಗಂಭೀರ ಪರಿಣಾಮಗಳ ಬಗ್ಗೆ ಸ್ವಲ್ಪವಾದರೂ ಚಿಂತಿಸುವ ಜವಾಬ್ದಾರಿ ಇರಬೇಡವೆ? ಒಂದು ವಿಶ್ಲೇಷಣೆ

ಪಶ್ಚಿಮ ಘಟ್ಟದಲ್ಲಿ ಇಬ್ಬರು ನಕ್ಸಲೀಯರ ಎನ್‌ಕೌಂಟರ್ ಸಾವು, ಪಾವಗಡದಲ್ಲಿ ನಕ್ಸಲೀಯರಿಂದ ಪ್ರತೀಕಾರದಲ್ಲಿ ಪೊಲೀಸರ ಸಾವು - ಇವೆರೆಡು ಘಟನೆಗಳನ್ನು ಕರ್ನಾಟಕ ಪತ್ರಿಕೆಗಳು ಹೇಗೆ ನೋಡಿದವು? ಎಲ್ಲಾ ಪತ್ರಿಕೆಗಳು ಒಂದಲ್ಲ ಒಂದು ರೀತಿಯ ಭಾವನಾತ್ಮಕ ರಂಚಿತ ವರದಿ, ಲೇಖನಗಳನ್ನು ಪ್ರಕಟಿಸಿದವು. ಸಮಸ್ಯೆಯ ಒಟ್ಟಾರೆ ಹಿನ್ನೆಲೆ, ವಸ್ತು ನಿಷ್ಠ ವಿಶ್ಲೇಷಣೆ ಎಲ್ಲೂ ಕಾಣಲಿಲ್ಲ. ಈ ಗೊಂದಲದಲ್ಲಿ 'ಲಂಕೇಶ್ ಪತ್ರಿಕೆ' ಇಬ್ಭಾಗವಾಗಿದೆ. ಸಾಮಾನ್ಯ ಜನರ ಹಿತಾಸಕ್ತಿ ಮುಂದೊತ್ತುವ, ಪ್ರಜಾಸತ್ತಾತ್ಮಕ ಮೌಲ್ಯಗಳು ಬಲಗೊಳ್ಳುವ ಯಾವುದೇ ಬೆಳವಣಿಗೆ ಇಲ್ಲಿ ಕಂಡುಬರಲಿಲ್ಲ. ಪತ್ರಿಕೆಗಳು ಅಂತಹ ವಿಷಯಗಳ ಬಗ್ಗೆ ತಲೆಕೆಡಿಸಿಕೊಂಡಿದ್ದು ಕಂಡುಬರಲಿಲ್ಲ.

ನಕ್ಸಲೀಯರ ಮೇಲೆ ಪೊಲೀಸರ ಹಿಂಸೆ, ಪೊಲೀಸರ ಮೇಲೆ ನಕ್ಸಲೀಯರ ಹಿಂಸೆ - ಸ್ವಾಭಾವಿಕವಾಗಿಯೇ ಕರ್ನಾಟಕ ಪತ್ರಿಕೆಗಳಲ್ಲಿ ದೊಡ್ಡ ಜಾಗ ಆಕ್ರಮಿಸಿತ್ತು. ಆದರೆ ಇಡೀ ಘಟನಾವಳಿಗಳನ್ನು ಪತ್ರಿಕೆಗಳು ಹೇಗೆ ನೋಡಿದವು, ಬಿಂಬಿಸಿದವು, ಅದರ ಒಟ್ಟು ಪರಿಣಾಮವೇನು? ಯಾವ ಮೌಲ್ಯಗಳನ್ನು ಎತ್ತಿ ಹಿಡಿದವು? ಯಾವುದರ ಬಗ್ಗೆ ಒತ್ತು ನೀಡಿದವು ಎನ್ನುವ ವಿಶ್ಲೇಷಣೆಯ ಪ್ರಯತ್ನ ಇದು.



'ಅಗ್ನಿ' ಪತ್ರಿಕೆಯು 'ಸಾಕೇತ್ ಸ್ಪೆಷಲ್' ಎಂಬ ವಿಶೇಷಾಂಕವನ್ನೇ ತಂದುಬಿಟ್ಟಿತು. ಅರ್ಧಕ್ಕಿಂತಲೂ ಹೆಚ್ಚು ಪತ್ರಿಕೆಯ ಪುಟಗಳನ್ನು ಮೀಸಲಾಗಿಟ್ಟಿತು. 'ಅಂದು ಭಗತ್ ಇಂದು ಸಾಕೇತ್', ಸಾಕೇತನನ್ನು 'ಚೆ' ಗೆ ಹೋಲಿಸುವ ಹಾಸ್ಯಾಸ್ಪದ ಅತಿರಂಜಿತ ಪ್ರಯತ್ನ ನಡೆದಿದೆ. ಸಾಕೇತನ ಖಾಸಗಿ ವಿವರಗಳು ತುಂಬಿದ್ದವು. ಅಭಿಮಾನಿಗಳ ಲೇಖನಗಳು ಇದ್ದವು. ಅಲ್ಲೊಂದು ಇಲ್ಲೊಂದು ವಿಶ್ಲೇಷಣೆಯ ತುಣಕೂ ಇರಲಿಲ್ಲವೆಂದಲ್ಲ. ಮುಂದಿನ 'ಅಗ್ನಿ' ಸಂಚಿಕೆಯಲ್ಲಿ ಭಾವನೆ ಸ್ವಲ್ಪ ಸರಿಸಿ, ವಿಶ್ಲೇಷಣಾತ್ಮಕ



ಎರಡು ಬರಹಗಳು ಕಂಡುಬಂದವು. ಭಾವನಾತ್ಮಕ ವರದಿಯನ್ನು ಅತಿರೇಕಕ್ಕೆ ಒಯ್ದ ಕೀರ್ತಿ 'ಹಾಯ್ ಬೆಂಗಳೂರ್' ಗೆ ಸಲ್ಲಬೇಕು. 'ಫೈರ್' ಎಂಬ ಶೀರ್ಷಿಕೆಯ ಜತೆ ಸಾಕೇತ್ ಶವದ ಫೋಟೋ ಮುಖಪುಟದ ತುಂಬಾ ಹೊತ್ತ ಪತ್ರಿಕೆ ಅದನ್ನು 'ಕ್ರೈಂ ಡೈರಿ'ಯ ಸಂಚಿಕೆಯಂತೆ ಬಿಂಬಿಸಿತು. 'ನಕ್ಸಲ್ ಎನ್‌ಕೌಂಟರ್' ನ ಪೂರ್ಣ ವಿವರಗಳನ್ನು ಕೊಟ್ಟಿತು. ಅದಲ್ಲದೆ 'ಅಗ್ನಿ'ಯಂತೆ ಸಾಕೇತ್‌ನ ಭಾವನಾತ್ಮಕ ವೈಯಕ್ತಿಕ ವಿವರಗಳು.

'ಲಂಕೇಶ್ ಪತ್ರಿಕೆ' ಯಂತೂ ಈಗ ಎಲ್ಲರಿಗೆ ಗೊತ್ತಿದ್ದ ಹಾಗೆ ಈ ಘಟನಾವಳಿಯ ಜತೆ ಇಬ್ಭಾಗವಾಗಿದೆ. ಲೇಖನ ತೆಗೆದುಹಾಕಿ ಬಂದ 'ಪತ್ರಿಕೆ' ಇಂದ್ರಜೀತ್‌ರ ಸಂಪಾದಕೀಯ ಮತ್ತು ರವೀಂದ್ರ ರೇಷ್ಮೆಯವರ 'ಗೌರಿಯೊಂದಿಗೆ ಸಂವಾದ' ಹೊತ್ತಿತ್ತು. 'ಪತ್ರಿಕೆ' ಪೂರ್ತಿಯಾಗಿ ಪೊಲೀಸರ ಮೇಲೆ ದಾಳಿ ಮಾಡಿ ಹತ್ಯೆ ಮಾಡಿದ್ದವರ ಮೇಲೆ ಅದನ್ನು ಖಂಡಿಸುವುದರ ಮೇಲೆ ಒತ್ತು ನೀಡಿತ್ತು. ಪೊಲೀಸರ ಶವದ ದೊಡ್ಡ ಫೋಟೋದ ಮುಖಪುಟ ಹೊತ್ತ ಸಂಚಿಕೆ ತನ್ನ ನಿಲುವು ಸ್ಪಷ್ಟಪಡಿಸಿತ್ತು. ಇದರ ಹಿಂದಿನ ಸಂಚಿಕೆ ಅಂದರೆ ನಕ್ಸಲೀಯರ ಹತ್ಯೆ ಸುದ್ದಿ ತಿಳಿಯುತ್ತಿದ್ದಂತೆ ಈ ಸಾವು ನ್ಯಾಯವೇ ಎಂದು ಲೇಖನವೊತ್ತು ಬಂದಿತ್ತು. ಅದು ಸಾಕೇತ್‌ನನ್ನು ಸಮರ್ಥಿಸುವ ಧಾಟಿಯೂ ಇತ್ತು.

ಸಂಘ ಪರಿವಾರದ ಬಲಪಂಥೀಯ ರಾಜಕೀಯ ಮಾರ್ದನಿಸುವ ತರಂಗ ಮತ್ತು ವಿಜಯಕರ್ನಾಟಕಗಳು ಸ್ವಾಭಾವಿಕವಾಗಿಯೇ ನಕ್ಸಲೀಯರ ಮೇಲೆ ಕಿಡಿಕಾರಿದವು. 'ಭೀತಿಯ ಮಡುವಲ್ಲಿ ಪಶ್ಚಿಮ ಘಟ್ಟ' 'ಸರ್ಕಾರ - ಬುದ್ಧಿಜೀವಿಗಳು - ನಕ್ಸಲರ ಮೇಲೆ ಉಕ್ಕಿ ಹರಿದ ಆಕ್ರೋಶ' ಎಂಬ ತಲೆಬರಹಗಳಲ್ಲಿ ತರಂಗ ತನ್ನ ಒಲವು ವ್ಯಕ್ತಪಡಿಸಿತು. 'ನಕ್ಸಲ್ ಅಟ್ಟಹಾಸ' ದ ಬಗ್ಗೆ ವಿವರಗಳನ್ನು ಪ್ರಕಟಿಸಿದವು.

ಸುಧಾ, ಪ್ರಜಾವಾಣಿಗಳು ಸಾಮ್ರಾಜ್ಯಶಾಹಿ ಮಾಧ್ಯಮಗಳು ಮಾಡುವಂತೆ ಗಣ್ಯರ, ಓದುಗರ ಅಭಿಪ್ರಾಯ ಪ್ರಕಟಿಸಿದವು. ವಿಶ್ಲೇಷಣೆ ಸಹ ಪ್ರಕಟಿಸಿದೆ.

ಹಿಂಸಾಚಾರದ ಮ್ಯಾಚೀ?

ಎಲ್ಲಾ ಪತ್ರಿಕೆಗಳಲ್ಲಿ ಅಲ್ಲಿ ಇಲ್ಲಿ ಪ್ರಕಟಿಸಿದ ವಿಶ್ಲೇಷಣೆಯ ಹೂರಣ ಏನು? ಕೆಲವು ಸಾಮಾನ್ಯ ಅಂಶಗಳನ್ನು ಗುರುತಿಸಬಹುದು. ಹೆಚ್ಚಿನವು ಈ ಸಮಸ್ಯೆಯನ್ನು ಜನರ ಒಟ್ಟಾರೆ ಹಿತಾಸಕ್ತಿಗಳ ದೃಷ್ಟಿಯಿಂದ ನೋಡಲಿಲ್ಲ. ನಕ್ಸಲೀಯರು ಮತ್ತು ಸರ್ಕಾರದ ನಡುವೆ ನಡೆಯುತ್ತಿರುವ ಹಿಂಸಾಚಾರದ ಮ್ಯಾಚ್ ಮಧ್ಯೆ ನಾವೆಲ್ಲಾ ಮೂಕ ಪ್ರೇಕ್ಷಕರು. ಒಂದಲ್ಲ ಇನ್ನೊಂದು ದೇವರಿಗೆ 'ಜೈ' ಎನ್ನುವ ನಿಯಮಗಳನ್ನು ಪಾಲಿಸಿ, 'ಕೆಟ್ಟ ಆಟ' ಆಡಬೇಡಿ ಎನ್ನುವಂತಹ ಧೋರಣೆ ಇತ್ತು. ನಕ್ಸಲ್‌ವಾದಿಗಳು ಮತ್ತು ಸರ್ಕಾರಕ್ಕೆ ಬೇಕಾಗಿರುವುದೂ ಇದೆ? ಹಿಂಸೆ-ಅಹಿಂಸೆ, ನಮ್ಮ ಪ್ರಜಾಪ್ರಭುತ್ವ - ಸಂವಿಧಾನಗಳ ಬಗ್ಗೆ 'ಲೆಕ್ಚರ್' ಗಳು ಸ್ವಾಭಾವಿಕವಾಗಿಯೇ ದಂಡಿಯಾಗಿದ್ದವು. ಈ ಒಟ್ಟಾರೆ ಬೆಳವಣಿಗೆಯ ಪರಿಣಾಮ ಜನರ ಹಿತಾಸಕ್ತಿಗಳ ಮೇಲೆ ಏನಾಗಬಹುದು? ಜನರ ನಿಜವಾದ ಸಮಸ್ಯೆಗಳ ಪರಿಹಾರದತ್ತ ಇವು ಏನು ಮಾಡುತ್ತವೆ? ಎಲ್ಲೂ ನಕ್ಸಲೀಯರ ಹಿಂಸಾಚಾರ ಬಳಸಿ, ಎಲ್ಲಾ ಪ್ರಜಾಸತ್ತಾತ್ಮಕ ಹೋರಾಟ, ಚಳುವಳಿಗಳ ಮೇಲೆ ಬೇಕಾಬಿಟ್ಟಿ ದಮನ ಮಾಡುವ ಸಾಧ್ಯತೆ ಉದ್ದೇಶದ ಬಗ್ಗೆ ಚಕಾರವೆತ್ತಿಲ್ಲ.

ಇನ್ನೊಂದು ಸಾಮಾನ್ಯ ಅಂಶವೆಂದರೆ ಎಡ-ಕಮ್ಯುನಿಸ್ಟ್ ಚಳುವಳಿಗಳ ಇತಿಹಾಸ, ಪ್ರಸ್ತುತ ಬಲಾಬಲಗಳ ಬಗ್ಗೆ ಪ್ರಕಟಿಸಿದ ಅಜ್ಞಾನ, ತಿಳುವಳಿಕೆಯ ಅಭಾವ. ಎಡ-ಕಮ್ಯುನಿಸ್ಟ್ ಚಳುವಳಿಗಳು ನಕ್ಸಲಿಯರೇ ಮುಖ್ಯಧಾರೆ ಎನ್ನುವಂತೆ ಬಿಂಬಿಸಿದವು. ನಕ್ಸಲೀಯರನ್ನು ಬಿಟ್ಟರೆ ಕಮ್ಯುನಿಸ್ಟ್ ಚಳುವಳಿ ರಾಜ್ಯದಲ್ಲಿ, ದೇಶದಲ್ಲಿ ಇಲ್ಲವೇ ಇಲ್ಲವೇನೋ ಎನ್ನುವಂತೆ. ನಕ್ಸಲೀಯರಿಗೂ ಇತರ ಜನರ ಮೇಲೆ ಆಧಾರಿತ ಎಡ-ಕಮ್ಯುನಿಸ್ಟ್ ಚಳುವಳಿಗಳು, ಪಕ್ಷಗಳ ನಡುವೆ ವ್ಯತ್ಯಾಸಗಳ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳಲಿಲ್ಲ. 'ಕ್ರಾಂತಿಯ ಹೆಸರು ಹೇಳಿಕೊಂಡೇ ಅಧಿಕಾರಕ್ಕೆ ಬಂದಿದ್ದ ಮಾರ್ಕ್ಸಿಸ್ಟ್ ಸರ್ಕಾರ ಭೂಮಿ ಕೇಳಿದ ಆದಿವಾಸಿಗಳ ಮೇಲೆ ಪೊಲೀಸರನ್ನು ಛೂ ಬಿಟ್ಟಿತು. ಕೇಂದ್ರದ ಕಾಂಗ್ರೆಸ್ ಸರ್ಕಾರ ಈ ನಿರ್ದಯ ದಮನದ ವಿರುದ್ಧ ದನಿಯೆತ್ತಿತು. (ತರಂಗ, ಮಾರ್ಚ್ 3, 2005) 1964 ರಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷ ಸೈದ್ಧಾಂತಿಕ ಕಾರಣಗಳಿಂದ ವಿಭಜನೆಯಾದಾಗ, ವಿಭಜಿತ ಗುಂಪು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವಾಗಿ ರೂಪು ತಳೆಯಿತು. ವರ್ಗ ಸಂಘರ್ಷ ಹಾಗೂ ಜಮೀನುದಾರ ಮುಷ್ಟಿಯಲ್ಲಿರುವ ಭೂಮುಕ್ತಿಯೇ ಪರಮಗುರಿಯಾಗಿರುವ ಈ ಸಂಘಟನೆಯ ಬೆಳವಣಿಗೆ ಹಾದಿಯಲ್ಲಿ ಅಲ್ಲಲ್ಲಿ ಶಸ್ತ್ರ ಹಿಡಿದು ಹೋರಾಟ ನಡೆಸಬೇಕಾದ ಘಟ್ಟ ತಲುಪಿದೆ (ಸುದಾ: 24 ಫೆಬ್ರವರಿ). ಇಂತಹ ಅಣಿಮುತ್ತುಗಳಿಗೆ ಕೊರತೆ ಇಲ್ಲ.

ಸಾಧನೆಯತ್ತ ಸಾನಿಯಾ ಮಿರ್ಜಾ

ಸಾನಿಯಾ ಮಿರ್ಜಾ ಭಾರತ ಕ್ರೀಡಾರಂಗದ ಸದಾ ಸರ್ಮಣಿಯ ಕ್ರೀಡಾಪಟು. ಭಾರತದ ಕ್ರೀಡಾರಂಗ ಜಗತ್ತಿನ ಎದುರು ಮತ್ತೆ ಮತ್ತೆ ತೊಡರುತ್ತಿರುವಾಗ ಈ ಸಾನಿಯಾ ಭಾರತದ ಟೆನ್ನಿಸ್ ರಂಗಕ್ಕೆ ಎತ್ತರದ ಗೌರವ ತಂದುಕೊಟ್ಟಿದ್ದಾರೆ.

ಭಾರತದಲ್ಲಿ ಕ್ರೀಡೆಯೆಂದರೆ ಕೇವಲ ಕ್ರಿಕೆಟ್ ಮಾತ್ರ ಆಗಿರುವಾಗ ಕ್ರಿಕೆಟಿಗರಿಗಷ್ಟೆ ಗೌರವ, ಹಣ ಮತ್ತು ಎಲ್ಲಾ ಪ್ರೋತ್ಸಾಹ ದಕ್ಕುತ್ತಿದೆ. ಇಂತಹ ಸಂದರ್ಭದಲ್ಲಿ ಅಥ್ಲೆಟಿಕ್ಸ್, ಹಾಕಿ, ಫುಟ್‌ಬಾಲ್, ವಾಲಿಬಾಲ್ ಹೀಗೆ ಎಲ್ಲಾ ಕ್ರೀಡೆಗಳು ಸೊರಗುತ್ತಿವೆ. ಇಂತಹ ಸನ್ನಿವೇಶದಲ್ಲಿ ಹೈದ್ರಾಬಾದಿನ ಈ ಸಾನಿಯಾ ಮಿರ್ಜಾ ಆಸ್ಟ್ರೇಲಿಯಾದ ಓಪನ್ ಟೆನಿಸ್ ಮಹಿಳೆಯರ ಸಿಂಗಲ್ಸ್‌ನಲ್ಲಿ 3ನೇ ಸುತ್ತಿನಲ್ಲಿ ಆಡುವ ಅರ್ಹತೆ ಪಡೆದ ಮೊದಲ ಭಾರತೀಯ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅದಕ್ಕಿಂತಲೂ ಭಾರತೀಯ ಕ್ರೀಡಾಪ್ರೇಮಿಗಳು ಹೆಮ್ಮೆ ಪಡುವಂತೆ ಹೈದರಾಬಾದ್ ಓಪನ್ ಮಹಿಳಾ ಟೆನಿಸ್ ಪ್ರಶಸ್ತಿ ಗೆದ್ದು, ಜಾಗತಿಕ ಕ್ರೀಡಾರಂಗದಲ್ಲಿ ಭಾರತಕ್ಕೆ ಗೌರವ ತಂದುಕೊಟ್ಟಿದ್ದಾರೆ.

ಹದಿನೆಂಟರ ಹರೆಯದ ಸಾನಿಯಾ ಮಿರ್ಜಾ ಈಗ ಭಾರತೀಯ ಕ್ರೀಡಾಭಿಮಾನಿಗಳ ಕಣ್ಮಣಿಯಾಗಿದ್ದಾರೆ. ಕೇವಲ ಕ್ರಿಕೆಟ್‌ಗಷ್ಟೇ ಪ್ರೇಕ್ಷಕರು ಸೇರುತ್ತಾರೆ ಎಂಬುವುದನ್ನು ಹೈದರಾಬಾದ್‌ನಲ್ಲಿ ನಡೆದ ಡಬ್ಲ್ಯುಟಿಎ ಟೆನಿಸ್ ಪಂದ್ಯಾವಳಿ ಹುಸಿಯಾಗಿಸಿದೆ. ಭಾರತದಲ್ಲಿ ಟೆನ್ನಿಸ್‌ಗೂ ಭವಿಷ್ಯ ಇದೆ ಎಂಬುವುದು ಸಾಬೀತಾಗಿದೆ.

ಜಾಗತಿಕ ಕ್ರೀಡಾರಂಗದಲ್ಲಿ ಭಾರತವನ್ನು ಈಗ ಪ್ರತಿನಿಧಿಸುತ್ತಿರುವ ವಿಶ್ವನಾಥ ಆನಂದನ್, ಪಂಕಜ್ ಅಡ್ವಾನಿ, ಮಹೇಶ್ ಭೂಪತಿ, ಲಿಯಾಂಡರ್ ಪೇಸ್ ಮುಂತಾದವರ ಜೊತೆ ಈ ಸಾನಿಯಾ ಮಿರ್ಜಾ ಭಾರತದ ಪ್ರತಿಷ್ಠೆಯನ್ನು ಎತ್ತಿಹಿಡಿದಿದ್ದಾರೆ. ಕಳೆದ ವರ್ಷ ಟೆನಿಸ್ ಶ್ರೇಯಾಂಕದಲ್ಲಿ ನಾನೂರರ ಗಡಿಯಲ್ಲಿದ್ದ ಈ ಟೆನಿಸ್ ಆಟಗಾರ್ತಿ ಈ ಎರಡು ಟೂರ್ನಿಗಳಲ್ಲಿ ಅಗ್ರಶ್ರೇಯಾಂಕದ ಸೆರೆನಾ ವಿಲಿಯಮ್ ಅಂತಹ ಆಟಗಾರ್ತಿಗೂ ಸ್ಪರ್ದೆ ನೀಡಿ ಈಗ 99ನೇ ಶ್ರೇಯಾಂಕ ಪಡೆದಿದ್ದಾರೆ. ಅಲ್ಲದೆ ಹೆಸರಾಂತ ಗ್ರ್ಯಾನ್ ಸ್ಲಾಮ್‌ಗಳಾದ ಫ್ರೆಂಚ್ ಓಪನ್, ವಿಂಬಲ್ಡನ್, ಅಮೇರಿಕಾ ಓಪನ್



ಟೆನಿಸ್ ಚಾಂಪಿಯನ್‌ಷಿಪ್‌ಗಳಿಗೆ ನೇರ ಪ್ರವೇಶ ಪಡೆಯುವ ಅರ್ಹತೆ ಕೂಡ ಗಳಿಸಿಕೊಂಡಿದ್ದಾರೆ. ಅವರ ಈ ಸಾಧನೆ ಇನ್ನಷ್ಟು ಎತ್ತರಕ್ಕೆ ಬೆಳೆಯುವ ಸಾಧ್ಯತೆ ಇದೆ.

ಸಾನಿಯಾ ಮಿರ್ಜಾರ ಈ ಸಾಧನೆ ಭಾರತ ಟೆನ್ನಿಸ್ ರಂಗದಲ್ಲಿ ಹೊಸ ಇತಿಹಾಸ ನಿರ್ಮಿಸಿದೆ. **ಇಂದು ಸಾನಿಯಾ ಎಂದರೆ ಭಾರತ ಟೆನ್ನಿಸ್ ರಂಗಕ್ಕೆ ಹಾಗೂ ಭಾರತೀಯ ಕ್ರೀಡಾಪಟುಗಳಿಗೆ ಹೊಸ ಹುರುಪು ನೀಡಿದೆ.**

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್. ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
... State Committee, Editor: S.Y. GURUSHANTH